ರಂಜನೆ ಬೋಧನೆ ಪ್ರಚೋದನೆ

ಗೌರಿ ಲಂಕೇಶ್

ಜನವರಿ 2, 2008 ರೂ. 10/-



ಪ್ರೇಮ್ ಭೂಮಿಮೇಲೆ ಇದಾನಾ?




ಸೆಕ್ಸ್ ಸಿಡಿ ಹಗರಣ

ಮೈಸೂರು

ಟೆಲಿಕಾಂ ಲೇಔಟ್

300 ಕೋಟಿ ಗುಳುಂ



ಅಶೋಕ್ ಪೈ ಶರಣಾದನೇಕೆ?



ನಿಮ್ಮ ಶಾಸಕರು ಕಡಿದಿದ್ದೇನು?

ಸೇಡಂ, ಬಾದಾಮಿ, ಕೊಪ್ಪಳ, ತುರುವೇಕೆರೆ

ICICI ಬ್ಯಾಂಕ್ ಎಂಬ ಜೇಡವೂ ರೈತರೆಂಬ ನೊಣಗಳೂ!

ICICI ಬ್ಯಾಂಕ್ ಎಂಬ ಜೇಡವೂ, ರೈತರೆಂಬ ನೊಣಗಳೂ!

ಚಾರ್ವಾಕ

- ಶಿವಸುಂದರ್ -

ಕಳೆದ ಒಂದು ತಿಂಗಳಲ್ಲಿ ICICI ಬ್ಯಾಂಕ್ ನೀಡಿದ ಸಾಲ ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಂಡ ಹೊಸಪುರದ ಮಂಜುನಾಥ ಮತ್ತು ಹರವು ಸಿದ್ದರಾಜುವಿನ ಕಥೆಗಳು ಲಿಬೆನೆಕ್ಸ್ ಎಂಬ ಜರ್ಮನ್ ಕಮ್ಯುನಿಸ್ಟ್ ಅರವತ್ತು ವರ್ಷಗಳ ಕೆಳಗೆ ಬರೆದ "ಬಾ ನೊಣವೇ ಬಾ" ಎಂಬ ಕಥೆಯನ್ನು ಮತ್ತೆ ಮತ್ತೆ ನೆನಪಿಗೆ ತರುತ್ತದೆ. ಬಂಡವಾಳಶಾಹಿ ವ್ಯವಸ್ಥೆ ತಾನು ಶೋಷಿಸುವ ದುಡಿಯುವ ಜನರೇ ತನ್ನತ್ತ ಆಕರ್ಷಿತವಾಗಿ ಬಂದು ಬೀಳುವಂತೆ ಮಾಡುತ್ತದೆ ಎಂದು ಆ ಕತೆ ವಿವರಿಸುತ್ತದೆ.

ICICI ಬ್ಯಾಂಕ್ ನೀಡಿದ 'ಟ್ರಾಕ್ಟರ್ ಸಾಲ ತಮ್ಮನ್ನು ಸುಲಿಯಲೆಂದೇ ಹೆಣೆಯಲಾಗಿರುವ ಜೇಡರ ಬಲೆಯೆಂದು ಅರಿಯದೇ ಹೋದ ಈ ಇಬ್ಬರು ನತದೃಷ್ಟ ಅಮಾಯಕ ರೈತರು ಆ ಸಾಲದ ಬಲೆಯಿಂದ ಹೊರಬರಲಾಗದೆ ಪ್ರಾಣವನ್ನೇ ತೆತ್ತಿದ್ದಾರೆ. ಆದ್ದರಿಂದಲೇ ಇದನ್ನು ಆತ್ಮಹತ್ಯೆ ಎಂದು ಕರೆಯುವುದೇ ತಪ್ಪು. ಜೇಡ ಹೇಗೆ ಬಲೆ ನೇಯುವುದು ನೊಣಗಳ ಬೇಟೆಗಾಗಿಯೋ ಹಾಗೆ ICICI ಬ್ಯಾಂಕ್ ಹಾಗೂ ಇನ್ನಿತರ ಖಾಸಗಿ ಬ್ಯಾಂಕುಗಳು ಟ್ರಾಕ್ಟರ್ ಮತ್ತಿತರ ಸಾಲದ ಯೋಜನೆ ಹಾಕಿರುವುದೇ ರೈತರನ್ನು ಸುಲಿಯಲು. ಏಕೆಂದರೆ ಆ ಬ್ಯಾಂಕುಗಳ ಟ್ರಾಕ್ಟರ್ ಸಾಲ ಯೋಜನೆಯ ಹಿಂದೆ ಸಾಲ ನೀಡಿ ನಿರಂಕುಶವಾಗಿ ಬಡ್ಡಿ ಸುಲಿಯುವ ಮತ್ತು ಟ್ರಾಕ್ಟರ್ ಕಂಪನಿಗೆ ಮಾರುಕಟ್ಟೆ ಒದಗಿಸುವ ಕುತಂತ್ರವೇ ಹೆಚ್ಚಿದೆ. ಇದು ಖಾಸಗಿ ಬ್ಯಾಂಕುಗಳು ಸಹ ಕನಿಷ್ಠ ಶೇ.18ರಷ್ಟು ಸಾಲವನ್ನು ಗ್ರಾಮೀಣ ಕ್ಷೇತ್ರಕ್ಕೆ ಕಡ್ಡಾಯ ವಾಗಿ ನೀಡಲೇಬೇಕೆಂಬ ರಿಸರ್ವ್ ಬ್ಯಾಂಕಿನ ಆದೇಶವನ್ನು ಅವರು ಅನುಷ್ಠಾನಕ್ಕೆ ತರುತ್ತಿರುವ ರೀತಿ! ಏಕೆಂದರೆ ರೈತರಿಗೆ ನೀಡಲಾಗುವ ಯಾವುದೇ ಸಾಲಗಳು ರೈತರ ಉತ್ಪಾದಕತೆಯನ್ನು ಹೆಚ್ಚಿಸುವ ಸಲಹೆಗಳು ಮತ್ತು ಯೋಜನೆಗಳ ಜೊತೆ ಜೊತೆಗೆ ಅನುಷ್ಠಾನಕ್ಕೆ ಬರುತ್ತಿದ್ದವು. ಆದರಿಂದ ರೈತರ ಉದ್ಧಾರ ಎಷ್ಟಾಗುತ್ತಿತ್ತು ಎಂಬುದು ಬೇರೆಯೇ ಮಾತಾದರೂ ಕನಿಷ್ಠ ಒಂದು ಯೋಜನೆ ಮತ್ತು ಸಲಹೆಯಾದರೂ ಇರು ತ್ತಿತ್ತು. ಆದರೆ ICICI ಬ್ಯಾಂಕ್ ನೀಡುವ ಟ್ರಾಕ್ಟರ್ ಸಾಲದ ಯೋಜನೆಯ ಹಿಂದೆ ಆ ಬಗೆಯ ಯಾವುದೇ ಸಲಹೆಗಳೂ ಇಲ್ಲ, ಯೋಜನೆಗಳೂ ಇಲ್ಲ. ಅವು ಅಗತ್ಯವಿದ್ದರೂ, ಇಲ್ಲದಿದ್ದರೂ ಸಾಲ ಕೊಟ್ಟು ಬಡ್ಡಿ ಹೀರುವ; ಟ್ರಾಕ್ಟರ್ ಮಾರಿ ಲಾಭ ಮಾಡುವ ಬ್ಯಾಂಕ್ ಮತ್ತು ಟ್ರಾಕ್ಟರ್ ಕಂಪನಿ ಕುತಂತ್ರವಲ್ಲದೆ ಮತ್ತೇನಲ್ಲ.

ಆತ್ಮಹತ್ಯೆ ಮಾಡಿಕೊಂಡ ಹೊಸಪುರದ ಮಂಜುನಾಥನ ಅಥವಾ ಹರವೆ ಸಿದ್ದರಾಜುವಿನ ಕಥೆಯನ್ನೇ ನೋಡಿ. ಜೊತೆಗೆ ಅವರಂತೆ ಟ್ರಾಕ್ಟರ್ ಕೊಂಡು ಸಾಯಲೂ ಆಗದೆ ಬದುಕಲೂ ಆಗದೆ ಒದ್ದಾಡುತ್ತಿರುವ ಇತರ ರೈತರ ಪರಿಸ್ಥಿತಿಯನ್ನೇ ನೋಡಿ. ಟ್ರಾಕ್ಟರ್ ಅವರ ಬದುಕನ್ನು ಹಸನು ಮಾಡುವ ಬದಲು ಬರ್ಬರಗೊಳಿಸಿದೆ. ಒಂದು ಸಾವಿರ ಜನಸಂಖ್ಯೆಯಿರುವ ಮಂಜುನಾಥರ ಹೊಸಪುರದಲ್ಲಿ 10 ಟ್ರಾಕ್ಟರ್‌ಗಳಿವೆ. ಬಲಿಯಾದ ಮತ್ತೊಬ್ಬ ರೈತ ಹರವು ಸಿದ್ದರಾಜುವಿನ ಚಾಮರಾಜನಗರ ಜಿಲ್ಲೆಯಲ್ಲಿ ಮುನ್ನೂರು ಹಳ್ಳಿಗಳಿದ್ದರೆ ಕಳೆದ ನಾಲ್ಕು ವರ್ಷಗಳಲ್ಲಿ 4000 ಟ್ರಾಕ್ಟರ್‌ಗಳು ಮಾರಾಟವಾಗಿವೆ. ಅದೇ ರೀತಿ ಹೊಸದಾಗಿ ನೀರಾವರಿಗೆ ಒಳಪಟ್ಟ ಗುಲ್ಬರ್ಗ ಜಿಲ್ಲೆಯಲ್ಲಿ 1200 ಹಳ್ಳಿಗಳಿದ್ದರೆ 12000 ಟ್ರಾಕ್ಟರ್‌ಗಳು ಮಾರಾಟವಾಗಿವೆ. ಅಂದರೆ ಪ್ರತಿ ನೂರಿನ್ನೂರು ರೈತರಿಗೊಂದು ಟ್ರಾಕ್ಟರ್‌ಗಳಿವೆ. ಮತ್ತು ಕಳೆದ ನಾಲ್ಕು ವರ್ಷಗಳಲ್ಲಿ ರೈತರು ಅದರಲ್ಲೂ ಹೊಸದಾಗಿ ನೀರಾವರಿ ಮಾಡಿಕೊಂಡ ರೈತರು ಕೊಂಡ ಪ್ರತಿ ಟ್ರಾಕ್ಟರ್‌ಗೂ ICICI ಬ್ಯಾಂಕ್ ಸಾಲ ನೀಡಿದೆ. ಆದರೆ ಟ್ರಾಕ್ಟರ್‌ಗಳು ಕೃಷಿಯಲ್ಲಿ ರೈತರಿಗೆ ಸಹಾಯ ಮಾಡಬೇಕೆಂದರೆ ಅದರ ಜೊತೆ ಟಿಲ್ಲರ್‌ಗಳನ್ನು ಮತ್ತು ಟ್ರಾಲಿಗಳನ್ನು ಕೊಡಬೇಕು. ಆದರೆ ಈ ಬ್ಯಾಂಕು ಬಹುಪಾಲು ಪ್ರಕರಣಗಳಲ್ಲಿ ಅವನ್ನು ಕೊಡುವುದೇ ಇಲ್ಲ. ಜೊತೆಗೆ ಅವು ಹೆಚ್ಚಿನ ಪ್ರಯೋಜನವಾಗುವುದು ಕೃಷಿಗೆ ಬೇಕಾದ ಇತರ ಎಲ್ಲಾ ಅವಶ್ಯಕತೆಗಳು ಅಂದರೆ ನೀರು, ಬೀಜ, ಗೊಬ್ಬರ ಇತ್ಯಾದಿಗಳು ಪೂರೈಕೆಗೊಂಡಿದ್ದಾಗ ಮಾತ್ರ. ಕೃಷಿಗೆ ಮೂಲ ಅಗತ್ಯವಾದ ಅವೇ ಇಲ್ಲದಾಗ ಟ್ರಾಕ್ಟರ್ ಹೊರೆಯಾಗುತ್ತದೆಯೇ ವಿನಃ ಬವಣೆ ನೀಗಿಸುವ ಸಾಧನವಾಗುವುದಿಲ್ಲ.

ಉದಾಹರಣೆಗೆ ಹೊಸಪುರದ ಮಂಜುನಾಥನಿಗೆ ಇದ್ದದ್ದೇ ಐದು ಎಕರೆ ಒಣಭೂಮಿ. ಅದರಲ್ಲಿ ಬೆಳೆಯುತ್ತಿದ್ದದ್ದು ರಾಗಿ ಮತ್ತು ಸೂರ್ಯಕಾಂತಿ. ನೀರಾವರಿಗೆಂದು ಹೆಚ್ಚು ವೆಚ್ಚ ಮಾಡಲು ಅಶಕ್ತನಾಗಿದ್ದ ಮಂಜುನಾಥನಿಗೆ ICICI ಬ್ಯಾಂಕ್ ಕೊಟ್ಟ ಟ್ರಾಕ್ಟರ್ ಯಾವ ರೀತಿ ಸಹಾಯ ಮಾಡುತ್ತದೆ? ಆ ಊರಿನಲ್ಲಿ ನೀರಾವರಿ ಸೌಲಭ್ಯ ಇರುವ ರೈತರಿಗೆ ತನ್ನ ಟ್ರಾಕ್ಟರನ್ನು ಬಾಡಿಗೆಗೆ ಕೊಡಬಹುದು ಅಥವಾ ಟ್ರಾಲಿಯಿದ್ದರೆ ಕೂಲಿಗಳನ್ನು ಸಾಗಿಸಲು ಉಪಯೋಗಿಸಬಹುದು. ಆದರೆ ನೀರಾವರಿ ಸೌಲಭ್ಯವಿದ್ದು ಟ್ರಾಕ್ಟರ್ ಅಗತ್ಯವಿರುವ ರೈತರಿಗೆ ICICI ಬ್ಯಾಂಕ್ ಈಗಾಗಲೇ ಟ್ರಾಕ್ಟರ್ ಕೊಡಿಸಿರುತ್ತಿತ್ತು, ಬ್ಯಾಂಕುಗಳು ಟ್ರಾಕ್ಟರ್ ಜೊತೆಗೆ ಟ್ರಾಲಿ ಕೊಡದೇ ಮೋಸ ಮಾಡಿದ್ದವು. ಮಂಜುನಾಥನಂಥ ಸಣ್ಣ ರೈತರಿಗೆ ತಾವೇ ಟ್ರಾಲಿ ಕೊಳ್ಳಲು ಸಾಧ್ಯವಿಲ್ಲ, ಹೀಗಾಗಿ ಆ ಟ್ರಾಕ್ಟರ್‌ಗಳೂ ಯಾವುದೇ ರೀತಿ ಪೂರಕ ಆದಾಯವನ್ನು ತಂದುಕೊಡದೆ ಮನೆಯ ಮುಂದೆ ತುಕ್ಕು ಹಿಡಿಯಲು ಪ್ರಾರಂಭಿಸಿದ್ದು ಮಾತ್ರವಲ್ಲದೆ ಬಡ್ಡಿಯ ಭೀತಿಯನ್ನೂ ಹೆಚ್ಚಿಸಿದವು ಅಷ್ಟೆ.

ಆದರೆ ರೈತರಿಗೆ ಪ್ರಯೋಜನವಿಲ್ಲವೆಂದರೂ, ರೈತರನ್ನು ಆತ್ಮಹತ್ಯೆಗೆ ದೂಡುತ್ತಿದ್ದರೂ ICICIನಂತಹ ಖಾಸಗಿ ಬ್ಯಾಂಕ್‌ಗಳು ರೈತರನ್ನೇಕೆ ಸಾಯಿಸುತ್ತಿವೆ? ಅದಕ್ಕೆ ಸರ್ಕಾರವೇಕೆ ಅವಕಾಶ ಮಾಡಿಕೊಡುತ್ತಿದೆ?

1991ರಲ್ಲಿ ಪ್ರಾರಂಭವಾದ ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣ ನೀತಿಗಳು ಹಣಕಾಸು ಕ್ಷೇತ್ರವನ್ನು ಸಂಪೂರ್ಣವಾಗಿ ಲಾಭಕೋರ ಕ್ಷೇತ್ರವನ್ನಾಗಿ ಪರಿವರ್ತಿಸಿವೆ. ಈ ಹಿಂದೆ ಬಡರೈತರಿಗೆ ಮತ್ತು ಕೃಷಿ ಕ್ಷೇತ್ರಕ್ಕೆ ಸಿಗುತ್ತಿದ್ದ ಸುಲಭ ದರದ ಸಾಲಗಳನ್ನು ಸಿಗದಂತೆ ಮಾಡಿವೆ. ಅಷ್ಟು ಮಾತ್ರವಲ್ಲದೆ ಬ್ಯಾಂಕುಗಳ ಖಾಸಗೀಕರಣವಾದ ನಂತರ ಮತ್ತು ಸಾಲ ಮಾರುಕಟ್ಟೆಯ ಕ್ಷೇತ್ರಕ್ಕೆ ಖಾಸಗಿ ಬ್ಯಾಂಕುಗಳ ಪ್ರವೇಶವಾದ ನಂತರ ಸಾಲ, ಬಡ್ಡಿ, ಆದ್ಯತಾ ಸಾಲ ಇನ್ನಿತ್ಯಾದಿ ಎಲ್ಲಾ ವಿಷಯಗಳಲ್ಲಿ ಇದ್ದಷ್ಟು ಜನಪರ ನೀತಿಗಳು ಸಂಪೂರ್ಣವಾಗಿ ಬದಲಾಗಿ ಲಾಭದಾಯಕತೆ ಏಕೈಕ ಮಾನದಂಡವಾಗಿಬಿಟ್ಟಿದೆ. ಅದರ ಭಾಗವಾಗಿಯೇ 2002-03ರಲ್ಲಿ ಗ್ರಾಹಕರಿಗೆ ನೀಡುವ ಸಾಲವನ್ನು ವಸೂಲು ಮಾಡಲು ಬ್ಯಾಂಕುಗಳು ಸಾಲ ವಸೂಲಾತಿಯನ್ನು ಹೊರಗುತ್ತಿಗೆಗೆ ಕೊಡುವ ಅಂದರೆ ಗೂಂಡಾ ಗ್ಯಾಂಗುಗಳನ್ನು ನೇಮಿಸಿಕೊಳ್ಳುವ ಅವಕಾಶವನ್ನು ನೀಡಲಾಯಿತು. ಇದರ ಸಂಪೂರ್ಣ ಪ್ರಯೋಜನ ಪಡೆದದ್ದು ICICI ಬ್ಯಾಂಕ್. 2006-07ರಲ್ಲಿ ಆ ಬ್ಯಾಂಕಿನ ನಿವ್ವಳ ಆದಾಯ 3,100 ಕೋಟಿ ರೂಪಾಯಿಗಳಾಗಿದ್ದರೆ ಅದರಲ್ಲಿ ಶೇ.30ರಷ್ಟು ಗ್ರಾಹಕರಿಗೆ ನೀಡಿದ ಸಾಲ ಅಧಿಕ ಬಡ್ಡಿ ಹಾಕಿ ಬಲವಂತದಿಂದ ವಸೂಲು ಮಾಡಿದ್ದರಿಂದ ಬಂದದ್ದು.

ಈ ಬ್ಯಾಂಕು ಸಾಲ ನೀಡಲು ಫಲಾನುಭವಿಗಳನ್ನು ಗುರುತಿಸಲೂ ಏಜೆಂಟರನ್ನು ನೇಮಿಸಿಕೊಳ್ಳುತ್ತದೆ ಮತ್ತು ಅದನ್ನು ವಸೂಲಿ ಮಾಡಲು ಗೂಂಡಾ ಗ್ಯಾಂಗುಗಳನ್ನು ಬಳಸಿಕೊಳ್ಳುತ್ತದೆ. ಇದು ನಗರದಲ್ಲಿ ನೀಡುವ ವಾಹನ ಸಾಲ, ಕ್ರೆಡಿಟ್ ಕಾರ್ಡ್ ಸಾಲ ಇನ್ನಿತ್ಯಾದಿಗಳನ್ನು ವಸೂಲಿ ಮಾಡಲು ಅನುಸರಿಸುತ್ತಿರುವ ತಂತ್ರಗಳಿಂದ ಕಳೆದ ಎರಡು ವರ್ಷಗಳಿಂದ ದೇಶಾದ್ಯಂತ ಮಧ್ಯಮ ವರ್ಗದ ಐದಾರು ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಮತ್ತು ದೇಶಾದ್ಯಂತ ICICI ಬ್ಯಾಂಕ್‌ನ ವಿರುದ್ಧ ಕನಿಷ್ಟ ಪಕ್ಷ 2000ಕ್ಕೂ ಹೆಚ್ಚು ಕೇಸುಗಳು ದಾಖಲಾಗಿವೆ. ಈ ಬ್ಯಾಂಕು ನೇಮಿಸಿದ್ದ ಗೂಂಡಾಗಳಿಂಥ ದೌರ್ಜನ್ಯಕ್ಕೆ ಗುರಿಯಾದ ಗ್ರಾಹಕನೊಬ್ಬ ಸುಪ್ರೀಂಕೋರ್ಟಿಗೆ ನೀಡಿದ ದೂರನ್ನು ಪರಿಶೀಲಿಸಿ ಸಾಲ ವಸೂಲಾತಿಯಲ್ಲಿ ಖಾಸಗಿ ಬ್ಯಾಂಕುಗಳನ್ನು ಅನುಸರಿಸುತ್ತಿರುವ ಗೂಂಡಾಗಿರಿಯ ಮೇಲೆ ಕ್ರಮ ತೆಗೆದುಕೊಳ್ಳಲು ರಿಸರ್ವ್ ಬ್ಯಾಂಕಿಗೆ ಸೂಚಿಸಿತು.

2006ರ ಸೆಪ್ಟೆಂಬರ್ 28ರಲ್ಲೊಂದು ಸಾರಿ ಮತ್ತು 2007ರ ನವಂಬರ್ 30ರಲ್ಲೊಂದು ಸಾರಿ ಸಾಲ ವಸೂಲಾತಿ ಮಾಡುವಾಗ ಬ್ಯಾಂಕುಗಳು ಗೂಂಡಾಗಿರಿ ನಡೆಸದಂತೆ ತಡೆಯಲು ರಿಸರ್ವ್ ಬ್ಯಾಂಕ್ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ವಿಧಿಸಿದೆ. ಅದರ ಪ್ರಕಾರ:

1. ಬ್ಯಾಂಕುಗಳು ಸಾಲ ವಸೂಲಾತಿಗೆ ಏಜೆಂಟರನ್ನು ನೇಮಿಸುವಾಗ ಸೂಕ್ತ ಎಚ್ಚರಿಕೆ ವಹಿಸಬೇಕು. ಅವರ ಬಗ್ಗೆ ಸಾಲ ತೆಗೆದುಕೊಂಡವರಿಗೆ ಮಾಹಿತಿ ನೀಡಿರಬೇಕು ಮತ್ತು ಆ ಏಜೆಂಟರಿಗೆ ಕಾನೂನುಬದ್ಧ ವಸೂಲಾತಿ ಕ್ರಮಗಳ ಬಗ್ಗೆ ಮತ್ತು ಗ್ರಾಹಕರೊಂದಿಗೆ ವರ್ತಿಸುವ ರೀತಿಯ ಬಗ್ಗೆ ಕನಿಷ್ಠ ನೂರು ಗಂಟೆಗಳ ತರಬೇತಿ ಕೊಟ್ಟಿರಬೇಕು.

2. ಈ ಏಜೆಂಟರು ರಾತ್ರಿ ಹೊತ್ತು ಗ್ರಾಹಕರ ಆವರಣವನ್ನು ಪ್ರವೇಶಿಸುವಂತಿಲ್ಲ. ಗ್ರಾಹಕರಿಗೆ ನೀಡಿರುವ ದೂರವಾಣಿ ಸಂಖ್ಯೆಗಳನ್ನು ಹೊರತುಪಡಿಸಿ ಬೇರೆ ಸಂಖ್ಯೆಗಳಿಂದ ಫೋನು ಮಾಡುವಂತಿಲ್ಲ. ಗ್ರಾಹಕರ ಘನತೆಗೆ ಚ್ಯುತಿ ಆಗುವಂತೆ ನಡೆದುಕೊಳ್ಳುವಂತಿಲ್ಲ. ಮೌಖಿಕವಾಗಿಯಾಗಲೀ, ದೈಹಿಕವಾಗಲೀ ಬೆದರಿಕೆ ತಂತ್ರವನ್ನು ಅನುಸರಿಸಬಾರದು.

3. ಸಾಲಕ್ಕಾಗಿ ಒತ್ತೆ ಇಟ್ಟ ಆಸ್ತಿಯನ್ನು ವಶಪಡಿಸಿಕೊಳ್ಳುವಾಗ ಕಾನೂನುಬದ್ಧ ಕ್ರಮವನ್ನು ಅನುಸರಿಸಬೇಕೆ ಹೊರತು ಬಲವಂತವಾಗಿ ಮತ್ತು ಏಕಾಏಕಿ ವಶಪಡಿಸಿಕೊಳ್ಳುವಂತಿಲ್ಲ. ಅಂಥ ತೀವ್ರ ಕ್ರಮವನ್ನು ತೆಗೆದುಕೊಳ್ಳುವ ಮುನ್ನ ಸಾಲ ತೆಗೆದುಕೊಂಡವರಿಗೆ ಕಾನೂನು ಬದ್ಧ ನೋಟೀಸೊಂದನ್ನು ಜಾರಿಮಾಡಬೇಕು ಮತ್ತು ಸಾಲ ತೆಗೆದುಕೊಳ್ಳುವಾಗಲೇ ಈ ಬಗೆಯ ಸಾಧ್ಯತೆಯನ್ನು ಅವರಿಗೆ ಮನವರಿಕೆ ಮಾಡಿಕೊಟ್ಟಿರಬೇಕು.



ಇಂಥ ಮಾರ್ಗದರ್ಶಿ ಸೂತ್ರಗಳಿದ್ದರೂ ಅವುಗಳನ್ನು ICICI ಬ್ಯಾಂಕ್ ಹೊಸಪುರದ ಮಂಜುನಾಥ ಮತ್ತು ಹರವು ಸಿದ್ದರಾಜುವಿನ ವಿಷಯದಲ್ಲಿ ಅನುಸರಿಸಲಿಲ್ಲವೇಕೆ? ಏಕೆಂದರೆ ಹಾಗೆ ಶರತ್ತುಗಳನ್ನು ಪಾಲಿಸಿಬಿಟ್ಟರೆ ಬಿಕ್ಕಟ್ಟಿನಲ್ಲಿರುವ ಟ್ರಾಕ್ಟರ್ ಕಂಪನಿಯಾಗಲೀ ಖಾಸಗಿ ಬ್ಯಾಂಕ್ ಉದ್ಯಮವಾಗಲೀ ಲಾಭ ಮಾಡಿಕೊಳ್ಳಲು ಸಾಧ್ಯವಿಲ್ಲ. ಈ ಖಾಸಗಿ ಬ್ಯಾಂಕ್ ಉದ್ಯಮದ ಮತ್ತು ಟ್ರಾಕ್ಟರ್ ಉದ್ಯಮದ ಆರ್ಥಿಕತೆಯನ್ನು ಮತ್ತು ಅದಕ್ಕೆ ಪೂರಕವಾಗಿಯೇ ನೀತಿಗಳನ್ನು ಮಾಡುವ ಸರ್ಕಾರದ ದಲ್ಲಾಳಿತನವನ್ನು ಅರ್ಥಮಾಡಿಕೊಳ್ಳದೆ ಈ ಕುತಂತ್ರಗಳು ಅರ್ಥವಾಗುವುದಿಲ್ಲ.

ಮೊದಲಿಗೆ ICICI ಬ್ಯಾಂಕ್‌ನ ಆಸಕ್ತಿಗಳನ್ನು ಗಮನಿಸೋಣ. ಇತ್ತೀಚೆಗೆ ನಡೆದ ಆ ಬ್ಯಾಂಕಿನ ವಾರ್ಷಿಕ ಸಭೆಯಲ್ಲಿ ಅವರು ಗುರುತಿಸಿರುವುದೇನೆಂದರೆ ದೇಶದ ಕಾರ್ಪೊರೇಟ್ ಕ್ಷೇತ್ರ ಈಗ ತಮ್ಮಂತ ಬ್ಯಾಂಕುಗಳ ಸಾಲವನ್ನು ನಿರೀಕ್ಷಿಸುತ್ತಿಲ್ಲ. ಅದೇ ಸಮಯದಲ್ಲಿ ನಗರ ಪ್ರದೇಶದಲ್ಲಿ ಸಾಲದ ಅಗತ್ಯಗಳು ಬೆಳೆಯುತ್ತಿದ್ದರೂ ಬಹಳ ಬೇಗ ಅದು ಗರಿಷ್ಠ ಮಿತಿ ಮುಟ್ಟಿಬಿಡುತ್ತಿದೆ. ಆದ್ದರಿಂದ ಬ್ಯಾಂಕುಗಳ ಲಾಭದಾಯಕತೆ ಬೆಳೆಯಬೇಕೆಂದರೆ ವಿಶಾಲ ಕೃಷಿ ಮಾರುಕಟ್ಟೆಯನ್ನೇ – ಅದರಲ್ಲೂ ಒತ್ತೆ ಸಾಲಗಳನ್ನ (ಮಾರ್ಟ್‌ಗೇಜ್ ಕ್ರೆಡಿಟ್) – ಆಶ್ರಯಿಸಬೇಕು ಎಂದು ತೀರ್ಮಾನಿಸಿವೆ. ಅದಕ್ಕೆ ತಕ್ಕ ಹಾಗೆ ಆರ್‌ಬಿಐ ಸಹ ಖಾಸಗಿ ಬ್ಯಾಂಕುಗಳು ಕೃಷಿ ಕ್ಷೇತ್ರಕ್ಕೆ ಕನಿಷ್ಠ ಶೇ.18ರಷ್ಟು ಸಾಲ ನೀಡಲೇಬೇಕೆಂದು ಕಡ್ಡಾಯ ಮಾಡಿವೆ. ಹೀಗಾಗಿಯೇ ಎರಡು ವರ್ಷಗಳ ಹಿಂದೆ ICICI ಬ್ಯಾಂಕ್‌ಗೆ ಇದ್ದ ಗ್ರಾಮೀಣ ಗ್ರಾಹಕರ ಸಂಖ್ಯೆ 10 ಲಕ್ಷದಿಂದ ಹೋದ ವರ್ಷ 32 ಲಕ್ಷಕ್ಕೇರಿದೆ. ಗ್ರಾಮೀಣ ಕ್ಷೇತ್ರಕ್ಕೆ ಅದು ಕೊಟ್ಟ ಸಾಲದ ಪ್ರಮಾಣ 16,500 ಕೋಟಿ ರೂ. ಗಳಿಗೇರಿದೆ. ಬರುವ ಎರಡು ವರ್ಷಗಳಲ್ಲಿ ತನ್ನ ಗ್ರಾಮೀಣ ಗ್ರಾಹಕರ ಸಂಖ್ಯೆಯನ್ನು 2.5 ಕೋಟಿಗೇರಿಸುವ ಗುರಿಯನ್ನು ICICI ಬ್ಯಾಂಕ್ ತನ್ನ ವಾರ್ಷಿಕ ಸಭೆಯಲ್ಲಿ ನಿಗದಿಪಡಿಸಿಕೊಂಡಿದೆ. ನ್ಯಾಷನಲೈಸ್ಡ್ ಬ್ಯಾಂಕುಗಳು ಗ್ರಾಮೀಣ ಕ್ಷೇತ್ರದಿಂದ ಕ್ರಮೇಣವಾಗಿ ಹಿಂದೆ ಸರಿಯುತ್ತಿರುವ ಈ ಹೊತ್ತಿನಲ್ಲಿ ಈ ಗುರಿ ಮುಟ್ಟುವುದು ಕಷ್ಟವೂ ಏನಲ್ಲ. ಅದಕ್ಕಾಗಿಯೇ ಅದು ತನ್ನಂತೆ ಬಡ ರೈತಾಪಿಯನ್ನು ಸುಲಿಯಲು ಯೋಜನೆಗಳನ್ನು ಹಾಕಿಕೊಂಡಿರುವ ರ್‍ಯಾಲಿಸ್, ಟಾಟಾ ಫರ್ಟಿಲೈಸರ್ಸ್, ಮಹಿಂದ್ರ ಅಂಡ್ ಮಹೀಂದ್ರ ಟ್ರಾಕ್ಟರ್

ಕಂಪನಿಗಳೊಂದಿಗೆ ಸೇರಿಕೊಂಡು ಬಣ್ಣಬ
ಗಳನ್ನು ಹಾಕಿಕೊಂಡಿದೆ. ಉದಾಹರಣೆಗೆ
ವಿಸ್ತರಣಾ ಕೇಂದ್ರಗಳನ್ನು ಕ್ರಮೇಣವಾಗಿ
ತ್ತಿರುವ ಸಂದರ್ಭದಲ್ಲಿ ಟಾಟಾ ಕಂಪನಿ
ಮತ್ತು ಕ್ರಿಮಿನಾಶಕವನ್ನು ಮಾರಾಟ ಮಾ
ಕಿಸಾನ್ ಕೇಂದ್ರದ ಹೆಸರಲ್ಲಿ ಹಳ್ಳಿಹಳ್ಳಿಗ
ರೈತನ ನೆಲದ ಗುಣಮಟ್ಟಕ್ಕೆ ತಕ್ಕನಾಗಿ
ಯನ್ನೂ ಕೊಡುವ ನಾಟಕವಾಡುತ್ತದೆ. IC
ಅದರ ಜೊತೆ ಸೇರಿ ಟಾಟಾ ಗೊಬ್ಬರ ಕ
ಕೊಟ್ಟು ಸುಲಿಗೆ ಮಾಡುತ್ತದೆ. ಅದೇರಿ
ಕಂಪನಿ ರೈತರಿಂದ ಮಾರುಕಟ್ಟೆಗೆ ಬೇಕಾ
ಬೆಳೆಸಿ ಅದನ್ನು ಬಹುರಾಷ್ಟ್ರೀಯ ಪೂ
ಸರಬರಾಜು ಮಾಡುತ್ತಿದ್ದರೆ ಆ ಪ್ರಕ್ರಿಯೆಗ
ಬ್ಯಾಂಕ್ ಸಾಲ ಕೊಡುತ್ತದೆ. ಅದೇರೀ
ಯಾಂತ್ರೀಕರಣವನ್ನು ಹೆಚ್ಚಿಸುವ ನೆಪದಲ್ಲಿ
ಕಂಪನಿ ಟ್ರಾಕ್ಟರ್ ಸರಬರಾಜು ಮಾಡುತ್ತಿ
ICICI ಬ್ಯಾಂಕ್ ಸಾಲ ಕೊಡುತ್ತದೆ. ಹಿ
ಗ್ರಾಮೀಣ ಕ್ಷೇತ್ರದ ಎಲ್ಲ ವಿಭಾಗಗಳ
ಕೊಳ್ಳುತ್ತಿದೆ.

ನಿಧಾನಕ್ಕೆ ಸ್ತ್ರೀಶಕ್ತಿ ಸಂಘಗಳಿಗೆ ಕ
ಕೊಟ್ಟು ಅಮರಿಕೊಳ್ಳುವ ಯೋಜನೆಯ
ಆದರೆ ಅದರಲ್ಲಿ ಅವು ಎದುರಿಸುತ್ತಿ
ಸಮಸ್ಯೆ ಸಾಲ ವಸೂಲಾತಿಯದ್ದು. ಖಾಸಗಿ
ಅಂಥ ಅನಾನುಕೂಲ ಆಗಬಾರದೆಂಬ ಉ
ಸಾಲ ವಸೂಲಾತಿಯನ್ನು ಹೊರಗುತ್ತಿ
ಸರ್ಕಾರ ಅನುಮತಿ ಇತ್ತಿದೆ.

ಅದೇರೀತಿ ಟ್ರಾಕ್ಟರ್ ಕಂಪನಿಗಳ ಬಿಕ್ಕ
ಮಧ್ಯ ಭಾಗದಲ್ಲಿ ಈ ಎಲ್ಲಾ ಕಂಪನಿಗಳ
ಲಕ್ಷದಷ್ಟು ಟ್ರಾಕ್ಟರ್‌ಗಳನ್ನು ಮಾರಾಟ ವ
ಆದರೆ ಆನಂತರ ಟ್ರಾಕ್ಟರ್ ಉದ್ಯಮ
ಲಕ್ಷಕ್ಕಿಂತ ಹೆಚ್ಚು ಮಾರಾಟವಾಗುತ್ತಿರ
ಸರ್ಕಾರದ ಹೊಸ ನೀತಿಯಿಂದ ಮ
ಬ್ಯಾಂಕ್‌ನ ಸಹಯೋಗದಿಂದ ಕಳೆದ ವ
ಮಾರಾಟ 1.9 ಲಕ್ಷಕ್ಕೇರಿದೆ. ಅದರ ಒ
4700 ಕೋಟಿಗೆ ಮುಟ್ಟಿದೆ.

ಈ ವ್ಯವಹಾರಕ್ಕೆ ಪೂರಕವಾಗಿ ಸರ್ಕಾ
ಮತ್ತು ಸಾಲ ವಸೂಲಾತಿ ನೀತಿಯನ್ನು ಉ
ಯಲ್ಲದೆ ವಸೂಲಾತಿಯನ್ನು ಹೊರಗುತ್ತಿ
ಅವಕಾಶ ನೀಡಿದೆ. ICICI ಬ್ಯಾಂಕ್‌ನ
ವಸೂಲಾತಿಯಲ್ಲಿ ಗೂಂಡಾಗಿರಿ ಮಾ
ಆರ್‌ಬಿಐ ಶರತ್ತು ವಿಧಿಸಿದ್ದರೂ ಸಮಸ್ಯೆಯ
ರುವ ಸಾಲ ವಸೂಲಾತಿಯ ಹೊರಗು
ರದ್ದು ಪಡಿಸುತ್ತಿಲ್ಲ. ಸಾಲಕ್ಕೆ ಅಡ ಇಡಲಾ
ಮುಟ್ಟುಗೋಲು ಹಾಕಿಕೊಳ್ಳಬೇಕಾದರೆ
ಮಾಡಬಾರದೆಂದು ಮತ್ತು ಕಾನೂನು
ಬೇಕೆಂದು ಮಾತ್ರ ನಿರ್ದೇಶಿಸಿದೆ. ಆರ್
ಬಗ್ಗೆ ಈಗಾಗಲೇ ಜಾರಿಯಲ್ಲಿರುವ Sec
and Reconstruction of Finan
and Enforcement of Security I
2002 (SARFAESI Act) ಅನ್ನು ಬಳ
ಹೇಳಿದೆ. ಈ ಕಾಯಿದೆ ರೈತ ವಿರೋ
ಸಾಲ ನೀಡಿದ ಸಂಸ್ಥೆ ರೈತನ ಆಸ್ತಿಯ
ಗೋಲು ಹಾಕಿಕೊಳ್ಳುವುದನ್ನು ಕಾನೂ
ಸುತ್ತದೆ. ಹೀಗಾಗಿ ಸರ್ಕಾರವೂ ಈ ಕಾ
ಹಿತಾಸಕ್ತಿ ಕಾಯುವ ಏಜೆಂಟ್ ಆಗಿಬಿ

ಹೀಗೆ ರೈತರಿಗೆ ಸಾಲ ನೀಡುವ ಹೆಸರ
ಬ್ಯಾಂಕ್‌ಗೆ ಹೊಸ ಲಾಭದ ಮೂಲ ದ
ವಾರ್ಷಿಕ ಲಾಭ 3100 ಕೋಟಿಗೆ ಮು
ಕಂಪನಿಗಳ ನಸೀಬು ಕುಲಾಯಿಸಿ ಅವ
4700 ಕೋಟಿ ರೂ.ಗಳಿಗೆ ಮುಟ್ಟಿತು. ಆ
ರೈತನಿಗೇನು ಸಿಕ್ಕಿತು? ಆತ್ಮಹತ್ಯೆಯನ್ನು

ರೈತಾಪಿಯ ಹೋರಾಟದಿಂದ
ಮಂಜುನಾಥ ಮತ್ತು ಹರವು ಸಿ
ಕುಟುಂಬಕ್ಕೆ ಒಂದಷ್ಟು ಪರಿಹಾರ
ICICI ಬ್ಯಾಂಕ್, ಕಾರ್ಪೊರೇಟ್ ಕೃ
ಮತ್ತು ದಲ್ಲಾಳಿ ಸರ್ಕಾರದ ನೀತಿಗಳಿ
ಎಷ್ಟೋ ರೈತರು ಮಂಜುನಾಥರ ಮತ್ತು
ದಾರಿ ಹಿಡಿಯಲಿದ್ದಾರೆ. ಆದ್ದರಿಂದ ರೈ
ಇತರ ಪ್ರಗತಿಪರ ಸಂಘಟನೆಗಳು ಒ

-ಸಾಲ ವಸೂಲಾತಿಯನ್ನು ಹ
ಕೊಡುವ ಕ್ರಮವನ್ನೇ ರದ್ದುಪಡಿಸಬೇಕ


-ಸಾಲ ನೀಡದಿದ್ದರೆ ರೈತರ ಆಸ್ತಿ
ಗೋಲು ಹಾಕಿಕೊಳ್ಳುವ ಕಾನೂನನ್ನು ರ

-ಕಡಿಮೆ ಬಡ್ಡಿಗೆ ಸರ್ಕಾರಿ ಬ್ಯಾಂಕು
ಸಾಲ ಕೊಡುವ ಮತ್ತು ಒಂದು ಸ
ನೀತಿ ಜಾರಿಯಾಗುವಂತೆ ಆಗ್ರಹಿಸಲು
ನಂಜುಂಡಸ್ವಾಮಿಯವರು ಹೇಳುತ್ತಿದ್ದಂತೆ
ಚರಣೆಗೆ ಸನ್ನದ್ಧಗೊಳ್ಳುವ ಅಗತ್ಯವಿದೆ.

ಅನುಭವ ಎಂಬುದು ಒಬ್ಬ ಕಠಿಣ ಮೇಷ್ಟ್ರು ಇದ್ದಂತೆ. ಅದು ಮೊದಲು ಪರೀಕ್ಷೆಯನ್ನು ಕೊಟ್ಟು ನಂತರ ಪಾಠಗಳನ್ನು ಹೇಳುತ್ತದೆ -

ಮೋದಿ ಗೆಲುವು ಯಾರಿಗೆ ಪಾಠವಾಗಬೇಕು?

ನಿನ್ನೆ ಶನಿವಾರ ಚಿಕ್ಕಮಗಳೂರಿನಲ್ಲಿ ಹಿಂದೂತ್ವವಾದಿ ಸಂಘಟನೆಗಳು ನಡೆಸಿದ ಶೋಭಾಯಾತ್ರೆಯಲ್ಲಿ ಮಾತನಾಡಿದ ಆರ್‌ಎಸ್‌ಎಸ್, ವಿಶ್ವಹಿಂದೂ ಪರಿಷತ್ ಮತ್ತು ಭಜರಂಗದಳದ ನಾಯಕರೆಲ್ಲಾ ಕರ್ನಾಟಕ ಕೋಮು ಸೌಹಾರ್ದ ವೇದಿಕೆಗೆ ಹಿಡಿ, ಹಿಡಿ ಶಾಪ ಹಾಕಿದ್ದಾರೆ. ವೇದಿಕೆಯಿಂದಾಗಿಯೇ ಕಳೆದ ಎರಡು ವರ್ಷ ತಮ್ಮ ಆಶೆಗಳಿಗೆ ಅನುಗುಣವಾಗಿ ಶೋಭಾಯಾತ್ರೆ ನಡೆಸಲು ಸಾಧ್ಯವಾಗಿಲ್ಲವೆಂದೂ, ಗಿರಿಯ ಮೇಲೆ ಹೋಮ, ಹವನದಂತಹ ವೈದಿಕ ಆಚರಣೆಗಳನ್ನು ನಡೆಸಲಾಗಿಲ್ಲವೆಂದೂ ಹಪಹಪಿಸಿದ್ದಾರೆ. ಹಾಗೆಯೇ ಯಥಾಪ್ರಕಾರ ವೇದಿಕೆಯು ದೇಶವಿರೋಧಿ ಎಂದೂ, ಅಲ್ಪಸಂಖ್ಯಾತರ ಹಿತ ರಕ್ಷಣಾ ಸಂಘಟನೆಯೆಂದೂ, ನಕ್ಸಲೈಟರ ಮುಖವಾಡ ಎಂದೂ ಆಧಾರರಹಿತ ಆರೋಪಗಳನ್ನು ಮಾಡಿದ್ದಾರೆ.



ಒಂದು ಮುಖ್ಯ ಅಂಶವನ್ನು ಓದುಗರು ಇಲ್ಲಿ ಗಮನಿಸಬೇಕು. ಸಂಘ ಪರಿವಾರದ ಈ ನಾಯಕರೆಲ್ಲಾ ತಮ್ಮ ವಿರೋಧಿಗಳನ್ನಾಗಿ ಗುರುತಿಸಿರುವುದು ರಾಜಕೀಯ ಪಕ್ಷಗಳಾದ ಕಾಂಗ್ರೆಸ್‌ನ್ನಲ್ಲ, ಜನತಾ ದಳವನ್ನಲ್ಲ, ಕಮ್ಯುನಿಸ್ಟರನ್ನಲ್ಲ. ಬದಲಾಗಿ ರಾಜಕೀಯ ಆಕಾಂಕ್ಷೆಯನ್ನೇ ಇಟ್ಟುಕೊಳ್ಳದಿರುವ ಸಾಮಾನ್ಯ ಜನರ ಸಂಘಟನೆಯಾದ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯನ್ನು!

ಇತ್ತ, ನಿರಾಶರಾದ ಸಂಘ ಪರಿವಾರದವರೆಲ್ಲಾ ಚಿಕ್ಕಮಗಳೂರಿನಿಂದ ತೆರಳುತ್ತಿದ್ದಂತೆ ಅತ್ತ ಗುಜರಾತಿನಲ್ಲಿ ಇನ್ನೊಂದು ಅಧ್ಯಾಯ ಪ್ರಾರಂಭವಾಯಿತು. ನರೇಂದ್ರ ಮೋದಿ ಎಂಬ ನರಹಂತಕ ಮತ್ತೆ ಆ ರಾಜ್ಯದ ಮುಖ್ಯಮಂತ್ರಿಯಾಗಿ ಗೆದ್ದಿದ್ದಾನೆ. ಹೋದ ಬಾರಿಗಿಂತ ಆತನ ಪಕ್ಷ ಬಜೆಪಿ ಈ ಬಾರಿ ಕಡಿಮೆ ಸ್ಥಾನಗಳನ್ನು ಗಳಿಸಿದ್ದರೂ ಸಹ ಮೋದಿ ತನ್ನ ಕರಾಳ ರಾಜಕೀಯವನ್ನು ಮುಂದುವರೆಸಲು ಯಾವ ಅಡೆತಡೆಗಳಿಲ್ಲದಷ್ಟು ಸಂಖ್ಯಾಬಲವನ್ನು ಪಡೆದಿದ್ದಾನೆ.

ಮೋದಿ ವಿರುದ್ಧ ಸೆಣೆಸಾಡಿದ್ದ ಕಾಂಗ್ರೆಸ್ ಪಕ್ಷ ಮತ್ತದರ ಸರ್ವೋಚ್ಚ ನಾಯಕಿ ಸೋನಿಯಾ ಗಾಂಧಿ ಸೋಲನ್ನೊಪ್ಪಿದ್ದಾರೆ. ಈ ಮುಖಭಂಗಕ್ಕೆ ಮುಖ್ಯ ಕಾರಣ ಕಾಂಗ್ರೆಸ್ ಪಕ್ಷ ಜನಸಾಮಾನ್ಯರನ್ನು ತಾಕದೇ ಇರುವುದು, ಸಮಾಜದ ತಳಮಟ್ಟದ ಸಮುದಾಯಗಳ ಆಶಯಗಳೊಂದಿಗೆ ಬೆರೆಯದೇ ದೂರ ಉಳಿದಿರುವುದು.

ಚಿಕ್ಕಮಗಳೂರಿನಲ್ಲಿ ವೇದಿಕೆಯ ಗೆಲುವು, ಗುಜರಾತಿನಲ್ಲಿ ಕಾಂಗ್ರೆಸ್ ಸೋಲನ್ನು ಅಕ್ಕಪಕ್ಕ ಇಟ್ಟು ಹೇಳುತ್ತಿರುವುದಕ್ಕೆ ಕಾರಣವಿದೆ.

ಹೇಳಿಕೇಳಿ ಕಾಂಗ್ರೆಸ್ ಪಕ್ಷ ನೂರು ವರ್ಷಕ್ಕೂ ಹೆಚ್ಚಿನ ಇತಿಹಾಸವನ್ನು ಹೊಂದಿರುವ ಪಕ್ಷ. ಅದಕ್ಕೆ ಲಕ್ಷಾಂತರ ಸದಸ್ಯರ ಬಲವಿದೆ, ಸಾವಿರಾರು ನಾಯಕರ ದಂಡೇ ಇದೆ, ಕೋಟ್ಯಂತರ ರೂಪಾಯಿ ಚೆಲ್ಲುವ ಸಾಮರ್ಥ್ಯವಿದೆ.

ಆದರೆ ನಮ್ಮ ವೇದಿಕೆ? ಸಾಮಾನ್ಯ ಜನರ, ಸಮಾನ ಮನಸ್ಕರ ಸಂಘಟನೆ ಆದ ವೇದಿಕೆಗೆ ಲಕ್ಷಾಂತರ ಸದಸ್ಯರಿರಲಿ, ಒಬ್ಬ ನಾಯಕನೂ ಇಲ್ಲ, ಇನ್ನು ಹಣದ ಶಕ್ತಿಯಂತೂ ಇಲ್ಲವೇ ಇಲ್ಲ. ವೇದಿಕೆಯ ಶಕ್ತಿ ಯಾವುದೆಂದರೆ ಜನಪರವಾಗಿರುವುದು, ಜನರ ಆಶಯಗಳೊಂದಿಗಿರುವುದು, ಜನರನ್ನೇ ಆಶ್ರಯಿಸಿರುವುದು.

ಇದೆಲ್ಲದರ ಜೊತೆಗೆ ಸಂವಿಧಾನದ ಜಾತ್ಯತೀತ ಆಶಯಗಳನ್ನು, ನ್ಯಾಯಾಲಯದ ತೀರ್ಪುಗಳನ್ನು, ಐತಿಹಾಸಿಕ ಸತ್ಯ ದಾಖಲೆಗಳನ್ನು ಆಧರಿಸಿಯೇ ಕೋಮುವಾದಿಗಳಿಗೆ ನೈತಿಕ ಸವಾಲನ್ನೊಡ್ಡುವುದು, ಅವರ ಟೊಳ್ಳು ಪರಂಪರೆಯನ್ನು ಬಯಲುಗೊಳಿಸುವುದು, ಅವರ ಅಸಲಿ ಮುಖವಾಡವನ್ನು ಕಳಚುವುದು ವೇದಿಕೆಯಿಂದ ಸಾಧ್ಯವಾಗಿದೆ.

ಇಲ್ಲಿ ಎದುರಾಗುವ ಪ್ರಶ್ನೆ ಯಾವುದೆಂದರೆ ನಮ್ಮ ಪುಟ್ಟ ವೇದಿಕೆಗೆ ಚಿಕ್ಕಮಗಳೂರಿನಲ್ಲಿ ಸಾಧ್ಯವಾದ ಜಯವನ್ನು ದೈತ್ಯ ಕಾಂಗ್ರೆಸ್‌ಗೆ ಗುಜರಾತಿನಲ್ಲಿ ಸಾಧ್ಯವಾಗಿಸಲಾಗಲಿಲ್ಲ ಏಕೆ ಎಂಬುದು.

ಅದಕ್ಕೆ ಉತ್ತರ: ನೈತಿಕತೆ ಮತ್ತು ಜನಪರ ಕಾಳಜಿ ಇಲ್ಲದಿರುವುದು.

ನರೇಂದ್ರ ಮೋದಿ ಸಾವಿರಾರು ಜನರನ್ನು ಕೊಂದಿದ್ದರೂ ಆತನ ವಿರುದ್ಧ ಜನಾಂದೋಲನವನ್ನಾಗಲಿ, ಕಾನೂನಿನ ಕ್ರಮವನ್ನಾಗಲಿ, ನ್ಯಾಯಾಲಯದಲ್ಲಿನ ಹೋರಾಟವನ್ನಾಗಲಿ ಕಾಂಗ್ರೆಸ್ ಎಂದೂ ಕೈಗೆತ್ತಿಕೊಳ್ಳಲಿಲ್ಲ. ಆತನ ಹಿಂದೂತ್ವ ಸಿದ್ಧಾಂತ ಹೇಗೆ ಸಂವಿಧಾನ ವಿರೋಧಿಯಾಗಿದೆ ಎಂದು ಜನರಲ್ಲಿ ಅರಿವು ಮೂಡಿಸುವ ಗೋಜಿಗೇ ಹೋಗಿಲ್ಲ. ಬದಲಾಗಿ ಕಾಂಗ್ರೆಸ್ ಮಾಡಿದ್ದೇನು? ಮೋದಿ ಮತ್ತಾತನ ಹಿಂದೂತ್ವವಾದಿ ಬಜೆಪಿಯ ನಕಲಿ ಪ್ರತಿ ತಾನೆಂಬಂತೆ ವರ್ತಿಸಿತು! ಎಷ್ಟರಮಟ್ಟಿಗೆ ಅಂದರೆ ಸೊರಾಬುದ್ದೀನ್ ಅನ್ನು ತಾನೇ ಕೊಲ್ಲಿಸಿದ್ದೆಂದು ಮೋದಿ ಭಾಷಣವೊಂದರಲ್ಲಿ ಹೇಳಿದ್ದನ್ನು ಪ್ರತಿಭಟಿಸಿ ತೀಸ್ತಾ ಸೆಟಲ್‌ವಾಡ್ ಎಂಬುವವರು ಚುನಾವಣಾ ಆಯೋಗಕ್ಕೆ ದೂರು ಕೊಟ್ಟರೆ ಹೊರತು ಕಾಂಗ್ರೆಸ್ ಪಕ್ಷ ಕೊಡಲಿಲ್ಲ, ಮಾತ್ರವಲ್ಲ, ಅದನ್ನು ಕುರಿತಂತೆ ಪೊಲೀಸರ ಮುಂದೆ ಒಂದು ಜುಜುಬಿ ಅದು ದೂರನ್ನೂ ದಾಖಲಿಸಲಿಲ್ಲ!

ಚುನಾವಣಾ ರಾಜಕೀಯಕ್ಕೂ, ಜನಪರ ಹೋರಾಟಕ್ಕೂ ಅಜಗಜಾಂತರ ವ್ಯತ್ಯಾಸವಿದೆ ಎಂಬುದು ಚೆನ್ನಾಗಿ ಗೊತ್ತಿದ್ದರೂ, ಇಷ್ಟೆಲ್ಲ ಹೇಳುತ್ತಿರುವುದರ ಉದ್ದೇಶ ಯಾವುದೇ ಪಕ್ಷ ಅಥವಾ ಸಂಘಟನೆ ಜನರೊಂದಿಗೆ ಇಲ್ಲದಿದ್ದರೆ ಅದೆಂದೂ ಜನರ ವಿಶ್ವಾಸವನ್ನು ಗೆಲ್ಲುವುದಿಲ್ಲ ಎಂದು ಹೇಳಲು ಮಾತ್ರ ಮತ್ತು ರಾಜ್ಯದ ಕಾಂಗ್ರೆಸ್ಸಿಗರನ್ನು ಎಚ್ಚರಿಸಲು ಕೂಡ...

ಯಾಕೆಂದರೆ ಗುಜರಾತಿನಲ್ಲಿ ಬಜೆಪಿ ಗೆದ್ದಿರುವಂತೆ ಇಲ್ಲಿಯೂ ಬರುವ ಚುನಾವಣೆಗಳಲ್ಲಿ ಆ ಪಕ್ಷ ಗೆಲ್ಲುವ ಸಾಧ್ಯತೆಗಳಿವೆ. ಇವತ್ತು ಕುಮಾರಸ್ವಾಮಿಯವರೊಂದಿಗೆ ಅವರ ಜನತಾದಳ ಪಕ್ಷವೂ ತುರ್ತು ಚಿಕಿತ್ಸಾ ಘಟಕವನ್ನು ಸೇರಿದೆ. ಕುಮಾರಸ್ವಾಮಿಯವರೇನೋ ಚೇತರಿಸಿಕೊಂಡು ಹೊರಬರುತ್ತಾರೆ, ಆದರೆ ಅವರ ಪಕ್ಷ ಸದ್ಯದಲ್ಲೇ ಚೇತರಿಸಿಕೊಳ್ಳುವ ಸಾಧ್ಯತೆಗಳಿಲ್ಲ. ಇಂತಹ ಸಂದರ್ಭದಲ್ಲಿ ಬಜೆಪಿ ಗೆಲ್ಲದಂತೆ, ಅವರು ಕರ್ನಾಟಕವನ್ನು ಮತ್ತೊಂದು ಗುಜರಾತ್ ಮಾಡದಂತೆ, ಬಾಬಾಬುಡನ್‌ಗಿರಿಯನ್ನು ದಕ್ಷಿಣದ ಅಯೋಧ್ಯೆ ಮಾಡದಂತೆ ಎಚ್ಚರ ವಹಿಸುವ ಜವಾಬ್ದಾರಿ ಕಾಂಗ್ರೆಸ್ ಮೇಲೂ ಇದೆ.

ಆದರೆ ನಮ್ಮ ದುರಂತ ಎಂತಹದ್ದೆಂದರೆ ದಂಡಪಿಂಡಗಳಂತಾಗಿರುವ ಇಲ್ಲಿನ ಕಾಂಗ್ರೆಸ್ಸಿಗರು ಏನೇ ಆದರೂ ಎಚ್ಚೆತ್ತುಕೊಳ್ಳುವಂತೆ ಕಾಣಿಸುತ್ತಿಲ್ಲ. ಚುನಾವಣೆಗೆ ಸಿದ್ಧರಾಗಿ ಅಂದ್ರೆ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲು ನಾಮುಂದು ತಾಮುಂದು ಎಂಬಂತೆ ಸಿದ್ಧರಾಗುತ್ತಿದ್ದಾರೆ. ಒಂದೆಡೆ ಹೈಕಮಾಂಡಿನ ಅನುಮತಿ ಇಲ್ಲದೆ ಬಾಲವನ್ನೂ ಅಲ್ಲಾಡಿಸದ ಧರ್ಮಸಿಂಗ್ "ಖರ್ಗೆನೇ ಮುಂದಿನ ಮುಖ್ಯಮಂತ್ರಿ" ಅಂತ ಘೋಷಿಸುತ್ತಿದ್ದರೆ, ಇನ್ನೊಂದೆಡೆ ಕಳೆದ ಚುನಾವಣೆಯಲ್ಲಿ ಜನರಿಂದ ತಿರಸ್ಕೃತಗೊಂಡಿರುವ ಮಾರ್ಗರೆಟ್ ಆಳ್ವ ಎಂಬ ನಾಯಕಿ ಹೊಸ ಸೀರೆ ಮತ್ತು ರವಿಕೆ ಸಿದ್ಧಪಡಿಸಿಕೊಳ್ಳುತ್ತಿದ್ದಾರೆ, ಮತ್ತೊಂದೆಡೆ ಶಿವರಾಮೇಗೌಡ ಮತ್ತು ಡಿ.ಕೆ. ಶಿವಕುಮಾರ್‌ರಂತಹವರು ಎಸ್.ಎಂ. ಕೃಷ್ಣ ಎಂಬ ಹೆಗ್ಗಣ ಮತ್ತೆ ರಾಜ್ಯಕ್ಕೆ ಬರಬೇಕೆಂದು ಒತ್ತಾಯಿಸುತ್ತಿದ್ದಾರೆ.



ಕಾಂಗ್ರೆಸ್‌ನ ಇಂತಹ ಹೊಣೆಗೇಡಿತನದಿಂದಾಗಿಯೇ ಅತ್ತ ಗುಜರಾತಿನಲ್ಲಿ ಬಜೆಪಿ ಸತತವಾಗಿ ನಾಲ್ಕನೇ ಬಾರಿ ಗೆದ್ದಿದೆ, ಶನಿಯಂತೆ ಮೋದಿ ವಕ್ಕರಿಸಿದ್ದಾನೆ. ಇತ್ತ ಕರ್ನಾಟಕದಲ್ಲೂ ಅವನಂತಹ ಶನಿಗಳೇ ವಕ್ಕರಿಸಲು ಸಜ್ಜಾಗುತ್ತಿದ್ದಾರೆ. ಆದರೆ ಕಾಂಗ್ರೆಸ್ಸಿಗರು ಮಾತ್ರ ಅಲ್ಲೂ, ಇಲ್ಲೂ, ಎಲ್ಲೆಲ್ಲೂ ಜಾಣ ನಿದ್ರೆಯಲ್ಲಿದ್ದಾರೆ.

ರವಿಕೆ ಹೊಲಿಸುವುದು, ಹೊಸ ಬಟ್ಟೆ ಖರೀದಿಸುವುದು ಬದಿಗಿರಲಿ, ಕಾಂಗ್ರೆಸ್ಸಿಗರು ತಮ್ಮ ನಿಷ್ಪ್ರಯೋಜಕತನವನ್ನು ಮುಂದುವರಿಸಿದರೆ ಬರುವ ಚುನಾವಣೆಗಳಿರಲಿ, ಮುಂದಿನ ಮೂರು ಚುನಾವಣೆಗಳು ನಡೆದರೂ ಅವರ ಅಧಿಕಾರದ ಚುಕ್ಕಾಣಿ ಹಿಡಿಯುವುದು ಕಷ್ಟಸಾಧ್ಯವಾಗುತ್ತದೆ. ಅದನ್ನು ಅವರು ಆದಷ್ಟು ಬೇಗ ಅರಿತುಕೊಂಡರೆ ಅವರಿಗೇ ಒಳ್ಳೆಯದು.

ಗುಜರಾತಿನ ಚುನಾವಣೆಗಳ ಬಗ್ಗೆಯೇ ಹೇಳಬೇಕೆಂದರೆ ಅಲ್ಲಿ ಅಭಿವೃದ್ಧಿಯ ಪರವಾಗಿ ಜನ ತಮ್ಮ ಮತ ಚಲಾಯಿಸಿದ್ದಾರೆ ಎಂದು ಹೇಳಲಾಗುತ್ತಿದೆ. ಆದರೆ ವಾಸ್ತವವಾಗಿ ಗ್ರಾಮೀಣ ಗುಜರಾತ್ ಪ್ರಕಾಶಿಸುತ್ತಿಲ್ಲ, ನಗರ ಪ್ರದೇಶಗಳಲ್ಲಿನ ಬಡವರ ಬದುಕು ಪ್ರಕಾಶಿಸುತ್ತಿಲ್ಲ, ಬದಲಾಗಿ ಮೋದಿಯ ಹಿಂದೂತ್ವದ ಕತ್ತಲನ್ನೇ ಬೆಳಕೆಂದು ಜನ ಭ್ರಮಿಸುವಂತೆ ಮಾಡಲಾಗಿದೆ.

ಗುಜರಾತಿನ ಕಾರ್ಪೊರೇಟ್ ಬಂಡವಾಳಿಗರು, ಮೇಲ್ಮಧ್ಯಮ ವರ್ಗ ಮತ್ತು ಮೇಲ್ಜಾತಿಗಳು ಪ್ರಜ್ಞಾಪೂರ್ವಕವಾಗಿ ಮೋದಿಯನ್ನು ಗೆಲ್ಲಿಸಿದ್ದಾರೆ. ಮೋದಿಯ ಯಶಸ್ಸಿರುವುದು ಈ ಮೇಲ್ವರ್ಗದ ಹಿತಾಸಕ್ತಿಯನ್ನೇ ಸಾಮಾನ್ಯ ಜನರ ಹಿತಾಸಕ್ತಿ ಎಂಬ ಬಿಂಬಿಸುವುದರಲ್ಲಿ.

ಮೋದಿಯ ಗೆಲುವಿಗೆ ಹಲವಾರು ಕಾರಣಗಳಿರಬಹುದು. ಆದರೆ ಕೋಮುವಾದಿ ಶಕ್ತಿಯ ವಿರುದ್ಧ ಜಾತ್ಯತೀತ ಶಕ್ತಿಗಳು ಸಂಘಟಿತರಾಗದಿದ್ದದ್ದು, ಸಕ್ರಿಯರಾಗುವಲ್ಲಿ ವಿಫಲರಾದದ್ದು, ಮತ್ತು ಕಾಂಗ್ರೆಸ್‌ನ ದ್ರೋಹವೂ ತಮ್ಮ ಕಾಣಿಕೆಯನ್ನು ನೀಡಿವೆ.

ಇಂತಹ ಪರಿಸ್ಥಿತಿ ಕರ್ನಾಟಕದಲ್ಲೂ ಉದ್ಭವಿಸಬೇಕೆ?

ಗುಜರಾತಿನ ಫಲಿತಾಂಶ ಈಗಲಾದರೂ ಕರ್ನಾಟಕದ ಸೌಹಾರ್ದಪ್ರಿಯರನ್ನು ಮತ್ತು ಕಾಂಗ್ರೆಸ್ ಎಂಬ ರಾಜಕೀಯ ಪಕ್ಷವನ್ನು ಎಚ್ಚರಿಸುವಂತಾಗಲಿ....

-ಗೌರಿ ಲಂಕೇಶ್



ಕಂಡಹಾಗೆ

ಬಿಜೆಪಿಗಳ ಲೋಭ

ಮಾಲೂರಿನ ಬಿಜೆಪಿ ಮಾಜಿ ಶಾಸಕ ಕೃಷ್ಣಯ್ಯ ಶೆಟ್ಟಿ ಬೆಂಗಳೂರಿನ ಪ್ರಸಿದ್ಧ ಭೂಗಳ್ಳ. ರಾಜಾಜಿನಗರದಲ್ಲಿರುವ ಇವನ ಬಾಲಾಜಿ ಕೃಪಾ ಎಂಟರ್‌ಪ್ರೈಸಸ್ ಇಲ್ಲೀತನಕ ಅದೆಷ್ಟು ಸಾವಿರ ಮನೆಗಳ ದೀಪ ಆರಿಸಿ ಬೆಳೆದಿದೆಯೋ ಲೆಕ್ಕವಿಲ್ಲ. ಅಂತಹ ಕೃಷ್ಣಯ್ಯ ಶೆಟ್ಟಿ ಈಗ ಟೆಲಿಕಾಂ ನೌಕರರಿಗೆ ಸೈಟು ಹಂಚಲು ಲೇಔಟ್ ನಿರ್ಮಿಸುವ ಕಾಂಟ್ರ್ಯಾಕ್ಟ್ ಪಡೆದುಕೊಂಡಿದ್ದಾನೆ. ಅದಕ್ಕಾಗಿ ಸಂಘವು ಶೆಟ್ಟಿಗೆ 78.95 ಕೋಟಿ ರೂಪಾಯಿ ಕೊಟ್ಟೇಬಿಟ್ಟಿದೆ.

ತಗೊಂಡ ದುಡ್ಡಿಗೆ ಬದ್ಧನಾಗಿರುವುದು, ಕೊಟ್ಟ ಮಾತಿಗೆ ತಪ್ಪದೆ ನಡೆದುಕೊಳ್ಳುವುದು ಇವೆರಡೂ ಶೆಟ್ಟಿ ಜಾಯಮಾನವಲ್ಲ. ಮಾಲೂರಿನ ಶಿವಾರಪಟ್ಟಣದವನಾದ ಕೃಷ್ಣಯ್ಯ ಶೆಟ್ಟಿ ಚಿಕ್ಕಂದಿನಲ್ಲೇ ಕಳ್ಳತನ ಕಲಿತಿದ್ದ ಓರ್ವ ಪ್ರತಿಭಾವಂತ. ಅವನ ತಂದೆ ನಾರಾಯಣ ಶೆಟ್ಟಿ ಊರಿನಲ್ಲಿ ಲೇವಾದೇವಿ ನಡೆಸುತ್ತಾ ಬಡವರ ಒಡವೆ ವಸ್ತ್ರ ಅಡ ಇರಿಸಿಕೊಳ್ಳುತ್ತಿದ್ದ. ಈ ಕೃಷ್ಣ ಒಂದು ದಿನ ಅವೆಲ್ಲವನ್ನೂ ಕದ್ದುಕೊಂಡು ಊರು ಬಿಟ್ಟು ನಾಪತ್ತೆಯಾದ. ತಂದೆ ನಾರಾಯಣ ಶೆಟ್ಟಿ ಜನರಿಗೆ ಉತ್ತರ ಹೇಳಲಾಗದೇ ನೇಣಾಕಿಕೊಂಡು ಸತ್ತ. ಅವತ್ತು ಮಾಲೂರಿನಿಂದ ಹಾಗೆ ನಾಪತ್ತೆಯಾದ ಶೆಟ್ಟಿ ಬೆಂಗಳೂರು ಸೇರಿಕೊಂಡು ಲ್ಯಾಂಡ್ ಬ್ಯುಸಿನೆಸ್ ಚಾಲು ಮಾಡಿಕೊಂಡ. ಸಾಕಷ್ಟು ಹಣ ಮಾಡಿಕೊಂಡ ಮೇಲೆ ತಿರುಗಾ ಮಾಲೂರಿಗೇ ಹೋಗಿ 3 ಕೋಟಿ ಖರ್ಚು ಮಾಡಿ ಬಿಜೆಪಿಯಿಂದ ಗೆದ್ದು ಶಾಸಕನಾದ. ಅದರ ಜೊತೆಜೊತೆಗೆ ಬೆಂಗಳೂರಿನ ಆನೇಕಲ್, ಬೇಗೂರಿನಲ್ಲಿ ಲೇಔಟ್ ಮಾಡುತ್ತೇನೆಂದು ನೂರಾರು ಜನರಿಗೆ ನಾಮ ತಿಕ್ಕಿದ. ಹೆಬ್ಬಾಳದ ರಿಂಗ್‌ರೋಡಿನ ಸಂಪಿಗೆಹಳ್ಳಿ ಬಳಿ ರಾಮಕೃಷ್ಣ ಹೆಗಡೆ ನಗರ ಲೇಔಟ್ ಮಾಡುತ್ತೇನೆಂದು ಹೊರಟ. ಅದೇ ರೀತಿ ಕೆಂಗೇರಿ ಹೋಬಳಿ ಮಲ್ಲತ್ತಹಳ್ಳಿಯಲ್ಲೂ (ಸರ್ವೆ ನಂಬರ್ 58,59, 89 ರಿಂದ 95) ಬಾಲಾಜಿ ಕೃಪಾ ಎನ್‌ಕ್ಲೇವ್ ಮಾಡುತ್ತೇನೆ, ಬರೀ ಸೈಟೇಕೆ ಮನೇನೂ ಕಟ್ಟಿಸಿಕೊಡುತ್ತೇನೆಂದು ಜನರಿಂದ ಕೋಟ್ಯಂತರ ಹಣ ಕಿತ್ತು ಉಂಡೆನಾಮ ಬಳಿದ.


ಕೃಷ್ಣಯ್ಯ ಶೆಟ್ಟಿ


ಇಂಥ ವಂಚಕ, ಹೀನ ಚರಿತ್ರೆಯಿರುವ ಕೃಷ್ಣಯ್ಯ ಶೆಟ್ಟಿಯ ಬಾಲಾಜಿ ಕೃಪಾ ಎಂಟರ್‌ಪ್ರೈಸಸ್‌ಗೆ ಟೆಲಿಕಾಂ ನೌಕರರ ಗೃಹ ನಿರ್ಮಾಣ ಸಂಘದ 78 ಕೋಟಿ ರೂ. ಹಣವನ್ನು ಅಡ್ವಾನ್ಸಾಗಿ ಯಾವ ಧೈರ್ಯದ ಮೇಲೆ ಕೊಡಲಾಗಿದೆ? ಇನ್ನು ಬಿಎಸ್‌ಆರ್ ಎಂಟರ್‌ಪ್ರೈಸಸ್‌ನವರದ್ದೂ ಇದೇ ಕತೆ. ಮಾಜಿ ಬಿಜೆಪಿ ಶಾಸಕ ರಾಮದಾಸರ ಸೋದರ ಶ್ರೀಕಾಂತ್‌ನ ಈ ಕಂಪನಿಗೆ ಸಂಘವು ಇದುವರೆಗೂ 19.50 ಕೋಟಿ ಹಣ ಪಾವತಿಸಿದೆ....

ಲೇಔಟ್ ರಚನೆ ಮಾಡೋದಿರಲಿ! ಇವತ್ತಿಗೂ ಶ್ರೀಕಾಂತ ಅಲ್ಲಿ ಒಂದು ಸೈಟನ್ನು ಮಾಡಿ ತೋರಿಸಿಲ್ಲ. ಇಲವಾಲ ಸುತ್ತಮುತ್ತ ನೂರಾರು ಎಕರೆ ಜಮೀನು ಜಿಪಿಎ ಹೊಂದಿರುವ ಶ್ರೀಕಾಂತ್ ಚಾಟಿ ಇಲ್ಲದೆ ಬುಗುರಿ ಆಡಿಸುವಂಥ ಚಾಲಾಕಿ.

ಇಂಥ ಹಿಂದೂ ದೇಶಭಕ್ತರ ಕಪಿಮುಷ್ಟಿಯಲ್ಲಿ ಸಿಕ್ಕಿಬಿದ್ದಿರುವ ಟೆಲಿಕಾಂ ಇಲಾಖೆಯ ಮುಗ್ಧ ನೌಕರರನ್ನು ಕಾಪಾಡುವವರು ಯಾರಿದ್ದಾರೆ? ■

ಟೆಲಿಕಾಂ ಲೇಔಟ್ ಹಗರಣ
300 ಕೋಟಿ ಗುಳುಂ

ಟೆಲಿಕಾಂ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಬೃಹತ್ ಹಗರಣ ಇದು. ಮೈಸೂರು ಮತ್ತು ಬೆಂಗಳೂರಿನಲ್ಲಿ ಏಕಕಾಲಕ್ಕೆ ಹತ್ತಾರು ಲೇಔಟ್ ಮಾಡಲು ಇವರು ಹೊರಟು ನಿಂತಿದ್ದಾರೆ. ಇದನ್ನು ನಂಬಿ ಮೂರು ಸಾವಿರಕ್ಕೂ ಹೆಚ್ಚು ನೌಕರರು ತಲಾ ಒಂದು-ಎರಡು ಲಕ್ಷದಂತೆ ಕಂತಿನಲ್ಲಿ ಹಣವನ್ನು ಕಟ್ಟಿದ್ದಾರೆ. ಹೀಗೆ ಸಂಗ್ರಹವಾದ 400 ಕೋಟಿಗೂ ಹೆಚ್ಚು ಹಣ ಹೋಗಿ ಸೇರಿಕೊಂಡಿದ್ದು ಸಂಘದ ಅಧ್ಯಕ್ಷ



ಭಕ್ತವತ್ಸಲಂ ಕೈಗೆ. ಈತ ತನ್ನ ಹೆಸರನ್ನು ಬಲು ವಿಚಿತ್ರವಾಗಿ ಎ.ಜಿ.ಕೆ. ಭಕ್ತವತ್ಸಲಂ ಎಂದು ಬರೆದುಕೊಳ್ಳುತ್ತಾನೆ. ಜೊತೆಗೆ ಬೊಮ್ಮಯ್ಯ, ಎಸ್.ಆರ್. ಹೆಗಡೆ, ತುಳಸೀರಾಂ, ಎಂ.ಕೆ. ಸತೀಶ್, ಎಸ್. ಜಯಶಂಕರ್, ಪೆದ್ದ ಮಂಜುನಾಥ, ಟಿ.ಎಸ್. ಪಾರ್ಥಸಾರಥಿ, ರಾಧಾಗಣೇಶ್, ಕೆ. ಕೃಷ್ಣಪ್ಪ ಎಂಬ ಆಸಾಮಿಗಳೂ ಭಕ್ತನ ಜೊತೆ ಇದ್ದಾರೆ. ಇವರೆಲ್ಲಾ ಟೆಲಿಕಾಂ ಗೃಹ ನಿರ್ಮಾಣ ಸಂಘದ ನಿರ್ದೇಶಕ ಮಹಾನುಭಾವರು. ಇನ್ನು ಕರೆಕ್ಟಾಗಿ ಹೇಳಬೇಕೆಂದರೆ ಸಂಘದ ಪದಾಧಿಕಾರಿಗಳಾಗುವ ಮೊದಲು ಇಲಾಖೆಯಲ್ಲಿ ಅಟೆಂಡರ್, ಆಪರೇಟರ್ ಇತ್ಯಾದಿ ಕೆಲಸ ಮಾಡಿಕೊಂಡು ಮಿಡಲ್ ಕ್ಲಾಸ್ ಲೆವೆಲ್‌ನಲ್ಲಿದ್ದವರು. ಆದರಿವತ್ತು ಇವರೆಲ್ಲರೂ ಕೋಟ್ಯಾಧೀಶ್ವರರಾಗಿ ಬಿಟ್ಟಿದ್ದಾರೆ.

ಈ ನಡುವೆ ಸದಸ್ಯರಿಂದ ಕಲೆಕ್ಟಾದ 400 ಕೋಟಿಯಲ್ಲಿ 268 ಕೋಟಿ ರೂ.ಗಳನ್ನು ಯಾವ್ಯಾವುದೋ ಬಿಲ್ಡರ್‌ಗಳಿಗೆ, ಲ್ಯಾಂಡ್ ಡೆವಲಪರ್‌ಗಳಿಗೆ ಕಡಲೇಪುರಿಯಂತೆ ಹಂಚಿಬಿಡಲಾಗಿದೆ. ಇದರ ಫಲಾನುಭವಿಗಳಲ್ಲಿ ಬಹುತೇಕರು ಬಿಜೆಪಿ ಪಕ್ಷದ ರಿಯಲ್ ಎಸ್ಟೇಟ್ ದಂಧೆಕೋರರೆಂಬುದು ಇನ್ನೊಂದು ವಿಶೇಷ.

ಮೈಸೂರಿನ ಇಲವಾಲ ಹೋಬಳಿಯಲ್ಲಿ 910 ಎಕರೆ ಹಾಗೂ ಬೆಂಗಳೂರಿನಲ್ಲಿ ಅಕ್ಷಯ ಬೃಂದಾವನ ಲೇಔಟ್ ಈ ಲಾಭ ಬಡುಕರಿಗೆ ಬಲಿಯಾಗುತ್ತಿದೆ.

ಕ್ಷಮಿಸಿ... ವ್ಯಾಪ್ತಿ ಪ್ರದೇಶದಿಂದ ಹೊರಗಿದ್ದಾರೆ

ಈ ಸಂಘದ ಅವ್ಯವಹಾರಗಳನ್ನು ಟೆಲಿಫೋನ್ ಇಲಾಖೆಯ ಪದಪುಂಜಗಳಲ್ಲೇ ವರ್ಣಿಸಬಹುದಾದರೆ ಸೈಟು ನೀಡುವುದಾಗಿ ನಂಬಿಸಿ ಹಣ ವಸೂಲಿ ಮಾಡಿಕೊಂಡ ನಾಯಕರು ಈಗ ಸದಸ್ಯರಿಗೆ, not reachable ಆಗಿದ್ದಾರೆ. ಈ ಗೃಹ ನಿರ್ಮಾಣ ಸಂಘಕ್ಕೆ ಇಲಾಖಾ ನೌಕರರಲ್ಲದ ಸಾರ್ವಜನಿಕರನ್ನು (associated members) ಮೆಂಬರ್ ಮಾಡಿಕೊಂಡಿರುವ ಕಾರಣ ಮೂಲ ಇಲಾಖೆಯ ಸದಸ್ಯರನ್ನೇ ಲೇಔಟ್ 'ವ್ಯಾಪ್ತಿ ಪ್ರದೇಶದಿಂದ' ಹೊರಗಿಡಲಾಗಿದೆ.

ಒಂದು ಲೆಕ್ಕಾಚಾರದ ಪ್ರಕಾರ ಇಲಾಖಾ ನೌಕರರ ಸಂಖ್ಯೆ ಮೂರು ಸಾವಿರದಷ್ಟಿದ್ದರೆ ಅಸೋಸಿಯೇಟೆಡ್ ಮೆಂಬರ್ ಕೋಟಾದಲ್ಲಿ ಆರು ಸಾವಿರಕ್ಕೂ ಜಾಸ್ತಿ ಜನಸಂಘದ ಸದಸ್ಯತ್ವ ಬಾಚಿಕೊಂಡಿದ್ದಾರೆ.

ಕಡಿಮೆ ರೇಟಿನಲ್ಲಿ ಮೈಸೂರಿನಲ್ಲಿ ಸೈಟು ಗಿಟ್ಟಿಸಲು ಈ ಸರ್ಕಸ್ ನಡೆಯುತ್ತಿದೆ. ಇಂಥವರ ಪೈಕಿ ಮೈಸೂರಿನ ಮಾರ್ವಾಡಿಗಳು, ಸಾಹುಕಾರರು, ರಾಜಕಾರಣಿಗಳೇ ಜಾಸ್ತಿ ಇದ್ದಾರೆ. ಈ ಹೊರಗಿನವರ ದಾಂಧಲೆಯಿಂದ ಮೂಲ ನಿವಾಸಿಗಳಾದ ಟೆಲಿಕಾಂ ನೌಕರರಿಗೇ ಈಗ ಸೈಟು ಸಿಗುತ್ತದೆಂಬ ನಂಬಿಕೆ ಹೊರಟುಹೋಗಿದೆ.

ಬಹುಶಃ ಅಧ್ಯಕ್ಷ ಭಕ್ತವತ್ಸಲಂ "ಕ್ಷಮಿಸಿ ನೀವು ಪ್ರಯತ್ನಿಸುತ್ತಿರುವ ಸೈಟ್ ಈಗ ದೊರಕುತ್ತಿಲ್ಲ, ದಯವಿಟ್ಟು ಸ್ವಲ್ಪ ಸಮಯದ ನಂತರ ಇನ್ನೊಮ್ಮೆ ಪ್ರಯತ್ನಿಸಿ" ಎನ್ನಬಹುದು.

ಇದು ಈ ಹಗರಣದ ಸ್ಥೂಲ ಚಿತ್ರಣ.

ಬಿಜೆಪಿ ಬಕಾಸುರರ ಸ್ವಾರ್ಥ

ಬೆಂಗಳೂರಿನ ರಿಯಲ್ ಎಸ್ಟೇಟ್ ಸಮುದ್ರದಲ್ಲಿ ಚಿಕ್ಕಮೀನು-ದೊಡ್ಡಮೀನುಗಳಿಂದ ಹಿಡಿದು ತಿಮಿಂಗಿಲಗಳವರೆಗೂ ದಂಧೆಕೋರರಿದ್ದಾರೆ. ಕಾಂಗ್ರೆಸ್, ದಳ, ಬಿಜೆಪಿಗಳಿಗೆ ಸೇರಿದವರೂ ಇದ್ದಾರೆ. ಆದರೆ ಮೈಸೂರಿನ ಭೂವ್ಯವಹಾರಗಳಲ್ಲಿ ಬಿಜೆಪಿ ದೇಶಭಕ್ತರ ಮನಾಪಲಿಯೇ ಜಾಸ್ತಿ ಇದೆ. ಅದರಲ್ಲೂ ಟೆಲಿಕಾಂ ನೌಕರರ ಗೃಹ ನಿರ್ಮಾಣ ಸಂಘದಲ್ಲಿ ಸಂಗ್ರಹವಾಗಿರುವ 268 ಕೋಟಿ ರೂ.ಗಳನ್ನು ಎತ್ತಿಕೊಂಡು ಹೋಗಿರುವ ಲ್ಯಾಂಡ್ ಡೆವಲಪರ್‌ಗಳ ಪೈಕಿ ಬಿಜೆಪಿಯವರದ್ದೇ ಸಿಂಹಪಾಲು.

ಮೈಸೂರಿನ ಕೃಷ್ಣರಾಜ ಕ್ಷೇತ್ರದ ಮಾಜಿ ಬಿಜೆಪಿ ಶಾಸಕ ರಾಮದಾಸ್ ತಮ್ಮ ಶ್ರೀಕಾಂತ್, ಮಾಲೂರಿನ ಬಿಜೆಪಿ ಶಾಸಕ ಕೃಷ್ಣಯ್ಯ ಶೆಟ್ಟಿ ಮುಂತಾದವರು ಟೆಲಿಕಾಂ ನೌಕರರಿಗೆ ತಮ್ಮ ಲೇಔಟ್ ನಿರ್ಮಿಸಿ ಕೊಡುವುದಾಗಿ ಹೇಳಿ ನೂರಾರು ಕೋಟಿ ರೂ.ಗಳನ್ನು ಸಂಗ್ರಹಿಸಿ, ಕಾನೂನುಬಾಹಿರವಾಗಿ ಭೂಮಿಯನ್ನೂ ಮಂಜೂರು ಮಾಡಿಸಿಕೊಂಡಿದ್ದಾರೆ.

ಈ ಟೆಲಿಕಾಂ ನೌಕರರ ಸಂಘವು ಈಗ್ಗೆ ಎರಡು ವರ್ಷಗಳ ಹಿಂದೆ ಲೇಔಟ್ ನಿರ್ಮಾಣದ ಯೋಜನೆಗೆ ಚಾಲನೆ ನೀಡಿತ್ತು. ತಮ್ಮದೇ ಒಂದು ಸ್ವಂತ ಮನೆಯ ಕನಸು ಕಾಣುತ್ತಿದ್ದ ಸಾವಿರಾರು ಇಲಾಖಾ ನೌಕರರು ನಂಬಿಕೆಯಿಂದ ಅರ್ಜಿ ಹಾಕಿದ್ದರು. 30x40, 40x60 ಹೀಗೆ ಬೇರೆ ಬೇರೆ ಅಳತೆಯ ಸೈಟುಗಳಿಗಾಗಿ ಸಂಘ ನಿಗದಿಪಡಿಸಿದ್ದ ರೇಟಿನ ಪ್ರಕಾರ ಒಂದನೇ ಕಂತಿನ ಹಣ, ಇನ್ನಾರು ತಿಂಗಳು ಬಿಟ್ಟು ಎರಡನೇ ಕಂತಿನ ಹಣ ಕಟ್ಟಿ ಸಂಘದ ಖಜಾನೆ ತುಂಬಿಸಿದ್ದರು. ಹೀಗೆ ಹಣ ಸಂಗ್ರಹಿಸಿದ ಮೇಲೆ ಸಂಘದ ಮುಖಂಡರು ಸೂಕ್ತವಾದ ಸಾಕಷ್ಟು ಜಮೀನು ಖರೀದಿಸಿ ಸಂಘದ ಹೆಸರಿಗೆ ರಿಜಿಸ್ಟರ್ ಮಾಡಿಸಿಕೊಳ್ಳಬೇಕು ತಾನೆ?

ಆದರೆ ಮೈಸೂರಿನಲ್ಲೇನಾಗಿದೆ


ಅಲ್ಲಿನ ಮಡಿಕೇರಿ ರಸ್ತೆಯ ಇಲವಾಲ [cut off]
ಸೇರಿದ ಇಲವಾಲ, ಬೆಳವಾಡಿ, ಹುಯಿಲಾಳ [cut off]
ನಹಳ್ಳಿ, ನಾಗವಾಲ, ಕೆ. ತಮ್ಮನಹಳ್ಳಿ, [cut off]
ಹಾಗೂ ಸುತ್ತಮುತ್ತಲ ಗ್ರಾಮಗಳ 910 [cut off]
ಜಮೀನನ್ನು ಟೆಲಿಕಾಂ ಗೃಹ ನಿರ್ಮಾ[cut off]
ಲೇಔಟ್‌ಗೆಂದು ಈಗ ಗುರುತಿಸಲಾ[cut off]
ಓಡಾಡುವವರಿಗೆ ಈಗ ಆನಂದ ಸಾಗರ [cut off]
ನಿತ್ಯಾನಂದ ಸಾಗರ ಲೇಔಟ್, ಪರಮಾನ[cut off]
ಲೇಔಟ್, ಬ್ರಹ್ಮಾನಂದ ಸಾಗರ ಲೇಔಟ್ [cut off]
ಕುಬೇರಾನಂದ ಸಾಗರ ಲೇಔಟ್‌ಗಳೆಂಬ ಬ[cut off]
ಮಾತ್ರ ಕಾಣಿಸುತ್ತಿವೆ. ಈ ಥರ ಆನಂದ, ಪ[cut off]
ಬ್ರಹ್ಮಾನಂದವೆಂಬ ಪದಪುಂಜಗಳನ್ನು ದಾಟಿ [cut off]
ಎಂದು ಇಣುಕಿ ನೋಡಿದರೆ ಮೆಂಬರ್[cut off]
ಸಾಗರವಷ್ಟೇ ಕಾಣಸಿಗುತ್ತಿದೆ. ಏಕೆಂದರೆ ಇಲ್ಲಿ [cut off]
ಬರೀ ಬೋರ್ಡ್‌ಗಳಷ್ಟೇ ಇವೆ. ಆದ[cut off]
ಹೆಸರಿನಲ್ಲಿ ಒಂದೇ ಒಂದು ಎಕರೆ ಜಮೀನ[cut off]
ಆಗಿಲ್ಲ.

ಏನಿದರ ಮರ್ಮ ಎನ್ನುತ್ತೀ[cut off]

ಈ ಬೋರ್ಡ್‌ಗಳಿರುವ ಅಷ್ಟೂ ಜಮೀ[cut off]
ಖಾಸಗಿ ಲ್ಯಾಂಡ್ ಡೆವಲಪರ್‌ಗಳ ಹಿಡಿತ[cut off]
ಹಕೀಕತ್ತೇನೆಂದರೆ ಟೆಲಿಕಾಂ ನೌಕರರಿಂದ [cut off]
ನೂರಾರು ಕೋಟಿ ಹಣ ವಸೂಲಿ [cut off]
ಭಕ್ತವತ್ಸಲಂ ಗ್ಯಾಂಗು ತಾನೇ ನೇರವಾಗಿ [cut off]
ಖರೀದಿಸಿ ಡೆವಲಪ್ ಮಾಡುವ ಬದ[cut off]
ಲೇಔಟ್ ನಿರ್ಮಾಣದ ಹೊಣೆಯನ್ನ[cut off]
ಡವಲಪರ್ಸ್‌ಗೆ ವಹಿಸಿಬಿಟ್ಟಿದೆ. ಇಂಥ [cut off]
ನಡೆಯುವಾಗ ಅವ್ಯವಹಾರಕ್ಕೆ ನೂರೆಂಟು [cut off]
ಸಿಗುತ್ತವೆ.

ಟೆಲಿಕಾಂ ಗೃಹ ನಿರ್ಮಾಣ ಸಂಘದ [cut off]
ನಡೆದಿದೆ.

ಸೈಟ್ ಫಾರ್ಮೇಷನ್‌ಗೆ ಮಾರುಕಟ್ಟ[cut off]
ಹೆಚ್ಚು ಹಣ ನೀಡುವುದು, ಖಾಸಗಿ ಗುತ್ತಿ[cut off]



ಲೇಔಟ್ ನಕ್ಷೆ


ಇಎಂಡಿ (ಸುರಕ್ಷತಾ ಠೇವಣಿ) ಪಡೆಯದ[cut off]
ಕೋಟಿ ಹಣ ಮುಂಗಡ ನೀಡಿ ಅರಾ[cut off]
ಸೃಷ್ಟಿಸುವುದೆಲ್ಲಾ ಆಗುತ್ತದೆ. ಈಗ ಟೆಲಿಕಾ[cut off]
ಲೇಔಟ್ ನಿರ್ಮಾಣಕ್ಕೆ ವೆಲ್‌ಕಂ ಗ್ರೂಪ್[cut off]
ಕೋಟಿ, ಎಸ್ ಅಂಡ್ ಎಸ್ ಇನ್‌ಫ್ರಾಸ್ಟಕ್ಚರ್[cut off]
ಕೋಟಿ, ಬಿ.ಎಸ್.ಆರ್. ಎಂಟರ್‌ಪ್ರೈಸಸ್[cut off]
ಕೋಟಿ, ಶಾಂಭವಿ ಬಿಲ್ಡರ್ಸ್ ಅಂಡ್ [cut off]
35.10 ಕೋಟಿ, ಅಕ್ಷಯ ಭರಣಿ ಗ್ರೂ[cut off]
ಕೋಟಿ, ವೆಂಕಟೇಶ್ವರ ಧರಣಿ ಗ್ರೂಪ್‌ಗೆ 4[cut off]
ಬಾಲಾಜಿ ಕೃಪಾ ಎಂಟರ್‌ಪ್ರೈಸಸ್‌ಗೆ 78[cut off]
ಮುಂಗಡ ಹಣ ನೀಡಲಾಗಿದೆ.

ವಾಸ್ತವವಾಗಿ ಮೈಸೂರಿನಲ್ಲಿ ಆಗಬೇಕ[cut off]
ಕೇವಲ 5 ಲೇಔಟ್‌ಗಳಾದರೂ 7 ಡೆವ[cut off]
268.25 ಕೋಟಿ ನೀಡಲಾಗಿದೆ. ಗುತ್ತಿಗೆದಾ[cut off]
ಹಣ ಪಡೆದು ವರ್ಷದ ಮೇಲಾಗಿದ್ದ[cut off]

ಪಾಪುನ ವಿದ್ಯಾ-ವರ್ತಕ ಸಂಘ!

ಸುಮಾರು 118 ವರ್ಷಗಳ ಇತಿಹಾಸವಿರುವ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಪಾಟಿಲ ಪುಟ್ಟಪ್ಪ ಕ್ಷಮಿಸಿ ಪಾಟೀಲ ಪುಟ್ಟಪ್ಪ (ಪಾಪು) ಅವರ ಸಾರಥ್ಯದಲ್ಲಿ ವಿದ್ಯಾ-ವರ್ತಕ ಸಂಘವಾಗಿ ಪರಿವರ್ತಿತವಾಗಿಬಿಟ್ಟಿದೆ. 1967ರಿಂದಲೂ ಇದರ ಅಧ್ಯಕ್ಷಗಿರಿಯ ಕುರ್ಚಿಗೆ ಗೂಟ ಹೊಡೆದುಕೊಂಡು ಕುಂತಿರುವ ಪಾಪು ವಿದ್ಯಾವರ್ಧಕ ಸಂಘವನ್ನು ಲಿಂಗಾಯತ ವರ್ಧಕ ಸಂಘವನ್ನಾಗಿ ಪರಿವರ್ತಿಸುವಲ್ಲಿ ಪಟ್ಟ ಶ್ರಮ ಅಷ್ಟಿಷ್ಟಲ್ಲ. ಈ ನಿಟ್ಟಿನಲ್ಲಿ ಅವರು ಒಂದಿಷ್ಟು ಯಶಸ್ಸನ್ನೂ ಗಳಿಸಿಕೊಂಡಿದ್ದಾರೆ.

ವಿದ್ಯಾವರ್ಧಕ ಸಂಘದ 14 ಪದಾಧಿಕಾರಿಗಳ ಆಯ್ಕೆಗಾಗಿ ಡಿಸೆಂಬರ್ 16ರಂದು ನಡೆದ ಚುನಾವಣಾ ಫಲಿತಾಂಶವನ್ನು ನೋಡಿದರೆ ಗಬ್ಬು ವಾಸನೆಯುಳ್ಳ ಕುಡಿದ ಅನುಭವವಾಗದಿರಲಾರದು. ಮತದಾರರನ್ನು ಒಲಿಸಿಕೊಳ್ಳಲು ಕೈಮುಗಿಯುವುದೇನು, ಕಾಲಿಗೆ ಬೀಳುವುದೇನು, ಪೊಳ್ಳು ಭರವಸೆಗಳನ್ನು ನೀಡುವುದೇನು, ದುಡ್ಡು ಹಂಚುವುದೇನು... ಥೇಟ್ ಎಮ್ಮೆಲ್ಲೆ, ಎಂಪಿ ಎಲೆಕ್ಷನ್‌ನಲ್ಲಿ ಭ್ರಷ್ಟರಾಜಕಾರಣಿಗಳು ಏನೆಲ್ಲಾ ಮಾಡಿ ಗೆದ್ದು ಬರುತ್ತಾರೋ ಅದನ್ನೆಲ್ಲಾ ಈ ಚುನಾವಣೆಯಲ್ಲೂ ಮಾಡಿ ತೋರಿಸಿದರು. ಪರಿಣಾಮ ನಿರೀಕ್ಷಿತವೇ. ಶಿಕ್ಷಣ,



ಚುನಾವಣೆಯಲ್ಲಿ ಗೆದ್ದವರನ್ನೊಮ್ಮೆ ನೋಡಿ. ಕಾರ್ಯಾಧ್ಯಕ್ಷ [cut off]
ಸಾಹಿತ್ಯ ಸಂಸ್ಕೃತಿಗಳ ಬಗ್ಗೆ ಗಂಧಗಾಳಿಯೂ [cut off]
ಮಹಾಶಯರು ಆಯ್ಕೆಯಾಗಿ ಬಂದರು.

ಮತಗಟ್ಟೆಯಲ್ಲಿ ಪಾಪು ಬಣದ ವಿಜ[cut off]
ವಿರೋಧಿ ಬಣದ ವೀಣಾ ಕುಲಕರ್ಣಿ ಮ[cut off]
ನಾಗಮ್ಮನವರೊಂದಿಗೆ ಕಿತ್ತಾಟ, ಬೈಯ[cut off]
ನಡೆಸಿದರು. ತಮ್ಮ ಗುರುತಿನ ಚೀಟಿ ಮರೆತ[cut off]
ಬಂದ ಪರಿಣಾಮ ಹಿರಿಯ ಸ್ವಾತಂತ್ರ್ಯ ಯೋ[cut off]
ಡಾಬಡೆ ಮತ ಚಲಾಯಿಸಲು ಒಂ[cut off]
ಕಾಯಬೇಕಾಯಿತು. ಆದರೆ, ಡಾ. ಶ್ಯಾಮ[cut off]
ನಾಯಕ ಎಂಬ ಪಾಪು ಬಂಟ ಗುರು[cut off]
ತರದಿದ್ದರೂ ತಕ್ಷಣ ಮತ ಚಲಾಯಿಸಿದರು.

ಬಯಸಿದ್ದನ್ನು ಪಡೆಯುವುದು ಯಶಸ್ಸು; ಪಡೆದದ್ದನ್ನು ಬಯಸುವುದು ಸಂತೋಷ - ಡೇವ್ ಗಾರ್ಡ್ನರ್



ಸಂಘದ ಸಭೆಯಲ್ಲಿ ಜಟಾಪಟಿ

ಒಂದು ಕಲ್ಲನ್ನು ಆ ಕಡೆಯಿಂದ ಈ ಕಡೆಗೆ ಎತ್ತಿಟ್ಟಿಲ್ಲ. ಸದ್ಯದ ಭವಿಷ್ಯದಲ್ಲಿ ಲೇಔಟ್ ರಚನೆಯಾಗುವ ಯಾವ ಸೂಚನೆಗಳೂ ಕಾಣುತ್ತಿಲ್ಲ. ಗೃಹ ನಿರ್ಮಾಣ ಸಹಕಾರ ಸಂಘಗಳ ನಿಯಮಾವಳಿಗಳ ಪ್ರಕಾರ ಯಾವುದೇ ಸಂಘವು ಕೇವಲ ಲೇಔಟ್ ಅಭಿವೃದ್ಧಿ ಮಾಡುವ ಗುತ್ತಿಗೆಯನ್ನು ಮಾತ್ರ ಖಾಸಗಿಯವರಿಗೆ ಒಪ್ಪಿಸಬಹುದೇ ವಿನಃ ತನ್ನ ಜುಟ್ಟು ಜನಿವಾರಗಳನ್ನೆಲ್ಲಾ ಖಾಸಗಿ ಡೆವಲಪರ್ಸ್‌ಗಳ ಕೈಗೆ ಕೊಟ್ಟು ತಾನೇ ಪರಾವಲಂಬಿಯಂತೆ ನಡೆದುಕೊಳ್ಳುವಂತಿಲ್ಲ. ಜಮೀನಿನ ಮಾಲೀಕತ್ವವಂತೂ ಮೊಟ್ಟ ಮೊದಲನೆಯದಾಗಿ ಸಂಘದ ಹೆಸರಿನಲ್ಲೇ ಇರಬೇಕು. ನಿಯಮ ಹೀಗಿದ್ದಾಗಲೂ ಭಕ್ತವತ್ಸಲಂ ಟೀಂ ಇಡೀ ಲೇಔಟ್ ಮಾಲೀಕತ್ವ, ಅಭಿವೃದ್ಧಿ ಉಸ್ತುವಾರಿ ಮತ್ತು ಸೈಟ್ ವಿತರಣೆಯ ಹಕ್ಕುಗಳನ್ನು ಈ ಮೇಲಿನ ಖಾಸಗಿ ದಂಧೆಕೋರರ ಕೈಗೆ ಒಪ್ಪಿಸಿ ನೌಕರರನ್ನು ಅತಂತ್ರ ಸ್ಥಿತಿಗೆ ತಂದು ನಿಲ್ಲಿಸಿಬಿಟ್ಟಿದೆ. ಈ ದಿನ ಟೆಲಿಕಾಂ ಇಲಾಖಾ ನೌಕರನೊಬ್ಬ ಸೈಟಿಗಾಗಿ ಅರ್ಜಿ ಹಾಕಲು ಬಂದರೆ "ನಾನೇನು ಮಾಡಕ್ಕಾಗಲ್ಲ. ಹೋಗಿ ಡೆವಲಪರ್‌ಗಳನ್ನು ಕೇಳಿ" ಎಂದು ಅಧ್ಯಕ್ಷ ಭಕ್ತವತ್ಸಲಂ ನಾಚಿಕೆಯಿಲ್ಲದೆ ಹೇಳುತ್ತಿದ್ದಾನೆ.

ಅಂದರೆ....

ಸಂಘ ನೌಕರರದ್ದು, ದುಡ್ಡೂ ನೌಕರರದ್ದೇ, ಆದರೆ ಕಂಟ್ರೋಲು ಮಾತ್ರ ಖಾಸಗಿ ಡೆವಲಪರ್‌ಗಳದ್ದು ಎಂದಾಗಿದೆ. ಇದರಿಂದ ಬೇಸತ್ತು ಹೋಗಿರುವ ಅನೇಕ ಟೆಲಿಕಾಂ ಇಲಾಖಾ ನೌಕರ ಸದಸ್ಯರು ಈಗಾಗಲೇ ಪದಾಧಿಕಾರಿಗಳ ವಿರುದ್ಧ ತಿರುಗಿಬಿದ್ದಿದ್ದಾರೆ. ಸಹಕಾರ ಇಲಾಖೆಯ ಹಿರಿಯ ಅಧಿಕಾರಿಗಳು ತಕ್ಷಣ ಇಲ್ಲೇನು ನಡೆಯುತ್ತಿದೆ ಎಂದು ಪರಿಶೀಲಿಸಿ ಸೂಕ್ತ ಕಾನೂನು ಕ್ರಮ ತೆಗೆದುಕೊಂಡರೆ ಒಳಿತು.

ಟೆಲಿಕಾಂ ನೌಕರರ ಗೃಹ ನಿರ್ಮಾಣ ಸಂಘದ ಲೇಔಟ್ ಯೋಜನೆ ಸದ್ಯಕ್ಕೆ ರಾಂಗ್‌ನಂಬರ್‌ಗೆ ಹೋಗುತ್ತಿದೆ. ಅದನ್ನು ಹೀಗೆ ಮುಂದುವರಿಯಲು ಬಿಟ್ಟರೆ ಇಡೀ ಲೈನೇ out of order ಆಗುವ ದಿನ ದೂರವಿಲ್ಲ.

ವರದಿಗಾರ



ಬೊಮ್ಮಯ್ಯ

ಅಧ್ಯಕ್ಷನದೇ ಒಂದು ವೆಲ್ಕಂ ಗ್ರೂಪ್ ಗುತ್ತಿಗೆ

ಈ ಭಕ್ತವತ್ಸಲಂ ಎಂಥ ಕಿಲಾಡಿಯೆಂದರೆ ಖಾಸಗಿ ಲ್ಯಾಂಡ್ ಡೆವಲಪರ್‌ಗಳಿಗೆ ಲೇಔಟ್ ನಿರ್ಮಾಣದ ಗುತ್ತಿಗೆ ನೀಡುವಾಗ ತನ್ನದೇ ಒಂದು ವೆಲ್ಕಂ ಗ್ರೂಪ್ ಎಂಬ ಕಂಪನಿ ತೇಲಿಬಿಟ್ಟು ಅನಾಮತ್ತು 15.41 ಕೋಟಿ ರೂ. ಹಣ ತನ್ನ ಮನೆಗೆ ದಾಟಿಸಿಕೊಂಡಿದ್ದಾನೆ. ಇದರಲ್ಲಿ ಮಂಜುನಾಥ್ ಎಂಬ ಇನ್ನೊಬ್ಬ ನಿರ್ದೇಶಕನ ಪಾಲುದಾರಿಕೆಯೂ ಇದೆ.

ಸಂಘದ ಅಧ್ಯಕ್ಷನೊಬ್ಬ ಪರ್ಸೆಂಟೇಜ್ ಹೊಡೆಯುವುದು, ಎರಡು ಕಾರ್ನರ್ ಸೈಟ್ ತನಗೆಂದೇ ಇಟ್ಟುಕೊಳ್ಳುವುದು ಇದುವರೆಗಿನ ಪರಿಪಾಠವಾಗಿತ್ತು. ಆದರೆ ಈ ಭಕ್ತ ಹಾಗೂ ಮಂಜುನಾಥ್ ಇನ್ನೊಂದೆರಡು ಹೆಜ್ಜೆ ಮುಂದೆ ಹೋಗಿ ತಮಗೆ ತಾವೇ 15 ಕೋಟಿ ದುಡ್ಡು ಬಿಡುಗಡೆ ಮಾಡಿಕೊಂಡಿದ್ದಾರೆ.

ಇವರ ಜೊತೆ ಬೊಮ್ಮಯ್ಯನೆಂಬ ಇನ್ನೊಬ್ಬ ಕಿಲಾಡಿ ಮನುಷ್ಯನಿದ್ದಾನೆ. ಟೆಲಿಕಾಂನಲ್ಲಿ ಕೇವಲ ಅಟೆಂಡರ್ ಆಗಿದ್ದ ಈ ಆಸಾಮಿ ಇವತ್ತು ಕೋಟ್ಯಾಧೀಶ. ಇದೆಲ್ಲಾ ಸಂಘದ ದುಡ್ಡೇ! ಜಮೀನು ಕೈ ಬದಲಾವಣೆ ಡೀಲ್‌ಗಳು, ಮೆಂಬರ್‌ಶಿಪ್ ಅರ್ಜಿಗಳ ಅಕ್ರಮ ಮಾರಾಟ ಹೀಗೆ ಹತ್ತಾರು ದಾರಿಗಳಲ್ಲಿ ಹಣ ಮಾಡುವ ಕಲೆ ಇವನಿಗೆ ಕರಗತವಾಗಿ ಹೋಗಿದೆ. ಭಕ್ತ ಹಾಗೂ ಮಂಜುನಾಥರ ಮಾಲೀಕತ್ವದ ವೆಲ್ಕಂ ಗ್ರೂಪ್ ಬಗ್ಗೆ ಸಹಕಾರ ಇಲಾಖಾ ಅಧಿಕಾರಿಗಳು ವಿಶೇಷ ತನಿಖೆ ಮಾಡಲಿ. ■

ಶಾಸಕ ಚಂದ್ರಕಾಂತ ಬೆಲ್ಲದ್‌ನ ಸಹೋದರ ಹಾಗೂ ವರ್ತಕ-ಉದ್ಯಮಿ ಶಿವಪುತ್ರಪ್ಪ ಬೆಲ್ಲದ್, ಉಪಾಧ್ಯಕ್ಷ ಸ್ಥಾನಕ್ಕೆ ಮಾಜಿ ಕಾರ್ಪೋರೇಟರ್ ಶರಣ ಚಂದ್ರಶೇಖರ್ ಅಳಗುಂಡಗಿ, ಕಾರ್ಯದರ್ಶಿ ಸ್ಥಾನಕ್ಕೆ ನಿವೃತ್ತ ಪ್ರೊಫೆಸರ್ ಗುಂಜೆಟ್ಟಿ, ಖಜಾಂಚಿ ಸ್ಥಾನಕ್ಕೆ ಉದ್ಯಮಿ ಎಸ್.ಎಂ. ಹೊಳೆಯಣ್ಣನವರ್. ಈ ಎಲ್ಲಾ ವರ್ತಕರೂ ಕಲ್ಲು, ಕಾಸು ಬಣ. ಈ ಎಲ್ಲ ವರ್ತಕರನ್ನು, ಉದ್ಯಮಿಗಳನ್ನು ಗುರ್ತಿ ಹಾಕಿ, ಅವರ ಹಾಗೆಯೇ ಚುನಾವಣೆಗಾಗಿ ಕಣ್ಣಿಟ್ಟಿದ್ದಾರೆ ಮಿಸ್ಟರ್ ಪಾಟೀಲ. ಈ ವರ್ತಕರೆಲ್ಲ ಸೇರಿ ಚುನಾವಣೆ ಎಂಬ ಉದ್ಯಮದಲ್ಲಿ ಬಂಡವಾಳ ಹೂಡಿ ಬಿಸಿನೆಸ್ ಶುರುಮಾಡಿದ್ದಾರೆ. ವಿದ್ಯಾವರ್ಧಕ ಸಂಘವನ್ನು ಈ ವರ್ತಕರು ವಿದ್ಯಾವರ್ತಕ ಸಂಘ ಎಂದು ಬದಲಾಯಿಸಿ ಬೋರ್ಡು ಬರೆಸಿದರೂ ಆಶ್ಚರ್ಯವಿಲ್ಲ. ■

ದಾವಣಗೆರೆ: ಅಂಬೇಡ್ಕರ್ ಭವನ ಪಾವಿತ್ರ್ಯಕ್ಕೆ ಧಕ್ಕೆಯಂತೆ!

ಚೆಡ್ಡಿ ಯಡಿಯೂರಪ್ಪ ಉಪಮುಖ್ಯಮಂತ್ರಿಯಾದ ಬೆನ್ನಲ್ಲೇ ತನ್ನ ಛೇಂಬರ್‌ನಲ್ಲಿನ ಅಂಬೇಡ್ಕರ್ ಭಾವಚಿತ್ರವನ್ನು ಹೊರಹಾಕಿಸಿ ಮನುವಾದವನ್ನು ಅಕ್ಷರಶಃ ಪಾಲಿಸುವ ವಿಫಲ ಯತ್ನವನ್ನು ಮಾಡಿ ಪ್ರಜ್ಞಾವಂತ ಸಮಾಜದಿಂದ ಛೀಮಾರಿಗೊಳಗಾಗಿದ್ದರು. ಯಡ್ಡಿಯ ಚಾಳಿಯನ್ನೇ ಚಾಚೂತಪ್ಪದೆ ಪಾಲಿಸುತ್ತಿರುವ ದಾವಣಗೆರೆಯ ಸಂಘಪರಿವಾರದ ಚೆಡ್ಡಿಗಳು 'ಪಾವಿತ್ರ್ಯಕ್ಕೆ ಧಕ್ಕೆಯಾಗುತ್ತದೆ' ಎಂದು ಅಂಬೇಡ್ಕರ್ ಭವನದ ನಿರ್ಮಾಣಕ್ಕೆ ಅಡ್ಡಿಯಾಗುತ್ತಿದ್ದಾರೆ.

ಹಿಂದೂ ಸಮಾಜೋತ್ಸವದ ಹೆಸರಿನಲ್ಲಿ ಸಂಘಪರಿವಾರದ ಕೋಮುವಾದಿಗಳು ದಲಿತರನ್ನು ಕೋಮುದ್ವೇಷದ ದಾಳಗಳನ್ನಾಗಿ ಮಾಡಿಕೊಳ್ಳಲು 'ಹಿಂದೂ ಆಗಿ ಹುಟ್ಟಿದ್ದೇನೆ, ಹಿಂದೂ ಆಗಿ ಸಾಯುವುದಿಲ್ಲ' ಎಂದಿದ್ದ ಅಂಬೇಡ್ಕರ್‌ರವರ ಭಾವಚಿತ್ರಗಳನ್ನೇ ಸಿಕ್ಕಾಪಟ್ಟೆ ಪ್ರದರ್ಶಿಸಿದ್ದರು. ಇಂತಹ ಮನೆಮುರುಕ ಕೆಲಸಗಳನ್ನು ಮಾಡಲು ಕೋಮುವಾದಿಗಳಿಗೆ ಅಂಬೇಡ್ಕರ್‌ರವರ ಹೆಸರು ಬೇಕು, ಕೋಮುಗಲಭೆಗಳಲ್ಲಿ ಬಡಿದಾಡಿ ಸಾಯಲು ದಲಿತರು ಬೇಕು, ಅಧಿಕಾರದ ಗದ್ದುಗೆಗೇರಲು ದಲಿತರ ಹೆಣಗಳ ಮೆಟ್ಟಿಲುಗಳೇ ಆಗಬೇಕು. ಆದರೆ ದಲಿತರ ಬದುಕಿನಾಸರೆಯಾದ ಅಂಬೇಡ್ಕರ್‌ರವರ ಚಿಂತನೆಗಳ ಮೂಲಕ ದಲಿತರು ಸಂಘಟಿತರಾಗುತ್ತಾರೆಂದರೆ, ಕೋಮುವಾದಿ ಚೆಡ್ಡಿಗಳಿಗೆ ಜಾಪಾಳ ಮಾತ್ರೆ ತಿಂದಂತಾಗುತ್ತದೆ! ಅದರಲ್ಲೂ ಎಲ್ಲ ಜನಾಂಗದವರ ನಡುವೆ ಅಂಬೇಡ್ಕರ್ ಭವನವನ್ನು ಕಟ್ಟಿಸಿಕೊಳ್ಳಲು ದಲಿತರು ಪ್ರಯತ್ನಿಸಿದರೆ ಇವರ ಚೆಡ್ಡಿಯೊಳಗೆ ತೊಣಚಿ ಹೊಕ್ಕಂತಾಗುತ್ತದೆ! ಇದೇ ಇಲ್ಲಿ ಆಗಿರುವುದು..

ಸಮಸ್ಯೆಯ ಕೇಂದ್ರ ಎಸ್.ಓ.ಜಿ. ಕಾಲನಿ

ಕೆ.ಶಿವರಾಮ್ ದಾವಣಗೆರೆಯ ಜಿಲ್ಲಾಧಿಕಾರಿಯಾಗಿದ್ದಾಗ ಎಲ್ಲ ಜಾತಿಯ ಬಡವರು ಒಂದೇ ಕಡೆ ವಾಸಿಸಲೆಂಬ ಉದ್ದೇಶದಿಂದ 17x20 ಅಡಿ ಅಳತೆಯ ನೂರಾರು



ಮನೆಗಳನ್ನು ನಿರ್ಮಿತಿ ಕೇಂದ್ರದ ವತಿಯಿಂದ ಕಟ್ಟಿಸಿ, ಮುಖ್ಯವಾಗಿ ಕೂಲಿಕಾರರು ಮತ್ತು ಆಟೋ ಡ್ರೈವರ್‌ಗಳು ಮುಂತಾದವರಿಗೆ ಇಂತಿಷ್ಟು ಸರ್ಕಾರಿ ದರ ನಿಗದಿಪಡಿಸುವುದರ ಮೂಲಕ ಈ ಮನೆಗಳನ್ನು ವಿತರಿಸಿದ್ದರು. ಮಹಾನಗರ ಪಾಲಿಕೆಯ 41ನೇ ವಾರ್ಡಿಗೆ ಸೇರಿರುವ, ದಾವಣಗೆರೆ ನಡುವಿನಿಂದ ಸುಮಾರು 8 ಕಿ.ಮೀ. ದೂರವಿರುವ ಈ ಸ್ಥಳವನ್ನು ಎ, ಬಿ, ಸಿ ಎಂದು ಮೂರು ಬ್ಲಾಕ್‌ಗಳಾಗಿ ವಿಂಗಡಿಸಿ ಎಸ್.ಓ.ಜಿ. (ಸ್ಪೆಷಲ್ ಆಕ್ಯುಪೇಶನ್ ಗ್ರೂಪ್) ಕಾಲನಿ ಎಂದು ಕರೆಯಲಾಯಿತು. ಈಗ ಸಮಸ್ಯೆ ಸೃಷ್ಟಿಯಾಗಿರುವುದು ಈ ಕಾಲನಿಯ ಬಿ-ಬ್ಲಾಕ್‌ನಲ್ಲಿ.

ಬಿ-ಬ್ಲಾಕ್‌ನ ನಡುವೆ ಸುಮಾರು ಎರಡೂವರೆ ಎಕರೆ ಸ್ಥಳವನ್ನು ಕಾಲನಿಯ ಮೂಲಭೂತ ಅವಶ್ಯಕತೆಗಳಿಗಾಗಿ ಬಿಡಲಾಗಿದೆ. ಇಲ್ಲಿನ ಅಂಬೇಡ್ಕರ್ ಸೇವಾ ಸಂಘದ ಪದಾಧಿಕಾರಿಗಳು ಖಾಲಿ ಇರುವ ಸ್ಥಳದಲ್ಲಿ ಅಂಬೇಡ್ಕರ್ ಭವನವನ್ನು ನಿರ್ಮಿಸಿ ಕೊಡುವಂತೆ ಮಹಾನಗರ ಪಾಲಿಕೆಗೆ ಅರ್ಜಿ ಸಲ್ಲಿಸಿದ್ದರ ಪ್ರಕಾರ ಖಾಲಿ ಇರುವ ಸ್ಥಳದ ಒಂದು ಮೂಲೆಯಲ್ಲಿ 40x 60 ಅಡಿ ಜಾಗವನ್ನು ಅಂಬೇಡ್ಕರ್ ಭವನಕ್ಕಾಗಿ ಮ.ನ.ಪಾ.ದವರು ಗುರುತಿಸಿ 2006-07ರ



ಶೇ. 18ರ ಮೀಸಲು ಹಣದಲ್ಲಿ 1 ಲಕ್ಷ ರೂ.ಗಳನ್ನೂ ಸಹ ಮಂಜೂರು ಮಾಡಿದ್ದಾರೆ. 2-12-2007ರಂದು ಅಂಬೇಡ್ಕರ್ ಭವನದ ಕಾಮಗಾರಿಗಾಗಿ ನಡೆದ ಭೂಮಿಪೂಜೆಯಲ್ಲಿ ಸ್ಥಳೀಯ ಬಿ.ಜೆ.ಪಿ. ಕಾರ್ಪೋರೇಟರ್ ನಾಗರತ್ನಮ್ಮ, ಬಿ.ಜೆ.ಪಿ. ಜಿಲ್ಲಾ ಉಪಾಧ್ಯಕ್ಷ ಹನುಮಂತಪ್ಪ ಒಳಗೊಂಡಂತೆ ಅಂಬೇಡ್ಕರ್ ಸೇವಾಸಮಿತಿಯ ಪದಾಧಿಕಾರಿಗಳಾದ ಹೆಗ್ಗೆರೆ ರಂಗಪ್ಪ, ಹೆಚ್.ಪ್ರಕಾಶ್, ಕೃಷ್ಣ ಮತ್ತು ಮಾರಿಕಾಂಬ ಹಾಗೂ ಸ್ತ್ರೀ ಶಕ್ತಿ ಸಂಘದ ಸದಸ್ಯರು, ಕ್ರೀಡಾಪಟುಗಳು ಭಾಗವಹಿಸಿದ್ದರು. ಈ ಬಗ್ಗೆ ಪತ್ರಿಕೆಗಳಲ್ಲಿ ಪ್ರಚಾರವೂ ಆಯಿತು. ಆದರೆ 14-12-2007ರಂದು ಅಂಬೇಡ್ಕರ್ ಭವನದ ಕಾಮಗಾರಿಯ ಗುತ್ತಿಗೆ ಹಿಡಿದಿರುವ ನಾರಾಯಣಿ ಮತ್ತು ಕೆಲಸಗಾರರು ಬಂದಾಗ ಕಾಮಗಾರಿ ಪ್ರಾರಂಭಿಸದಂತೆ ಅವರನ್ನು ತಡೆಯುವ ಮೂಲಕ ಸಂಘಪರಿವಾರದ ಕೋಮುವಾದಿಗಳು ತಮ್ಮ ದಲಿತ ವಿರೋಧಿ ನೀತಿಯನ್ನು ಬಹಿರಂಗಪಡಿಸಿದರು.

ಪಾವಿತ್ರ್ಯಕ್ಕೆ ಧಕ್ಕೆಯಾಗುತ್ತೆ, ದೂರ ಕಟ್ಟಿ

ಅಂಬೇಡ್ಕರ್ ಭವನದ ಭೂಮಿಪೂಜೆ ಸಂದರ್ಭದಲ್ಲಿ ಭಾಗವಹಿಸಿದ್ದ ಕಾರ್ಪೋರೇಟರ್ ನಾಗರತ್ನಮ್ಮ ಮತ್ತು ಬಿ.ಜೆ.ಪಿ.ಮುಖಂಡರಿಗೆ ರಾತ್ರೋರಾತ್ರಿ ಜ್ಞಾನೋದಯವಾಗಿ ತಮ್ಮ ನಿಲುವನ್ನು ಬದಲಿಸಿಕೊಂಡಿದ್ದಾರೆ. ಮುಖ್ಯವಾಗಿ 41ನೇ ವಾರ್ಡಿನ ಬಿ.ಜೆ.ಪಿ. ಅಧ್ಯಕ್ಷ ಚನ್ನವೀರಪ್ಪ ಎಂಬಾತನೊಂದಿಗೆ ಕಾರ್ಪೋರೇಟರುಗಳಾದ ವಸಂತ ಸಂಕೋಳ್ ಚಂದ್ರಶೇಖರ್ ಎಂಬುವವರು ಸೇರಿಕೊಂಡು ಅಂಬೇಡ್ಕರ್ ಭವನವನ್ನು ಇಲ್ಲಿ ಕಟ್ಟುವುದು ಬೇಡ, ದೇವಸ್ಥಾನದ ಪಾವಿತ್ರ್ಯಕ್ಕೆ ಧಕ್ಕೆ ಬರುತ್ತದೆ, ಬೇರೆ ಎಲ್ಲಾದರೂ ಕಟ್ಟಲಿ ಎಂದು ಜನರನ್ನು ಎತ್ತಿಕಟ್ಟಲು ಪ್ರಾರಂಭಿಸಿದ್ದಾರೆ. ಆದರೆ ಪಾವಿತ್ರ್ಯಕ್ಕೆ ಧಕ್ಕೆ ಎಂದು ಸಂಘಪರಿವಾರದವರು ಹುಯಿಲೆಬ್ಬಿಸುತ್ತಿರುವುದು ಎಸ್.ಓ.ಜಿ. ಕಾಲನಿಯ ಆಯಕಟ್ಟಿನ ಜಾಗವನ್ನು ಕಬಳಿಸುವುದಕ್ಕಾಗಿಯೇ ಎನ್ನುವ ಸತ್ಯವನ್ನು ಇಲ್ಲಿ ಮರೆಮಾಚಲಾಗುತ್ತಿದೆ.

ಗಣೇಶನ ಗುಡಿ ಮತ್ತು ಪಾವಿತ್ರ್ಯ

41ನೇ ವಾರ್ಡಿನ ಬಿ.ಜೆ.ಪಿ.ಅಧ್ಯಕ್ಷ ಚನ್ನವೀರಪ್ಪನೆಂಬುವವನು ಈ ವಿವಾದವನ್ನೆಬ್ಬಿಸುತ್ತಿರುವುದೇಕೆಂದರೆ, ಎಸ್.ಓ.ಜಿ.ಕಾಲನಿಯ ಖಾಲಿ ಜಾಗದ ನಟ್ಟನಡುವೆ 15x20 ಅಡಿ ಅಳತೆಯ ಜಾಗದಲ್ಲಿ ಒಂದು ಗಣಪತಿ ದೇವಸ್ಥಾನವನ್ನು ಇವನು ನಿರ್ಮಿಸಿಕೊಂಡಿದ್ದಾನೆ. ಶಾಲೆಯ ಕಾಂಪೌಂಡಿಗಾಗಿ ಇಟ್ಟಿದ್ದ ಸೈಜುಗಲ್ಲುಗಳನ್ನು ಮತ್ತು ಸಿಮೆಂಟ್‌ನ್ನು ಸಹಾ ಕದ್ದು ರಾತ್ರೋರಾತ್ರಿ ಈ ದೇವಸ್ಥಾನವನ್ನು ಕಟ್ಟಿದ್ದಾನೆ. ಇದರ ಸುತ್ತ 50x60 ಸುತ್ತಳತೆಯ ಜಾಗವನ್ನು ಆಕ್ರಮಿಸಿಕೊಂಡು ಟ್ರೆಂಚ್ ಕೂಡಾ ಹೊಡೆದುಕೊಂಡಿದ್ದಾನೆ. ಇವನು ದೇವಸ್ಥಾನದ ಒಂದು ಟ್ರಸ್ಟನ್ನೂ ಕೂಡಾ ರಚಿಸಿಕೊಂಡಿದ್ದಾನೆ. ಈ ಟ್ರಸ್ಟಿನಲ್ಲಿರುವವರು ಇವನ ಕುಟುಂಬದವರೇ ಹೊರತು ಹೊರಗಿನವರ್ಯಾರೂ ಅಲ್ಲ!

ಚೆನ್ನವೀರಪ್ಪ ಇಲ್ಲಿ ಗಣಪತಿ ದೇವಸ್ಥಾನವನ್ನು ಕಟ್ಟುವುದಕ್ಕಾಗಲೀ ಇದರ ಸುತ್ತಲಿನ ಜಾಗವನ್ನು ಪಡೆದುಕೊಳ್ಳುವುದಕ್ಕಾಗಲೀ ಮ.ನ.ಪಾ.ದಿಂದ ಯಾವುದೇ ಅನುಮತಿಯನ್ನು ಪಡೆದಿಲ್ಲವಾದರೂ "ಅಂಬೇಡ್ಕರ್ ಭವನವನ್ನು ದೇವಸ್ಥಾನದ ಹತ್ತಿರ ಕಟ್ಟಿದರೆ, ದೇವಸ್ಥಾನದ ಪಾವಿತ್ರ್ಯಕ್ಕೆ ಧಕ್ಕೆ ಬರುತ್ತದೆ. ಅದನ್ನು ಇಲ್ಲಿ ಕಟ್ಟುವುದು ಬ್ಯಾಡ, ಬ್ಯಾರೆ ಎಲ್ಲಾರ ಕಟ್ರಿ'' ಎಂದು ಊಳಿಡುತ್ತಿದ್ದಾನೆ.

ಈ ಚನ್ನವೀರಪ್ಪ ಬೆಳಿಗ್ಗೆ ಮತ್ತು ಸಂಜೆ ಶಾಲಾ ಮಕ್ಕಳನ್ನು ದೇವಸ್ಥಾನದ ಹತ್ತಿರ ಸೇರಿಸಿಕೊಂಡು ಈಗಾಗಲೇ ಆರ್.ಎಸ್.ಎಸ್. ಕವಾಯತನ್ನು ಪ್ರಾರಂಭಿಸಿದ್ದಾನೆ. ಫೈನಾನ್ಸ್, ಅಕ್ಕಿ ಅಂಗಡಿ ಮುಂತಾದ ವ್ಯವಹಾರಗಳನ್ನಿಟ್ಟುಕೊಂಡು ಲಾಸಾಗಿರುವ ಚನ್ನವೀರಪ್ಪ ಈ ದೇವಸ್ಥಾನ ಮತ್ತದರ ಸುತ್ತಲಿನ ಸ್ಥಳವನ್ನು ಕಬಳಿಸಿಕೊಂಡು ಬದುಕಲು ಮುಂದಾಗಿದ್ದಾನೆ. ಇದನ್ನು ಮರೆಮಾಚಲು ಅಪವಿತ್ರತೆಯ ಭೂತವನ್ನು ಇವನು ಮುಂದಿಡುತ್ತಿದ್ದಾನೆ. ಈ ಇಡೀ ಖಾಲಿ ಜಾಗವನ್ನು ಆಕ್ರಮಿಸಿಕೊಂಡು ಸಂಘಪರಿವಾರದ ಕೇಂದ್ರವನ್ನಾಗಿಸಿಕೊಳ್ಳಬೇಕೆಂಬ ಹುನ್ನಾರ ಇದರ ಹಿಂದಿರುವುದು ಸ್ಪಷ್ಟ. ಚನ್ನವೀರಪ್ಪನ ಕುತಂತ್ರಕ್ಕೆ ಪೂರಕವೆಂಬಂತೆ ಸಂಘಪರಿವಾರದ ಎಲ್ಲರೂ ಮಾಜೀ ಮಂತ್ರಿ ರವೀಂದ್ರನಾಥ್ ಮೊರೆಹೋಗುತ್ತಿದ್ದಾರೆ.

ನಗರಾಯುಕ್ತನ ನಖರಾ

ಬಿ.ಜೆ.ಪಿ.ಯವನೊಬ್ಬನ ಕುತಂತ್ರಕ್ಕೆ ಅವನ ಪಕ್ಷದವರು ಬೆಂಬಲಿಸುವುದು ಚೆಡ್ಡಿಗಳ ದೃಷ್ಟಿಯಲ್ಲಿ ಸರಿಯಿರಬಹುದು. ಆದರೆ ದಾವಣಗೆರೆ ಮಹಾನಗರ ಪಾಲಿಕೆ ಆಯುಕ್ತ ಪ್ರಾಣಲಿಂಗ ಶಿವಸಾಲಿ ಕೂಡ ಕೋಮುವಾದಿಗಳೊಂದಿಗೆ ತಾಳ ಹಾಕುತ್ತಾ "ಅದು ಪಾರ್ಕಿಗೆ ಬಿಟ್ಟಿರುವ ಜಾಗ, ಅಲ್ಲಿ ಅಂಬೇಡ್ಕರ್ ಭವನ ಕಟ್ಟುವುದು ಬೇಡ'' ಎನ್ನುತ್ತಿದ್ದಾನೆ. ನಗರದಿಂದ 8 ಕಿ.ಮೀ. ದೂರದಲ್ಲಿ ಪೆಟ್ಟಿಗೆಗೂಡಿನಂತಹ ಮನೆಗಳಲ್ಲಿ ವಾಸಿಸುತ್ತಿರುವ ಈ ಕಾಲೋನಿಯ ಜನರಿಗೆ ಮದುವೆ ಮುಂತಾದ ಕಾರ್ಯಕ್ರಮಗಳನ್ನು ಮಾಡಲು ಸಮುದಾಯ ಭವನದಂತಹ ಕನಿಷ್ಠ ಸೌಲಭ್ಯ ಬೇಕೇಬೇಕಾಗುತ್ತದೆ.

ಖಾಲಿ ಇರುವ ಜಾಗದಲ್ಲಿ ಆಸ್ಪತ್ರೆ, ಶಾಲೆ ಮುಂತಾದುವನ್ನು ಕಟ್ಟಿ ಅಲ್ಲಿನ ಜನರ ಮೂಲಭೂತ ಅವಶ್ಯಕತೆಗಳನ್ನು ಈಡೇರಿಸುವುದು ಬಿಟ್ಟು ಉದ್ಯಾನವನ ಮಾಡುತ್ತೇನೆನ್ನುತ್ತಿರುವ ಪ್ರಾಣಲಿಂಗನಿಗೆ ತಲೆ ನೆಟ್ಟಗಿಲ್ಲವೆನಿಸುತ್ತದೆ! ಏಕೆಂದರೆ ಅಂಬೇಡ್ಕರ್ ಭವನಕ್ಕೆ ಸೈಟನ್ನು ಅಳೆದು ಕೊಟ್ಟಿದ್ದು ದಾವಣಗೆರೆ ಮ.ನ.ಪಾ.ದ ಇಂಜಿನಿಯರ್ ಕಲ್ಲಪ್ಪ. ಈ ಭವನದ ನಿರ್ಮಾಣಕ್ಕಾಗಿ 1 ಲಕ್ಷ ರೂ. ಗಳನ್ನು ಬಿಡುಗಡೆ ಮಾಡಿದ್ದೂ ಕೂಡ ಮಹಾನಗರ ಪಾಲಿಕೆಯೇ. ಇದನ್ನು ಇಷ್ಟು ಬೇಗ ಮರೆತಿರುವ ಶಿವಸಾಲಿಯನ್ನು ಏನೆನ್ನಬೇಕು? ಅಧಿಕೃತವಾಗಿ ನಿರ್ಮಾಣಗೊಳ್ಳುತ್ತಿರುವ ಅಂಬೇಡ್ಕರ್ ಭವನದ ವಿರುದ್ಧ ಅಪಸ್ವರ ಎತ್ತುತ್ತಿರುವ ಇವನು, ಅನಧಿಕೃತವಾಗಿ ತಲೆಯೆತ್ತಿರುವ ಗಣೇಶನ ಗುಡಿಯ ಬಗ್ಗೆ ಮೌನ ವಹಿಸುತ್ತಿರುವುದೇಕೆ?

ಸಂಘಪರಿವಾರದ ಕುತಂತ್ರಗಳು

ಎಸ್.ಓ.ಜಿ. ಕಾಲನಿಯಲ್ಲಿ ಅಂಬೇಡ್ಕರ್ ಭವನವನ್ನು ಕಟ್ಟುವುದು ಬೇಡವೆನ್ನುವ ಕುತಂತ್ರಗಳನ್ನು ಸಂಘಪರಿವಾರದ ಚೆಡ್ಡಿಗಳು ರಾಜಕೀಯ ಹಾಗೂ ಅಧಿಕಾರಿ ವಲಯಗಳಲ್ಲಿ ಮಾತ್ರವೇ ಮಾಡುತ್ತಿಲ್ಲ, ದಲಿತರನ್ನೇ ಒಡೆದು ಆಳುವ ಮೂಲಕವೂ ತಮ್ಮ ಕುತಂತ್ರಗಳನ್ನು ಮುಂದುವರೆಸುತ್ತಿದ್ದಾರೆ! ಒಂದು ಕಡೆ ಎಸ್.ಓ.ಜಿ. ಕಾಲನಿಯ ಪಕ್ಕದಲ್ಲಿರುವ ರಾಮನಗರದಲ್ಲಿನ ದಲಿತರಿಗೆ "ನೀವು ಕಟ್ಟುತ್ತಿರುವ ಅಂಬೇಡ್ಕರ್ ಭವನಕ್ಕೆ ಹೆಚ್ಚಿನ ಅನುದಾನ ಕೊಡಿಸುತ್ತೇವೆ'' ಎಂದು ಎಸ್.ಓ.ಜಿ. ಕಾಲನಿಯ ಅಂಬೇಡ್ಕರ್ ಭವನದ ನಿರ್ಮಾಣದ ವಿರುದ್ಧ ಎತ್ತಿಕಟ್ಟುತ್ತಿದ್ದಾರೆ. ಇನ್ನೊಂದು ಕಡೆ, ಬುದ್ಧ ಬಸವ ಭೀಮ ನಗರದ ದಲಿತರಿಗೆ ಇಲ್ಲಸಲ್ಲದ ಆಶ್ವಾಸನೆಗಳನ್ನು ನೀಡಿ ಎಸ್.ಓ.ಜಿ. ಕಾಲನಿಯ ಜನರ ವಿರುದ್ಧ ಎತ್ತಿ ಕಟ್ಟುತ್ತಿದ್ದಾರೆ.

ಅಂಬೇಡ್ಕರ್ ಭವನದ ವಿರುದ್ಧದ ಸಂಘಪರಿವಾರದವರ ಕುತಂತ್ರಗಳು ಪ್ರಾರಂಭಗೊಂಡ ತಕ್ಷಣ ಅಂಬೇಡ್ಕರ್ ಸೇವಾ ಸಂಘದವರು ಮತ್ತು ಬಿ.ಎಸ್.ಪಿ. ಜಿಲ್ಲಾಧ್ಯಕ್ಷ ಆಲೂರು ಲಿಂಗರಾಜು ಹಾಗೂ ದ.ಸಂ.ಸ.ದವರು ಅಂಬೇಡ್ಕರ್ ಭವನವನ್ನು ಅಲ್ಲೇ ಕಟ್ಟುತ್ತೇವೆಂದು ಪತ್ರಿಕಾ ಗೋಷ್ಠಿಯನ್ನು ಕರೆದು ಘೋಷಿಸಿದ ನಂತರ ಸದ್ಯಕ್ಕೆ ಅಂಬೇಡ್ಕರ್ ಭವನದ ಕಾಮಗಾರಿ ಕುಂಟುತ್ತಾ ಪ್ರಾರಂಭಗೊಂಡಿದೆ.

ಅಂಬೇಡ್ಕರ್ ಭವನ ನಿರ್ಮಾಣದ ವಿರುದ್ಧ ಸಂಘಪರಿವಾರದವರ ಕುತಂತ್ರಗಳು ಹೀಗೆಯೇ ಮುಂದುವರೆದರೆ ಎಲ್ಲ ಪ್ರಗತಿಪರ ಮತ್ತು ದಲಿತ, ರೈತ ಸಂಘಟನೆಗಳು ಒಂದಾಗಿ ವೇದಿಕೆಯೊಂದನ್ನು ನಿರ್ಮಿಸಿಕೊಂಡು ಕೋಮುವಾದಿಗಳ ಕುತಂತ್ರಗಳಿಗೆ ಸವಾಲಾಗಿ ನಿಲ್ಲುವ ಪ್ರಯತ್ನಗಳು ಈಗಾಗಲೇ ನಡೆಯುತ್ತಿವೆ. ಇಂತಹ ಪ್ರಯತ್ನಗಳೇ ಬರಲಿರುವ ಚುನಾವಣೆಯಲ್ಲಿ ಸಂಘಪರಿವಾರದವರಿಗೆ ಸರಿಯಾದ ಪಾಠ ಕಲಿಸಲಿವೆ.

■ ಚಂದ್ರಶೇಖರ ತೋರಣಘಟ್ಟ

ಆದಿಕವಿ ಪಂಪ ಗ್ರಂಥಾಲಯ

ಶ್ರವಣಬೆಳಗೊಳದಲ್ಲಿ ಕಳೆದ ಮಹಾಮಸ್ತಕಾಭಿಷೇಕ ನಡೆದು ಮುಂದಿನ ಫೆಬ್ರವರಿಗೆ ಎರಡು ವರ್ಷವಾಗುತ್ತದೆ. ನೂರು ಕೋಟಿ ರೂಪಾಯಿ ವೆಚ್ಚದಲ್ಲಿ ನಡೆದ ಈ ಮಹಾಪೂಜೆಯ ಕುರುಹಾಗಿ ಈಗಲ್ಲಿ ಉಳಿದಿರುವುದು ಬೆಟ್ಟದ ತಪ್ಪಲಿನ ಹೈಟೆಕ್ ಗ್ರಂಥಾಲಯ!

ಅಂದು ಮಹಾಮಸ್ತಕಾಭಿಷೇಕ ನೂರು ಕೋಟಿ ರೂ.ಗಳ ವೆಚ್ಚದಲ್ಲಿ ಜರುಗಲಿದೆ ಎಂಬ ವಿಷಯ ಗೊತ್ತಾದಾಗ ಕಾರ್ಯ ಪ್ರವೃತ್ತರಾದ ಗ್ರಂಥಾಲಯ ಇಲಾಖೆಯ ನಿರ್ದೇಶಕ ಪಿ.ವೈ. ರಾಜೇಂದ್ರಕುಮಾರ್ ಸದರಿ ಹಣದಲ್ಲಿ ಗ್ರಂಥಾಲಯ ಇಲಾಖೆಗೆ ಏನಾದರೂ ಮಾಡಬೇಕೆಂದು ತೀರ್ಮಾನಿಸಿದರು. ಕೂಡಲೇ ಹೈಟೆಕ್ ಗ್ರಂಥಾಲಯದ ನಕ್ಷೆಯೊಂದಿಗೆ ಚಾರುಕೀರ್ತಿ ಸ್ವಾಮೀಜಿಯವರನ್ನು ಭೇಟಿ ಮಾಡಿ "ಸ್ವಾಮೀ, ಮಹಾಮಸ್ತಕಾಭಿಷೇಕ ಅದ್ಧೂರಿಯಿಂದ ನಡೆದು ಹೋಗುತ್ತದೆ. ಮಂಜೂರಾದ ಹಣವೆಲ್ಲಾ ಖರ್ಚಾಗುತ್ತದೆ. ಆದರೆ ಇದರಲ್ಲಿ ಶಾಶ್ವತವಾದ ಕೆಲಸವೊಂದು ಜರುಗಬೇಕಿದೆ. ಅದೇನೆಂದರೆ ನೀವೊಂದು ಸೈಟ್ ಕೊಟ್ಟರೆ ರಾಜ್ಯದಲ್ಲೇ ವಿಶಿಷ್ಟ ಎನ್ನಬಹುದಾದ ಗ್ರಂಥಾಲಯ ಕಟ್ಟಬಹುದು" ಎಂಬ ಸಲಹೆ ಕೊಟ್ಟರು. ಅದಕ್ಕೆ ಸ್ವಾಮಿಗಳು "ಸೈಟನ್ನು ನೀವೇ ನೋಡಿಕೊಂಡು ಬನ್ನಿ. ನಿಮಗೊಪ್ಪಿಗೆಯಾದ ಜಾಗವನ್ನು ಮರುಮಾತಿಲ್ಲದೆ ಕೊಡುತ್ತೇವೆ" ಎಂದರು. ಸುದೈವಕ್ಕೆ ಬೆಟ್ಟದ ತಪ್ಪಲಲ್ಲೇ ಸೂಕ್ತವಾದ ಜಾಗ ಸಿಕ್ಕಿತು.

ಜಾಗದ ಸಮಸ್ಯೆ ಬಗೆಹರಿದ ನಂತರ, ಅಂದು ಹಾಸನದ ಅಧಿಕೃತ ಸಿ.ಎಂ.ರಂತಿದ್ದ ರೇವಣ್ಣನ ಬಳಿಗೆ ಹೋಗಿ ಆ ಜಾಗದಲ್ಲಿ ಒಂದು ಅಪರೂಪದ ಗ್ರಂಥಾಲಯ ಕಟ್ಟುವ ವಿಷಯವನ್ನು ಹೇಳಿ ಅದಕ್ಕಾಗಿ 1 ಕೋಟಿ 72 ಲಕ್ಷ ರೂ. ಖರ್ಚಾಗುತ್ತವೆ ಎಂದು ಪ್ರಸ್ತಾಪಿಸಿದರು. ಒಂದೂವರೆ ಕೋಟಿಯನ್ನು ಕೂಡಲೇ ಬಿಡುಗಡೆ ಮಾಡಿಸಿದ ರೇವಣ್ಣ "ಅಧಿಕಾರಿಗಳು ಯಾವುದೇ ತಕರಾರು ತೆಗೆಯದಂತೆ ರಾಜೇಂದ್ರಕುಮಾರ್ ಸಲಹೆಗಳಿಗೆ ಮಾನ್ಯತೆ ಕೊಟ್ಟು ಗ್ರಂಥಾಲಯ ಕಟ್ಟಡ ಮುಗಿಸಬೇಕು" ಎಂದು ತಾಕೀತು ಮಾಡಿದರು. ಹಾಗೆ ನೋಡಿದರೆ, ಈ ದೇಶ ಕಟ್ಟುವ ಬಹುತೇಕ ಜನ ರೇವಣ್ಣನಷ್ಟೇ ಓದಿಕೊಂಡಿರುವುದರಿಂದ ಅಂತವರಿಗೆ ಕಟ್ಟಡಗಳೇ ಮುಖ್ಯ. ಅದರೊಳಗಿನ ಆಡಳಿತದ ಮುಂದುವರಿಕೆ ಏನಿದ್ದರೂ ಓದಿಕೊಂಡವರ ಕೆಲಸ!

ತರಾತುರಿಯಲ್ಲಿ ಎದ್ದು ನಿಂತ ಈ ಹೈಟೆಕ್ ಗ್ರಂಥಾಲಯದ ಎರಡು ಮಹಡಿಗಳಲ್ಲಿ ಜಗತ್ತಿನ ಮಾಹಿತಿ ತುಂಬಿಕೊಂಡ ಗ್ರಂಥಾಲಯವಿದೆ ಹಾಗು ಅತ್ಯಾಧುನಿಕ ಸಭಾಂಗಣವಿದೆ. ಮೊದಲ ಮಹಡಿಯಲ್ಲಿ ಸಾರ್ವಜನಿಕ ಗ್ರಂಥಾಲಯ ಕಾರ್ಯ ನಿರ್ವಹಿಸುತ್ತಿದೆ.

ಗ್ರಾನೈಟ್ ಶಿಲೆಯ ನೆಲಹಾಸಿನಿಂದ ಹೊಳೆಯುವ ಈ ಕಟ್ಟಡ ಮತ್ತದರ ಪ್ರಶಾಂತತೆ ಗಮನಿಸುತ್ತ ಹೋದಂತೆ, ಇದು ನಿಜಕ್ಕೂ ನಮ್ಮ ರಾಜ್ಯದ ಸರ್ಕಾರಿ ಗ್ರಂಥಾಲಯವೆ? ಎಂಬ ಉದ್ಗಾರ ತೆಗೆಯುವಂತೆ ಮಾಡುತ್ತದೆ.


ಶ್ರವಣಬೆಳಗೊಳದ ಹೈಟೆಕ್ ಗ್ರಂಥಾಲಯ

ಈ ಅಪೂರ್ವ ಗ್ರಂಥಾಲಯಕ್ಕೆ ಆದಿಕವಿ ಪಂಪನ ಹೆಸರಿಡಲಾಗಿದೆ. ದೇಶ ವಿದೇಶಗಳಿಂದ ಬಂದು ಓದುವ ಓದುಗರೊಟ್ಟಿಗೆ ನಮ್ಮ ಹಳ್ಳಿ ಹುಡುಗರು ಓದುವ ವ್ಯವಸ್ಥೆಯಿದೆ. ಜೈನ ಧರ್ಮ ಕುರಿತು ಅಧ್ಯಯನ ಮಾಡಬಲ್ಲವರಿಗಂತೂ ಇದು ದೇಶಕ್ಕೆ ಮಾದರಿಯಾದ ಗ್ರಂಥಾಲಯ. ಕುಷನ್‌ಚೇರ್‌ಗಳು, ಎಂಥ ಬಿಸಿಲಲ್ಲೂ ತಂಪಾಗಿರುವ ಹವಾಗುಣ, ಬೇಕಾದ ಮಾಹಿತಿ ಪಡೆಯಲು ಡಿಜಿಟಲ್ ತಂತ್ರಜ್ಞಾನ, ಅಂತರ್ಜಾಲ ಸೌಲಭ್ಯ, ಇವೆಲ್ಲವನ್ನು ಒಳಗೊಂಡ ಈ ಗ್ರಂಥಾಲಯಕ್ಕೆ ಮುಂದೆ ಒಂದು ಲಕ್ಷ ಗ್ರಂಥಗಳ ಸೇರ್ಪಡೆಯಾಗಲಿದೆ.


ಹೈಟೆಕ್ ಗ್ರಂಥಾಲಯದ ಒಳಾಂಗಣ ನೋಟ

ರಾಜೇಂದ್ರಕುಮಾರ್ ಈ ಗ್ರಂಥಾಲಯ ಮುಗಿಸಿ ಸುಮ್ಮನಾಗಿಲ್ಲ. ಮುಧೋಳದಲ್ಲಿ ಒಂದು ಕೋಟಿ ಹದಿನೈದು ಲಕ್ಷದಲ್ಲಿ ರನ್ನನ ಹೆಸರಿನ ಗ್ರಂಥಾಲಯ ಪ್ರಾರಂಭಿಸುತ್ತಿದ್ದಾರೆ. ಹಾಗೆಯೇ ಗುಲ್ಬರ್ಗಾದಲ್ಲಿ ನಾಲ್ಕು ಕೋಟಿ ರೂ.ಗಳ ವೆಚ್ಚದಲ್ಲಿ ಹೈಟೆಕ್ ಗ್ರಂಥಾಲಯವೊಂದು ನಿರ್ಮಾಣಗೊಳ್ಳಲಿದೆ. ಜೊತೆಗೆ, ಹುಬ್ಬಳ್ಳಿಯಲ್ಲೂ ನಾಲ್ಕೂವರೆ ಕೋಟಿ ರೂ.ಗಳ ವೆಚ್ಚದಲ್ಲಿ ಹೈಟೆಕ್ ಗ್ರಂಥಾಲಯ ಶುರುವಾಗಲಿದೆ.

ಈಗ ಕರ್ನಾಟಕದಲ್ಲಿ ಆರು ಸಾವಿರ ಗ್ರಂಥಾಲಯಗಳಿವೆ. ನಜೀರ್ ಸಾಹೇಬರು ಅಧಿಕಾರ ವಿಕೇಂದ್ರೀಕರಣ ತಂದು ಪಂಚಾಯ್ತಿಗಳನ್ನು ಮಾಡಿದರು. ಸರ್ಕಾರ ಪಂಚಾಯ್ತಿಗೊಂದು ಗ್ರಂಥಾಲಯ ಮಂಜೂರು ಎಂದಿತು. ಈ ಕಾರಣಕ್ಕೆ ಕರ್ನಾಟಕದಲ್ಲಿಂದು ಪ್ರತಿ ಪಂಚಾಯ್ತಿಗೊಂದು ಗ್ರಂಥಾಲಯವಲ್ಲದೆ ಹೆಚ್ಚುವರಿ 79 ಗ್ರಂಥಾಲಯಗಳಿವೆ. ಏಕೆಂದರೆ ಮಂತ್ರಿ, ಮಹೋದಯರು ಹೆಚ್ಚಿನ ಪ್ರಭಾವ ಬೀರಿ ತಮ್ಮ ಕ್ಷೇತ್ರಗಳಿಗೆ ಹೆಚ್ಚು ಗ್ರಂಥಾಲಯ ಮಂಜೂರು ಮಾಡಿಸಿಕೊಂಡಿದ್ದಾರೆ. ಇಲ್ಲಿ ಗ್ರಂಥಾಲಯದ ಉದ್ದೇಶಕ್ಕಿಂತ ನಮ್ಮದೊಂದು ಹುಡುಗನಿಗೆ ಕೆಲಸ ಸಿಕ್ಕರೆ ಸಾಕು ಎಂಬ ಮನೋಭಾವವೇ ಜಾಸ್ತಿ. ಇದರ ಫಲವಾಗಿ ಕೆಲವು ಪಂಚಾಯ್ತಿ ಗ್ರಂಥಾಲಯ ಬಾಗಿಲು ಹಾಕಿವೆ. ಇವುಗಳನ್ನು ತೆರೆಸಿ, ಅವುಗಳ ಸದುಪಯೋಗಪಡಿಸಿಕೊಳ್ಳುವುದು ಆಯಾ ಪಂಚಾಯ್ತಿ ಜನಗಳಿಗೆ ಸೇರಿದ ಹೊಣೆಯೇ ಹೊರತು ಜಿಲ್ಲೆ ಅಥವಾ ಬೆಂಗಳೂರಿನ ಅಧಿಕಾರಿಗಳು ಏನೂ ಮಾಡಲಾಗುವುದಿಲ್ಲ.

ಸುವರ್ಣ ಕರ್ನಾಟಕದ ಫಲವಾಗಿ ರಾಜೇಂದ್ರಕುಮಾರ್ ಮಾಡಿರುವ ಇನ್ನೊಂದು ಮಹತ್ವದ ಕೆಲಸವನ್ನಿಲ್ಲಿ ದಾಖಲಿಸಲೇಬೇಕಿದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಲೇಖಕರ ಕೃತಿಯನ್ನು ಪ್ರಕಟಿಸಿ ಅವುಗಳನ್ನು ಗ್ರಾಮ ಪಂಚಾಯ್ತಿ ಗ್ರಂಥಾಲಯಗಳಿಗೆ ಹಂಚಲಿದ್ದಾರೆ. ಈಗಾಗಲೇ 50 ಪುಸ್ತಕಗಳಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ಪ್ರತಿ ಪುಸ್ತಕದ 1250 ಪ್ರತಿಗಳನ್ನು ಇದೀಗ ತಾನೆ ಕಣ್ಣು ಬಿಡುತ್ತಿರುವ ಗ್ರಾಮೀಣ ಗ್ರಂಥಾಲಯಗಳಿಗೆ ಹಂಚುವ ಸಾಧನೆಯೆ.

ಇಂತಹದೊಂದು ಮಹತ್ಕಾರ್ಯದಿಂದ
ಇಡೀ ಸಾಹಿತ್ಯ ಒಂದೇ ಸಂಪುಟದಲ್ಲಿ ಸಿ
ಹರಣಿಗೆ, ಗಿರೀಶ್ ಕಾರ್ನಾಡರ ಎಲ್ಲ ನಾಟ
ಸಂಪುಟದಲ್ಲಿ ಸಿಗುತ್ತದೆ. ಇದರೊಟ್ಟಿಗೆ ಜ್ಞಾನ
ಮತ್ತು ಪಂಪ ಪ್ರಶಸ್ತಿ ವಿಜೇತ ಪುಸ್ತಕ
ಗ್ರಾಮೀಣ ಗ್ರಂಥಾಲಯಗಳನ್ನು ತುಂಬ
ಅಮೆರಿಕ ಇನ್ನಿತರೆ ದೇಶಗಳಲ್ಲಿರುವ
ಸಂಘಗಳಿಗೆ ಕನ್ನಡದ ಪ್ರಶಸ್ತಿ ವಿಜೇತ ಲೇ
ಕೃತಿಗಳನ್ನು ಕಳುಹಿಸಿಕೊಡುವ ವ್ಯವಸ್ಥೆ
ಇದನ್ನು ನಿಜಕ್ಕೂ ಗ್ರಂಥಾಲಯ ಚಳವಳಿ

ಈ ಎಲ್ಲ ಯೋಜನೆಗಳೊಂದಿಗೆ
ಕಾರ್ನಿಗಿ ಮೆಲ್ಲಾನ್ ವಿಶ್ವವಿದ್ಯಾನಿಲಯದ
ದೊಂದಿಗೆ, ಒಂದು ಲಕ್ಷ ಕನ್ನಡ ಪುಸ್ತಕಗಳ
ಮಾಡಿ ಅಂತರ್ಜಾಲಕ್ಕೆ ಅಳವಡಿಸುವ ಮ
ಪುಸ್ತಕ ವಿಶ್ವವ್ಯಾಪಿಗೊಳಪಡಲಿವೆ.

ಈ ಹಿ
ಅಧ್ಯಯನ
ವಾಗಿದ್ದ ಗ್ರ
ವೀಗ ಮಾ
ಕೇಂದ್ರವಾಗಿ
ಮಾರ್ಪಡು
ಸುವರ್ಣ ಕರ್ನಾಟಕ
ವಾಹಿನಿಯಲ್ಲಿ ಕನ್ನಡದ
ಸಿನಿಮಾ, ಭಾವಗೀತೆ,
ಗಳೆಲ್ಲಾ ಸೇರಿಹೋಗಿವೆ.
ತಯಾರಾದ "ಸತಿ ಸುಲೋ
ದಿಂದ ಹಿಡಿದು ಇತ್ತೀಚ
ವರೆಗೂ ಸುಮಾರು ಎ
ಕನ್ನಡ ಚಿತ್ರಗಳು ಅಂತ
ಯಲ್ಲಿ ಸೇರಿಹೋಗಿವೆ. ಅ
ಕ್ರಮದಲ್ಲಿ ತಮಗೆ ಬೇಕ
ಮತ್ತು ಹಾಡುಗಳನ್ನು ಸ

ಇದೆಲ್ಲಾ ಸರಿ, ಆ
ಒಂದು ಸಾವಿರ ರೂಪಾ
ಧನದಲ್ಲಿ ಈ ಗ್ರಾಮ
ಗ್ರಂಥಾಲಯದ ಮೇಲ್ವಿಚ
ಜೀವನ ಮಾಡುತ್ತಿದ್ದಾರೆಂಬುದನ್ನೂ ಸರ್ಕಾ
ಬೇಕಿದೆ!

ಒಂದೂರಿಗೆ ಒಂದು ಪ್ರೈಮರಿ
ಅಗತ್ಯವೋ ಅಷ್ಟೇ ಅಗತ್ಯ ಒಂದು ಪುಟ್ಟ
ಆದರೆ ಪ್ರೈಮರಿ ಶಾಲೆಗೆ ಖಾಯಮ್ಮಾ
ಧ್ಯಾಯನಿದ್ದಾನೆ. ಹಾಗೆಯೇ ಗ್ರಂಥಾಲ
ಚಾರಕನೂ ಖಾಯಮ್ಮಾಗುವುದು ನ್ಯಾಯ
ಗ್ರಂಥಾಲಯ ಚಳವಳಿ ಪೂರ್ಣಗೊಂಡ

-ವ


ಚೆಡ್ಡಿಗಳ ಕುತಂತ್ರ: ಸೂಳಿಭಾವಿ ಬಂ

ಇದೀಗ ತಾನೆ ಮಾಜಿಯಾಗಿರುವ ಬಾಗಲಕೋಟೆಯ ಚೆಡ್ಡಿ ಶಾಸಕರ ವಿಕೃತ ಕುಮ್ಮಕ್ಕಿನಿಂದಾಗಿ ಹೆಂಡ ಕುಡಿದ ಮಂಗಗಳಂತಾಗಿರುವ ಸಂಘ ಪರಿವಾರದ ಮರಿ ಹಿಟ್ಲರ್‌ಗಳು ನೆಮ್ಮದಿಯ, ಸ್ವಾಭಿಮಾನದ ಬದುಕಿಗಾಗಿ ಹೋರಾಡುತ್ತಿರುವ ಇಲ್ಲಿನ ಜನತೆಯ ವಿರುದ್ಧ ಸಮರ ಸಾರಿದ್ದಾರೆ. ಇದರ ಭಾಗವಾಗಿಯೇ ಮೊನ್ನೆ 19 ನೇ ತಾರೀಖು ಪ್ರಗತಿಪರ ಹೋರಾಟಗಾರ ಬಸವರಾಜ ಸೂಳಿಭಾವಿಯವರನ್ನು ಸುಳ್ಳು ಕೇಸಿನಡಿ ಬಂಧಿಸಲಾಗಿತ್ತು.

ಬಸವ ಬದುಕಿದ್ದ ನೆಲ ಕೂಡಲಸಂಗಮಕ್ಕೆ ಗಜ ದೂರದಲ್ಲಿರುವ ಹಿರೇಮ್ಯಾಗೇರಿ ಎಂಬ ಗ್ರಾಮದಲ್ಲಿ ಸೆಪ್ಟೆಂಬರ್ 30 ರಂದು ಹಗೆ ಜಮೀನಿಗೆ ಸಂಬಂಧಿಸಿದ ಸಣ್ಣ ವಿವಾದದಲ್ಲಿ ಪಾವಡೆಪ್ಪ ಚಲವಾದಿ ಎಂಬ ದಲಿತನ ಮೇಲೆ ನಾಲ್ಕು ಜನ ಸವರ್ಣೀಯರು ಮಾರಣಾಂತಿಕ ಹಲ್ಲೆ ನಡೆಸಿದ್ದರು. ಹಲ್ಲೆಗೊಳಗಾದವನನ್ನು ಸಂತೈಸಿ, ಸಮಾಧಾನಪಡಿಸಬೇಕಾಗಿದ್ದ ಇಲ್ಲಿನ ಮೇಲ್ಜಾತಿ ಮುಖಂಡರು ಹಲ್ಲೆ ಮಾಡಿದ ಕಿಡಿಗೇಡಿಗಳ ಪರ ವಕಾಲತ್ತು ವಹಿಸಿ ಯಾವುದೇ ಕಾರಣಕ್ಕೂ ಪೊಲೀಸರಿಗೆ ದೂರು ನೀಡಬಾರದೆಂದು ಪಾವಡೆಪ್ಪರ ಮೇಲೆ ಒತ್ತಡ ಹೇರಿದ್ದಾರೆ. ಇದನ್ನು ಲೆಕ್ಕಿಸದ ಪಾವಡೆಪ್ಪ ನ್ಯಾಯಕ್ಕಾಗಿ ಪೊಲೀಸರ ಮೊರೆ ಹೋಗಿದ್ದಾರೆ. ಇದನ್ನೇ ಮಹಾಪರಾಧವೆಂಬಂತೆ ಗ್ರಹಿಸಿದ ಕೆಲ ಜಾತಿವಾದಿ ಮುಖಂಡರು ಊರಿನ ಹನುಮಂತ ದೇವಸ್ಥಾನದಲ್ಲಿ ಊರಿನ ಜನರನ್ನು ಸೇರಿಸಿ ಇಡೀ ದಲಿತ ಸಮುದಾಯದ ಮೇಲೆ ಬಹಿಷ್ಕಾರ ಹಾಕುವಂತೆ ಫರ್ಮಾನು ಹೊರಡಿಸಿದ್ದಾರೆ.

ಸದಾ ಚರಂತಿಮಠನ ಸೇವೆಯಲ್ಲಿಯೇ ಜನಾರ್ದನನನ್ನು ಕಾಣುತ್ತಿರುವ ಇಲ್ಲಿನ ಜಾತಿವಾದಿ ಜಿಲ್ಲಾಧಿಕಾರಿ ಜಿ.ಎನ್. ನಾಯಕ ದಲಿತರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿಯೇ ಇಲ್ಲ, ಸ್ವತಃ ಅಸ್ಪೃಶ್ಯತೆ ನಿರ್ಮೂಲನಾ ಸಮಿತಿಯ ಅಧ್ಯಕ್ಷನಾಗಿರುವ ಈ ಕೋಡಂಗಿ ಅನ್ಯಾಯಕ್ಕೆ ಸ್ಪಂದಿಸದೇ ಹೋದಾಗ ಕರ್ನಾಟಕ ಸೌಹಾರ್ದ ವೇದಿಕೆಯ ಬಸವರಾಜ್ ಸೂಳಿಭಾವಿ, ದಲಿತ ಸಂಘರ್ಷ ಸಮಿತಿ (ಭೀಮವಾದ)ಯ ತಿಪ್ಪಣ್ಣ ನೀಲನಾಯಕ ನೇತೃತ್ವದಲ್ಲಿ ದಲಿತರು ಬೀದಿಗಿಳಿದು ಧರಣಿ ಪ್ರಾರಂಭಿಸಿದ್ದಾರೆ.

ಸಮಾಜ ಕಲ್ಯಾಣ ಇಲಾಖೆ ಹಾಗು ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ ಈ ಘಟನೆಯ ಬಗ್ಗೆ ಸ್ಪಷ್ಟವಾದಂತಹ ವರದಿ ನೀಡಿದರೂ ಅದ್ಯಾಕೋ ಡಿ.ಸಿ. ನಾಯಕನಿಗೆ ದಲಿತರ ಮೇಲೆ ನಂಬಿಕೆನೇ ಬರಲಿಲ್ಲ. ಮಾತುಕತೆಗೆ ಕರೆದ ಇವನು ತಾನೊಬ್ಬ ಜವಾಬ್ದಾರಿಯುತ ಜಿಲ್ಲಾಧಿಕಾರಿ ಎಂಬುದನ್ನೇ ಮರೆತು ಆಪಾದಿತರ ಪರ ವಾದ ಶುರು ಹಚ್ಚಿದ್ದಾನೆ. ಬಹಿಷ್ಕಾರ ನಡೆದೇ ಇಲ್ಲ ಎಂದು ಪಟ್ಟು ಹಿಡಿದಿದ್ದಾನೆ. ಜಿಲ್ಲಾದಳಿತದ ಈ ಪೂರ್ವಾಗ್ರಹ ಪೀಡಿತ ನಿಲುವನ್ನು ಖಂಡಿಸಿ ಸೂಳಿಭಾವಿ, ನೀಲನಾಯಕ ಮುಂತಾದವರು ಸಭೆ ಬಹಿಷ್ಕರಿಸಿ ಹೋರಾಟದ ಮೂಲಕ ಉತ್ತರಿಸುವುದಾಗಿ ಹೇಳಿದ್ದಾರೆ. ಇದೆಲ್ಲವನ್ನು ಗಮನಿಸಿದ ಚರಂತಿಮಠ ಅದಾಗಲೇ ಸಂಘ ಪರಿವಾರದ ವಿರುದ್ಧ ಧ್ವನಿಯಾಗಿದ್ದ ಸೂಳಿಭಾವಿಯವರನ್ನು ಬಂಧಿಸುವ ತಂತ್ರ ರೂಪಿಸಿದ್ದಾನೆ.


ಬಸವರಾಜ ಸೂಳಿಭಾವಿ

ಯಾವತ್ತೂ ದಲಿತರ ಪರ ಮಾತನಾಡದ, ದಲಿತ ಸಂಘಟನೆಯೊಂದರ ಮುಖಂಡನಾಗಿರುವ ಮುತ್ತಣ್ಣ ಬೆಣ್ಣೂರನೆಂಬ ಗಿರಾಕಿಯನ್ನು ಸೂಳಿಭಾವಿಯ ಮೇಲೆ ಛೂಬಿಟ್ಟಿದ್ದಾನೆ. ಈ ಬೆಣ್ಣೂರ್ ತನ್ನ ಅಳಿಯ ಶಶಿಕಾಂತ ಅಚ್ಚು ಎಂಬುವವನಿಂದ ಸೂಳಿಭಾವಿ ಹಾಗೂ ನೀಲನಾಯಕರ ಮೇಲೆ ಹಲ್ಲೆ ಕೇಸು ದಾಖಲಿಸಿದ್ದಾನೆ.

ಸತ್ಯ ಗೊತ್ತಿದ್ದು, ಆತ್ಮಸಾಕ್ಷಿಗೆ ಹೆದರಿದ ಪೊಲೀಸರು ಕೇಸು ದಾಖಲಿಸಿಕೊಂಡು ಸುಮ್ಮನಾಗಿದ್ದಾರೆ.

ತಮಗಾದ ಅನ್ಯಾಯದ ವಿರುದ್ಧ ಸೂಳಿಭಾವಿ ನೇತೃತ್ವದಲ್ಲಿ ಬಹಿಷ್ಕೃತ ದಲಿತರು ಹಿರೇಮ್ಯಾಗೇರಿಯಿಂದ ಬಾಗಲಕೋಟೆವರೆಗೆ ಎರಡು ದಿನಗಳ ಕಾಲ ಕಾಲ್ನಡಿಗೆ ಜಾಥಾ ನಡೆಸಿದ್ದಾರೆ. ಇದಾದ ಎರಡು ದಿನಗಳ ನಂತರ ಕಾಂಗ್ರೆಸ್ ನಾಯಕ ಎಸ್.ಆರ್. ಪಾಟೀಲ್ ಉಪಸ್ಥಿತಿಯಲ್ಲಿ ನಡೆದ ಮಾತುಕತೆಯಲ್ಲಿ ಜಿಲ್ಲಾಧಿಕಾರಿ ತನ್ನ ಹೇಳಿಕೆ ಹಿಂದಕ್ಕೆ ಪಡೆದು ನ್ಯಾಯ ಒದಗಿಸುವ ಭರವಸೆ ನೀಡಿದ ನಂತರ ಹೋರಾಟವನ್ನು ತಾತ್ಕಾಲಿಕವಾಗಿ ಅಂತ್ಯಗೊಳಿಸಲಾಗಿದೆ.

ನಂತರ 19.12.07 ರಂದು ಸಾಗರದಲ್ಲಿ ಕಾಕೋರಿ ಹುತಾತ್ಮರ ಸ್ಮರಣ ಸಮಾವೇಶವನ್ನು ಇದೇ ಸೂಳಿಭಾವಿ ಮುಂದಾಳತ್ವದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ಸಭೆಗೆ ಜನಪರ ಚಿಂತಕ ಬಾಬಯ್ಯನವರನ್ನು ಆಹ್ವಾನಿಸಿದ್ದಾರೆ.

ಈ ಸಭೆಯ ಬಗ್ಗೆ ಗೊತ್ತಾಗುತ್ತಿದ್ದಂತೆ ಸೂಳಿಭಾವಿ ಜಿಲ್ಲೆಯಲ್ಲಿ ನಕ್ಸಲ್ ಚಟುವಟಿಕೆ ಆರಂಭಿಸಿದ್ದಾರೆ. ಬಾಬಯ್ಯನವರನ್ನು ಜಿಲ್ಲೆಗೆ ಬರದಂತೆ ತಡೆಯಬೇಕು,

ದಾಖಲಾದ ಕೇಸಿನಡಿ ಸೂಳಿಭಾವಿಯನ್ನು
ಇಲ್ಲದಿದ್ದರೆ ಜಿಲ್ಲೆ ಬಂದ್ ಮಾಡುತ್ತೆ
ಚೆಡ್ಡಿಗಳು ಗಲಾಟೆ ಶುರು ಹಚ್ಚಿಕೊಂಡಿ
ಮಠನಿಗೆ ಈ ಕುರಿತು ದುಂಬಾಲು ಬ

ಇದ್ಯಾವುದನ್ನೂ ಲೆಕ್ಕಿಸದ ಸೂಳಿಭಾ
ಆರಂಭಿಸಿದ್ದಾರೆ. ಇದಕ್ಕೆ ವಿರುದ್ಧವಾಗಿ
ಮೆರವಣಿಗೆ ಮಾಡಿ ಸೂಳಿಭಾವಿಯನ್ನು
ಚರಂತಿಮಠನ ಮೂಲಕ ಒತ್ತಡ ತಂದಿ

ಸಮಾವೇಶ ಮುಗಿದ ನಂತರ ಹೋ
ಉಳಿದುಕೊಂಡಿದ್ದ ಸೂಳಿಭಾವಿ ಹಾಗು
ರನ್ನು ಏಕಾಏಕಿ ರಾತ್ರಿ 8 ಗಂಟೆಗೆ ಬಂಧಿಸಿ
ನ್ಯಾಯಾಧೀಶರ ಮುಂದೆ ಹಾಜ
ಜಾಮೀನು ಪಡೆದು ಹೊರಬಂದಿದ್ದಾರೆ

ಆಲಮಟ್ಟಿಯ ಹಿನ್ನೀರಿಗೆ ಬದುಕನ್ನು
ರುವ ಜಿಲ್ಲೆಯ ಬಹುಪಾಲು ಜನ
ನರಕಸದೃಶ್ಯವಾಗಿ ನಲುಗಿ ಹೋಗಿರುವಾಗ
ಗಳು ಬಿತ್ತುತ್ತಿರುವ ವಿಷ ಬೀಜಕ್ಕೆ
ಸೌಹಾರ್ದತೆಯ ಕನಸು ಹೊತ್ತು ಜನಪರ
ಸೂಳಿಭಾವಿ, ಚೆಡ್ಡಿಗಳ ಕುತಂತ್ರಕ್ಕೆ ಬಲಿ
ವನ್ನೆದುರಿಸಿದ್ದಾರೆ.

ಇದರಿಂದ ಕೋಮುವಾದಿಗಳ ತ
ಜನಪರ ಧ್ವನಿ ಇನ್ನಷ್ಟು ಗಟ್ಟಿಯಾಗಿದೆ
ಯಾವಾಗಲೂ ಸೌಹಾರ್ದದ ಪರವಿದ

-ವ

ಫಾಸ್ಟ್ ಟ್ರ್ಯಾಕ್ ಬೇಡ ಮಿ. ಕುಮಾರಸ್ವಾಮಿ....!

ಫಾಸ್ಟ್ ಟ್ರ್ಯಾಕ್ ರಾಜಕೀಯ ನಡೆಸಿ ಸರ್ರಂತ ಅಧಿಕಾರಕ್ಕೇರಿ ಭರ್ರಂತ ಜಾರಿಬಿದ್ದ ಕುಮಾರಸ್ವಾಮಿ ಈಗ ಹೃದಯ ರೋಗಿ! ಹುಟ್ಟಿನಿಂದಲೇ ಅವರ ಹೃದಯ ಕವಾಟಗಳಲ್ಲಿ ಸ್ವಲ್ಪ ತೊಂದರೆ ಇತ್ತು. ಆದರೆ ಅದು ಗೊತ್ತಾಗಿದ್ದು ಸ್ವಲ್ಪ ಲೇಟಾಗಿ ಅಂದರೆ ಕೆಲ ವರ್ಷಗಳ ಹಿಂದೆ. ನಾವು ಆಶ್ಚರ್ಯ ಪಡಬೇಕಾದ ಸಂಗತಿ ಏನೆಂದರೆ ತಮಗಿದ್ದ ಆರೋಗ್ಯದ ತೊಂದರೆ ಬಗ್ಗೆ ಕುಮಾರಸ್ವಾಮಿ ಇದುವರೆಗೂ ಎಲ್ಲೂ ಹೇಳಿಕೊಂಡಿರಲಿಲ್ಲ. ಆ ವಿಚಾರದಲ್ಲಿ ದೇವೇಗೌಡರೂ ಹಾಗೇ ಇದ್ದಾರೆ. 2004 ರ ಎಲೆಕ್ಷನ್ ನಡೆಯುತ್ತಿದ್ದಾಗ ರಾಜ್ಯ ಪೂರ್ತಿ ಸುತ್ತುತ್ತಿದ್ದ ಗೌಡರು ದಿನಕ್ಕೆಷ್ಟು ಮಾತ್ರೆ ತೆಗೆದುಕೊಳ್ಳುತ್ತಿದ್ದರು, ಸಾವಿರಾರು ಕಿಲೋಮೀಟರ್ ಟೂರ್ ಮಾಡುತ್ತಾ ಊಟ-ನಿದ್ರೆ ಏರುಪೇರಾದರೂ ಹೇಗೆ ಸಹಿಸಿಕೊಂಡರೆಂಬ ವಿಚಾರವೂ ಬೆಳಕಿಗೆ ಬಂದಿರಲಿಲ್ಲ.

ಅದು ಸರಿ.

ಆದರೆ ಕುಮಾರಸ್ವಾಮಿ ಹೀಗೆ ದಿಢೀರೆಂದು ಎದೆ ಹಿಡಿದುಕೊಂಡು ಕುಸಿದು ಬೀಳುವ ಸಂದರ್ಭ ಇದೆಯಲ್ಲ ಅದನ್ನೇ ಯೋಚಿಸುತ್ತಾ ಹೋದರೆ ಅವರ ಬೇಜವಾಬ್ದಾರಿತನ, ಕ್ಷುಲ್ಲಕ ಹಠ ಹಾಗೂ ವ್ಯರ್ಥ ರಾಜಕೀಯ ಸರ್ಕಸ್‌ಗಳನ್ನು ಯಾವ ಪುರುಷಾರ್ಥಕ್ಕೆ ಮಾಡುತ್ತಿದ್ದಾರೆ ಎಂಬ ಪ್ರಶ್ನೆ ಮೂಡುತ್ತದೆ.

ಕಳೆದ ವಾರ ಅವರಿಗೆ ಎದೆ ನೋವೆಂದು ಪತ್ತೆಯಾಗುವ ಮೊದಲೇ 2006 ರ ಡಿಸೆಂಬರ್‌ನಲ್ಲಿ ನಡೆದ ಚಾಮುಂಡೇಶ್ವರಿ ಉಪಚುನಾವಣೆ ವೇಳೆಗಾಗಲೇ ಒಂದು ಸಾರಿ ಕುಮಾರಸ್ವಾಮಿಗೆ ಎದೆನೋವು ಕಾಣಿಸಿಕೊಂಡು ಸ್ನೇಹಿತರ ಮನೆ ಸೋಫಾದಲ್ಲೇ ಕುಸಿದುಬಿದ್ದಿದ್ದರಂತೆ. ಹಾಗೆಂದು ಈಗ ವೈದ್ಯರಿಗೆ ಹೇಳಿಕೊಂಡಿದ್ದಾರೆ. ಆದರೆ ಅವತ್ತೇ ಡಾಕ್ಟರ್ ಹತ್ತಿರ ಅವರು ಹೋಗಲಿಲ್ಲ. ಬದಲಾಗಿ ಹಲ್ಲು ಕಚ್ಚಿಕೊಂಡು ನೋವನ್ನು ಅನುಭವಿಸುತ್ತಾ ಸಿದ್ಧರಾಮಯ್ಯನವರನ್ನು ಸೋಲಿಸಲು ಓಡಾಡಿ ಇನ್ನಷ್ಟು ದಣಿದರು.

ಪ್ರಾಣಕ್ಕೇ ಆಪತ್ತು ತರಬಹುದಾಗಿದ್ದ ಎದೆನೋವೇ ಬಂದಾಗಲೂ ಕೇರ್ ಮಾಡದೆ 'ಸಿದ್ಧರಾಮಯ್ಯನ ಸೋಲಿಸಿ' ಅಂತ ಊರೂರು ತಿರುಗುವ ಹಠ ಕುಮಾರಸ್ವಾಮಿಗೇಕೆ ಬೇಕಿತ್ತು?

ಇದು ಪಕ್ಷಕ್ಕೆ ಸಂಬಂಧಿಸಿದ ವಿಚಾರ ಮಾತ್ರ ಅಲ್ಲ, ಒಬ್ಬರ ವಿರುದ್ಧದ ದ್ವೇಷವನ್ನು ಹೃದಯ ಬಡಿತವನ್ನು ನಿರ್ಲಕ್ಷಿಸುವ ಸೇಡನ್ನಾಗಿ ತೆಗೆದುಕೊಳ್ಳುವ ಮನೋಭಾವದ ಬಗ್ಗೆ ನಾವು ಯೋಚಿಸಬೇಕಿದೆ.

ಕುಮಾರಸ್ವಾಮಿಗೆ ಈಗಿನ್ನು ಕೇವಲ 49 ವರ್ಷ. ಅವರು ಆರೋಗ್ಯವಾಗಿ ಕ್ರಿಯಾಶೀಲರಾಗಿದ್ದರೆ ಇನ್ನೂ ಮೂವತ್ತು ವರ್ಷ ಕಾಲ ಸಕ್ರಿಯ ರಾಜಕೀಯದಲ್ಲಿರಬಹುದು. ಈಗ ನಿತ್ರಾಣಗೊಂಡಿರುವ ಜಾತ್ಯತೀತ ದಳವನ್ನು ಮತ್ತೆ



ಕಟ್ಟಿ ಅಖಾಡಕ್ಕಿಳಿಸಬಹುದು. ಆದರೆ ಅದಕ್ಕೊಬ್ಬ ನಾಯಕ ಬೇಕು ತಾನೆ?

ಕುಟುಂಬ ರಾಜಕಾರಣವೋ ಅಥವಾ ಗೌಡರ ಪುತ್ರವಾತ್ಸಲವೋ ಕುಮಾರಸ್ವಾಮಿಯೇ ಈಗ ಹಾಗೂ ಮುಂದೆ ಕೂಡ ದಳದ ನಾಯಕರಾಗಿರುತ್ತಾರೆ. ಬೇರೆ ಯಾವ ಕಾರಣಕ್ಕಲ್ಲದಿದ್ದರೂ ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದಲಾದರೂ ರಾಜ್ಯದ ಜನತೆಗೆ ಕಾಂಗ್ರೆಸ್-ಬಿಜೆಪಿ ಹೊರತುಪಡಿಸಿದ ಇನ್ನೊಂದೆರಡು ಮೂರನೇ, ನಾಲ್ಕನೇ ಆಯ್ಕೆ ಉಳಿಯಲೇಬೇಕಿದೆ. ಅದು ದಳ, ಬಿಎಸ್‌ಪಿ ಹೀಗೆ ಯಾವುದಾದರೂ ಆಗಬಹುದು.

ಪವರ್ ಪಾಲಿಟಿಕ್ಸ್‌ನ ತಂತ್ರಗಳಷ್ಟೇ ಗೊತ್ತಿರುವ ಕುಮಾರಸ್ವಾಮಿಗೆ ಈ ಥರದ ಡೆಮಾಕ್ರಸಿಯ ಸಂದಿಗ್ಧಗಳೂ ಅರ್ಥವಾಗಬೇಕು. ಅವರು ಮೊದಲು ಕನಕಪುರದಿಂದ ಪಾರ್ಲಿಮೆಂಟಿಗೆ ಆಯ್ಕೆಯಾದಾಗ ಎಷ್ಟು ದಿನ ಸಂಸತ್ ಅಧಿವೇಶನದಲ್ಲಿ ಭಾಗವಹಿಸಿದರೆಂಬುದು ಯಾರಿಗೂ ಗೊತ್ತಿಲ್ಲ. ಆದರೆ ನಂತರ ರಾಮನಗರದಿಂದ ಗೆದ್ದು ವಿಧಾನಸಭೆಗೆ ಬಂದಮೇಲೆ ಕೊನೇ ಸಾಲಿನ ಕೊನೇ ಸೀಟಿನಲ್ಲಿ ಕುಳಿತು ಅಧಿವೇಶನದ ನಡಾವಳಿಗಳನ್ನು ಗಮನಿಸುತ್ತಿದ್ದೆ ಎಂದು ಅವರೇ ಒಮ್ಮೆ ಹೇಳಿಕೊಂಡಿದ್ದರು.

ನಾನೇಕೆ ಸಿಎಂ ಆಗಬಾರದೆಂಬ ಫಾಸ್ಟ್ ಟ್ರ್ಯಾಕ್ ಕನಸು ಅವರಿಗೆ ಬಿದ್ದದ್ದು ಆಗಲೇ. ಅದು ಅನಿರೀಕ್ಷಿತವಾಗಿ ಬೇಗನೆ ಈಡೇರಿಯೂ ಬಿಟ್ಟಿತು. ಆಮೇಲೆ ಪಾಪುಲಾರಿಟಿ ಗಳಿಸಿಕೊಳ್ಳುವ, ಗಳಿಸಿದ್ದನ್ನು ಉಳಿಸಿಕೊಳ್ಳುವ ಹಗಲು-ರಾತ್ರಿ ಕೆಲಸದ ಸರ್ಕಸ್ ಶುರುವಾಯಿತು. ಕಳೆದ ಸೆಪ್ಟೆಂಬರ್ ತಿಂಗಳ ಹದಿನೈದು ದಿನದಲ್ಲಿ ಕುಮಾರಸ್ವಾಮಿ ಒಟ್ಟು 15 ಸಾವಿರ ಕಿಲೋಮೀಟರ್ ಓಡಾಡಿದ್ದಾರೆಂದು 'ಲಂಕೇಶ್'ನಲ್ಲೇ ನಾವೊಂದು ವರದಿ ಮಾಡಿದ್ದೆವು.

ಅಧಿಕಾರ ಗಳಿಸಲೂ ಫಾಸ್ಟ್ ಟ್ರ್ಯಾಕ್, ಉಳಿಸಿಕೊಳ್ಳಲೂ ಫಾಸ್ಟ್ ಟ್ರ್ಯಾಕ್... ಅದು ಹಾಗೇ ಮುಂದುವರೆಯಲು ಬಿಟ್ಟರೆ ಒಬ್ಬರ ಜೀವನಾವಧಿಯನ್ನು ಸಂದರ್ಭಗಳು ಫಾಸ್ಟ್ ಆಗಿಯೇ ತೀರ್ಮಾನಿಸಿ ಬಿಡುತ್ತವೆ.

Atleast ಕುಮಾರಸ್ವಾಮಿ ಈಗಲಾದರೂ ಎಚ್ಚೆತ್ತುಕೊಳ್ಳಲಿ. ಅವರಿಗೆ ಇಡೀ ದೇಶದಲ್ಲಿಯೇ ಅತ್ಯುತ್ತಮ ಹೃದಯ ತಜ್ಞರಿಂದ ಚಿಕಿತ್ಸೆ ದೊರಕಿದೆ. ಕುಮಾರಸ್ವಾಮಿ ಕರ್ನಾಟಕ ಕಂಡ ಅತೀ ಚಿಕ್ಕ ವಯಸ್ಸಿನ ಮುಖ್ಯಮಂತ್ರಿ ಹೇಗೋ ಅದೇ ರೀತಿ ಅತೀ ಹೆಚ್ಚು ಹಗರಣಗಳನ್ನು ನಡೆಸಿದ ಸಿಎಂ ಕೂಡ ಹೌದು.

ಅದೆಲ್ಲಾ ಈಗ ಮುಗಿದುಹೋದ ಕತೆ. ಅವರಿಗೀಗ ಎರಡನೇ ಜನ್ಮ ಸಿಕ್ಕಿದೆ. ಮನುಷ್ಯನೊಬ್ಬ ತನ್ನನ್ನು ತಾನೇ ಪುನರಾವಲೋಕನ ಮಾಡಿಕೊಳ್ಳಲು ಮಾಡಿದ ತಪ್ಪುಗಳನ್ನು ಅರಿತು ಆತ್ಮವಿಮರ್ಶೆ ಮಾಡಿಕೊಳ್ಳಲು ಇದು ಒಂದು ಸರಿಯಾದ ಸಂದರ್ಭ.


ಕುಮಾರಸ್ವಾಮಿಯ ಆರೋಗ್ಯ ಚೆನ್ನಾಗಿ ಆಗಲಿ, ಅವರು ಹೊಸ ಹುರುಪಿನ, ಜನಪರವಾದ ಚಿಂತನೆಗಳ ಹೊಸ ನಾಯಕನಾಗಿ ನಮ್ಮೊಂದಿಗಿರಲಿ.

■ ಈಶ


ಸುಮ್ಮ್ ಸುಮ್ಮನೆ

ಐಟಿಯ (ಮಾಹಿತಿ ತಂತ್ರಜ್ಞಾನ) ಪರಮಾವಧಿಗಳು

1. ಏಕಾಂಗಿತನದ ಪರಮಾವಧಿ: ಇಬ್ಬರು ಅಕ್ಕ ಪಕ್ಕದಲ್ಲಿಯೇ ಕುಳಿತುಕೊಂಡು ಒಬ್ಬರಿಗೊಬ್ಬರು ಈ-ಮೇಲ್ ಕಳಿಸುವ ಮೂಲಕ ಪರಸ್ಪರ ಭಾವನೆಗಳನ್ನು ಹಂಚಿಕೊಳ್ಳುವುದು.
2. ಹೇಡಿತನದ ಪರಮಾವಧಿ: ಇಬ್ಬರು ವ್ಯಕ್ತಿಗಳು ಈ-ಮೇಲ್ ಮೂಲಕ ಬಡಿದಾಡಿಕೊಳ್ಳುವುದು.
3. ಅಸಹಾಯಕತೆಯ ಪರಮಾವಧಿ: ವಾರಗಟ್ಟಲೇ ಯಾವುದೇ ಈ-ಮೇಲ್ ಬಾರದೇ ಇರುವುದು.
4. ಹತಾಶೆಯ ಪರಮಾವಧಿ: ಇಂಟರ್‌ನೆಟ್ ಸರ್ವರ್ ಡೌನ್ ಆಗಿಬಿಡುವುದು.
5. ನಿರ್ಲಕ್ಷ್ಯದ ಪರಮಾವಧಿ: ಪ್ರೇಮ ಈ-ಮೇಲ್ ಬರೆದು ಎಲ್ಲಾ ಈಮೇಲ್ ವಿಳಾಸಗಳಿಗೂ ಕಳಿಸಿಬಿಡುವುದು.
6. ಟೈಮ್‌ಪಾಸ್‌ನ ಪರಮಾವಧಿ: ವ್ಯಕ್ತಿಯೊಬ್ಬ ತನ್ನದೇ ಈಮೇಲ್ ವಿಳಾಸಕ್ಕೆ ಮೇಲ್ ಕಳಿಸುವುದು.
7. ನಿರೀಕ್ಷೆಯ ಪರಮಾವಧಿ: ಭಾರತ ಕ್ರಿಕೆಟ್ ತಂಡಕ್ಕೆ ಈ-ಮೇಲ್ ಕಳಿಸಿ ತಾವು ಆಟದಲ್ಲಿ ಗೆಲ್ಲಿ ಎಂದು ಆಶಿಸುವುದು.
8. ಪುನರಾವರ್ತನೆಯ ಪರಮಾವಧಿ: ನೀವು ಫಾರ್ವರ್ಡ್ ಮಾಡಿದ ಈ-ಮೇಲ್ ಎಲ್ಲೆಲ್ಲೂ ಸುತ್ತಾಡಿ ಕೊನೆಗೆ ನಿಮ್ಮ ಇನ್‌ಬಾಕ್ಸ್‌ಗೇ ಬಂದು ಸೇರುವುದು.
9. ಬ್ರೌಸಿಂಗ್‌ನ ಪರಮಾವಧಿ: ಈಜು ಬಾರದೇ ಆಳ ನೀರಿನ ಕೊಳದಲ್ಲಿ ಈಜಾಡಲು ಹೋಗಿ ಸಹಾಯಕ್ಕಾಗಿ "ಹೆಲ್ಪ್... ಹೆಲ್ಪ್..." ಎಂದು ಕೂಗಿಕೊಳ್ಳುವ ಬದಲು "ಎಫ್1... ಎಫ್1..." ಎಂದು ಕೂಗಿಕೊಳ್ಳುವುದು.



ರೌಡಿಯೋ ಸಂಸದನೋ?



“ಇಂತಹದ್ದೊಂದು ಪ್ರಶ್ನೆ ಉತ್ತರ ಕನ್ನಡ ಜಿಲ್ಲೆಯ ಜನರನ್ನು ಕಾಡತೊಡಗಿದೆ. ತಮ್ಮ ಜಿಲ್ಲೆ ಅಭಿವೃದ್ಧಿಗೆ ಒಂದಿಷ್ಟು ಕೆಲಸಗಳನ್ನು ಮಾಡುತ್ತಾನೆಂದು ಕ್ಷೇತ್ರದ ಜಿಲ್ಲೆಯ ಜನ ಅನಂತಕುಮಾರ್ ಹೆಗಡೆ ಎಂಬ ಬಿಜೆಪಿ ಆಸಾಮಿಯನ್ನು ಲೋಕಸಭೆಗೆ ಆರಿಸಿಕಳಿಸಿದ್ದರು. ಆತ ಜಿಲ್ಲೆಗೆ ಏನು ಕೆಲಸ ಮಾಡಿದನೋ ಯಾರಿಗೂ ಗೊತ್ತಿಲ್ಲ. ಆದರೆ, ಬರೋಬ್ಬರಿ ಮೂವತ್ತೈದು ಕ್ರಿಮಿನಲ್ ಕೇಸುಗಳನ್ನು ತನ್ನ ಮೇಲೆ ದಾಖಲಿಸಿಕೊಂಡಿರುವುದು ಮಾತ್ರ ಎಲ್ಲರಿಗೂ ಗೊತ್ತಿದೆ. ತಾವು ಈತನನ್ನು ಆರಿಸಿ ಕಳಿಸಿದ್ದು ಮಚ್ಚು ಲಾಂಗು ಹಿಡಿದು ಪಕ್ಕಾ ಕ್ರಿಮಿನಲ್ ರೌಡಿಯಂತೆ ಬೀದಿಬೀದಿ ಅಲೆಯುತ್ತಾ ಕಂಡ ಕಂಡವರ ಮೇಲೆ ಹಲ್ಲೆ ಮಾಡುವುದಕ್ಕೋ ಅಥವ ಜಿಲ್ಲೆಯ ಅಭಿವೃದ್ಧಿಗೆ ದುಡಿಯುವುದಕ್ಕೋ ಎಂಬ ಅನುಮಾನದಲ್ಲೀಗ ಜಿಲ್ಲೆಯ ಜನರಿದ್ದಾರೆ. ಮೊನ್ನೆ ಡಿಸೆಂಬರ್ 13ರಂದು ಈತ ನಡೆಸಿದ ಹಲ್ಲೆ ಇವನ ಹಲ್ಲೆಯ ಸರಣಿಗೆ ಒಂದು ಲೇಟೆಸ್ಟ್ ಸೇರ್ಪಡೆ. ಈ ಬಾರಿ ಹಲ್ಲೆಗೊಳಗಾದವನು ಬೇರೆ ಯಾರೂ ಅಲ್ಲ, ತನ್ನದೇ ಬಿಜೆಪಿ ಪಕ್ಷದ ಕಾರವಾರ ಘಟಕದ ಅಧ್ಯಕ್ಷ ಜಗದೀಶ್ ಬಿರ್ಕೋಡ್ಕರ್!

ಡಿಸೆಂಬರ್ ಹದಿಮೂರರಂದು ಮುಂಜಾನೆ 10.30ರ ಸುಮಾರಿಗೆ ಕಾರವಾರದ ಪ್ರವಾಸಿಮಂದಿರದಲ್ಲಿ ಸಂಸದ ಅನಂತುನನ್ನು ಬರಮಾಡಿಕೊಳ್ಳಲು ಜಗದೀಶ್ ಬಿರ್ಕೋಡ್ಕರ್ ಆಗಮಿಸಿದ್ದರು. ಇವರನ್ನು ನೋಡುತ್ತಲೇ ಕೆಂಡಮಂಡಲವಾದ ಅನಂತ ಹೆಗಡೆ 'ನನ್ನ ವಿರುದ್ಧವೇ ರಾಜಕಾರಣ ಮಾಡ್ತಿಯಾ?' ಎಂದು ಗುಡುಗುತ್ತಲೇ ಆರಂಭಿಸಿ, ನಂತರ ಅವಾಚ್ಯವಾಗಿ ಬೈಯುತ್ತಾ ಕುತ್ತಿಗೆ ಪಟ್ಟಿ ಹಿಡಿದು ಹಲ್ಲೆ ನಡೆಸೇಬಿಟ್ಟ. ಅದೇನು ತೆಗೆದುಕೊಂಡು ಹೊಡೆದನೋ ಗೊತ್ತಿಲ್ಲ, ಬಿರ್ಕೋಡ್ಕರ್ ಕುತ್ತಿಗೆ ಹಿಂಭಾಗದಿಂದ ರಕ್ತ ದಳದಳನೆ ಸುರಿಯಲಾರಂಭಿಸಿತು.

ಬಿಜೆಪಿಯ ಜಿಲ್ಲಾಧ್ಯಕ್ಷ ವಿನೋದ್ ಪ್ರಭು, ಮಾಜಿ ಉಪಾಧ್ಯಕ್ಷ ಶಿವಾನಂದ ನಾಯ್ಕ, ಜಿಲ್ಲಾ ಯುವ ಮೋರ್ಚಾದ ಅಧ್ಯಕ್ಷ ಅರುಣ ಕುಮಾರ್ ಬಿರ್ಕೋಡ್ಕರ್ ಜೊತೆಯಲ್ಲಿ ಪತ್ರಿಕಾಗೋಷ್ಠಿ ನಡೆಸಿ, ಬಿರ್ಕೋಡ್ಕರ್ ಕುತ್ತಿಗೆಯಲ್ಲಾದ ಗಾಯವನ್ನು ತೋರಿಸಿ ಅನಂತ ಹೆಗಡೆಯ ವಿರುದ್ಧ ಹರಿಹಾಯ್ದಿದ್ದಾರೆ. ಈ ವಿಚಾರವನ್ನು ಈಗಾಗಲೇ ರಾಜ್ಯ ನಾಯಕತ್ವದ ಗಮನಕ್ಕೆ ತಂದಿರುವ ಅವರು ಮುಂದಿನ ಚುನಾವಣೆಯಲ್ಲಿ ಅವರಿಗೆ ಟಿಕೆಟ್ ನೀಡಬಾರದೆಂದು ಒತ್ತಾಯಿಸಿದ್ದಾರೆ.

ಹೊಡೆದಾಟ ಬಡಿದಾಟಗಳಲ್ಲಿ ನಿಸ್ಸೀಮನಾಗಿರುವ ಅನಂತಕುಮಾರ್ ಹೆಗಡೆ ಈಗಾಗಲೇ ಮೂವತ್ತೈದು ಕ್ರಿಮಿನಲ್ ಕೇಸುಗಳನ್ನು ತನ್ನ ಮೇಲೆ ಹಾಕಿಕೊಂಡಿದ್ದಾನೆ. ಪಕ್ಕಾ ಚೆಡ್ಡಿಯಾಗಿರುವ ಈತನಿಗೆ ಒಂದು ವೇಳೆ ಬಿಜೆಪಿ ಟಿಕೆಟ್ ಕೊಟ್ಟರೂ ಜನ ಇವನಿಗೆ ಕೈಕೊಡುವುದು ಗ್ಯಾರಂಟಿ.

■ ರಮೇಶ್, ಅಂಕೋಲಾ

ಸ್ನೇಹದ ಗಿಡವನ್ನು ನೆಟ್ಟು ಆನಂದದ ಹೂಗೊಂಚಲನ್ನು ಕಿತ್ತುಕೊ - ಲೂಯಿಸ್ ಕಾವುಫ್‌ಮನ್



ಪೊಲೀಸರಿಗೆ ಶರಣಾಗಿರುವ ಅಶೋಕ್ ಪೈ

ಅಶೋಕ್ ಪೈನ ಸರೆಂಡರ್ ಮರ್ಮ

ಜಡೇಜಾ ರವಿಯ ಹಂತಕ ಅಶೋಕ್ ಪೈಗೆ ಸರೆಂಡರ್ ಆಗದೇ ಬೇರೆ ದಾರಿ ಖಾನೇ ಎಲ್ಲಿತ್ತು?

ಡಿಸೆಂಬರ್ 21 ರ ಶುಕ್ರವಾರದ ಬಕ್ರೀದ್ ಹಬ್ಬದಂದು ಬೆಂಗಳೂರಿನ ವಕೀಲರಾದ ಪದ್ಮಾ ವತಿ, ಮುರಳೀಧರ್ ಮತ್ತು ಅಮೋಘವರ್ಷರ ಜೊತೆ ಮಂಡ್ಯ ಗ್ರಾಮಾಂತರ ಇನ್ಸ್‌ಪೆಕ್ಟರ್ ಲಕ್ಷ್ಮೀಗೌಡರ ಎದುರು ಬಂದು ನಿಂತಿದ್ದ ಅಶೋಕ್ ಪೈನ ಮುಖದಲ್ಲಿದ್ದದ್ದು ಕೇವಲ ಗೆಲುವಿನ ವಿಕಟಹಾಸವಷ್ಟೇ ಅಲ್ಲ; ಸಾವಿನ ನೆರಳು ಕೂಡ!


ತನ್ನ ಕೃತ್ಯದ ಪ್ರತೀಕಾರಕ್ಕೆ ಸಿಲುಕಿ ಅಬಕಾರಿ ದೊರೆ ನಾಗೇಂದ್ರ ಉರ್ಫ್ ಲಿಕ್ಕರ್ ನಾಗಣ್ಣ ಬಲಿಯಾಗಿದ್ದು ಆತನ ಜಂಘಾಬಲವನ್ನೇ ಉಡುಗಿಸಿಬಿಟ್ಟಿದೆ. ಯಾವ ಕೋತಿರಾಮನ ಶಿಷ್ಯರನ್ನಿಟ್ಟು ಜಡೇಜನನ್ನು ಕೊಲ್ಲಿಸಿದ್ದನೋ ಅದು ಪೊಲೀಸರಿಗೆ ಗೊತ್ತಾಗಿ ಬೆಂಗಳೂರಿನ ಹುಡುಗರೆಲ್ಲರೂ ಜೈಲುಪಾಲಾಗಿದ್ದು ಆತನ ಲೆಕ್ಕಾಚಾರವನ್ನೇ ತಲೆಕೆಳಗಾಗಿಸಿದೆ. ಜೊತೆಗೆ ಜಡೇಜನ ವಿಧವಾ ಪತ್ನಿ ಪೂರ್ಣಿಮಾ ತನ್ನ ತಲೆ ತೆಗೆದು ಅದನ್ನ ಗಂಡನ ಸಮಾಧಿಯ ಮೇಲಿಟ್ಟವರಿಗೆ 25 ಲಕ್ಷ ರೂಪಾಯಿಗಳ ಸುಪಾರಿ ಘೋಷಿಸಿರುವುದು ಆವನೊಳಗೆ ಸೂತಕದ ಕಂಪನವನ್ನೇ ಹುಟ್ಟಿಸಿಬಿಟ್ಟಿದೆ.

ನಾನ್ ತಾನೇ ಬೇರೆ ಏನ್ ಮಾಡ್ಲೀ ಸ್ವಾಮೀ.... ಆವತ್ತು ನಾನೇನಾದ್ರೂ ಸಿಕ್ಕಿಬಿಟ್ಟಿದ್ರೆ ಬಂಗಾರಪ್ಪ ನನ್ನನ್ನು ಕತ್ತರಿಸಿ ಹಾಕೋನು. ನನ್ನ ಪಾಡಿಗೆ ನಾನಿದ್ದೆ. ಅದೇನು ಗ್ರಾಚಾರನೋ ಇಪ್ಪೊತ್ತಿಗೆ ಕೌನ್ಸಿಲರ್ ಆಗಬೇಕಾದವನನ್ನು ಅನ್ಯಾಯವಾಗಿ ಬಡ್ಡಿ ಪಾಪಮ್ಮನ ಕೊಲೆ ಕೇಸಿನಲ್ಲಿ ಸಿಕ್ಕಿಸಿಬಿಟ್ರು. ಹಾಳಾಗಲಿ ಅಂಥ ಅದಕ್ಕೂ ಸುಮ್ಮನಿದ್ರೆ ಬಂಗಾರಪ್ಪನ್ನ ಛೂಬಿಟ್ಟು ನನ್ನನ್ನ ಮುಗಿಸೋಕ್ಕೆ ನೋಡಿದ್ರು. ಹಂಗಾದ್ರೆ ನಾನು ಬದುಕಿರೋದೇ ತಪ್ಪೆ? ಹೆಂಗಿದ್ರೂ ಇವತ್ತಲ್ಲಾ ನಾಳೆ ನನ್ನನ್ನು ಖಂಡಿತಾ ಮುಗಿಸಿಬಿಡ್ತಿದ್ರು. ಅದಕ್ಕೇ ನಾನೂ ಡಿಸೈಡ್ ಮಾಡಿಬಿಟ್ಟೆ. ಮೊದಲು ಜಡೇಜನ್ನ ತೆಗೆದುಬಿಟ್ರೆ ಆನಂತ್ರ ರಂಗಸ್ವಾಮಿಯನ್ನ ವಿಚಾರಿಸಿಕೊಂಡರಾಯ್ತು ಅಂತಲೇ ಊರುಬಿಟ್ಟೆ. ಆವತ್ತು ಜಡೇಜ ತಿಥಿ ಊಟಕ್ಕೆ ಬಂದೇಬರ್ತಾನೆ ಅನ್ನೋದು ಗ್ಯಾರಂಟಿಯಾಗಿತ್ತು. ನಾನು ಮಂಡ್ಯದ ಚೇತು, ಚೀರನಹಳ್ಳಿ ಅಕ್ಕನ ಮಗ ಚೇತನ್ ಮತ್ತು ರಾಮನಗರದ ಒಂದಷ್ಟು ಮಂದಿ ಹುಡುಗರನ್ನು ಎರಡು ಗಾಡಿಗಳಲ್ಲಿ ರೆಡಿ ಮಾಡಿದೆ. ಸುಮೋದಲ್ಲಿದ್ದ ಬೆಂಗಳೂರಿನ ಹುಡುಗರು ಹೋಗಿ ಗುದ್ದಿದ್ದೇ ತಡ ಹಿಂದಿನಿಂದ ಇಂಡಿಕಾ ಕಾರಲ್ಲಿ ನಾನು ಮತ್ತು ಐದು ಮಂದಿ ಲಾಂಗೆತ್ತಿಕೊಂಡು ಬಂದ್ವಿ. ನನ್ನನ್ನ ನೋಡಿದ್ದೇ ಜಡೇಜ ತನ್ನ ಹುಡುಗ್ರಿಗೆ 'ನನ್ನ ಕತೆ ಮುಗೀತು. ನೀವಾದ್ರೂ ಬಚಾವಾಗಿ, ಮೊದ್ಲು ಇಲ್ಲಿಂದ ಓಡಿಹೋಗಿ. ಪ್ರಾಣ ಉಳಿಸ್ಕಂಡು ನಿಮ್ಮ ಕೈಲೇನಾಗುತ್ತೋ ಮಾಡ್ಕಳ್ಳೀ....' ಎಂದು ಕೂಗಿಬಿಟ್ಟ. ಆದರೆ ಮಧು ಅನ್ನೋನು 'ಅಣ್ಣನ್ನ ಬಿಟ್ಟು ಹೋಗಲ್ಲ' ಅಂತ ಅಡ್ಡಗೈಯಿಟ್ಟು ನಿಂತುಬಿಟ್ಟಿದ್ದ. ಲಾಂಗ್ ಉಲ್ಟಾ ಮಾಡಿದ್ದೇ ಅವನಿಗೆ ಎರಡೇಟು ಬಿಟ್ಟಿದ್ದೇ ಓಡಿಸಿಬಿಟ್ಟೆ. ಆನಂತ್ರ ಜಡೇಜನ್ನ ಕತ್ತರಿಸಿ ಹಾಕಿದೆ....!

ಇದು ಹಳೇ ಪಂಟರ್ ಅಶೋಕ್ ಅಲಿಯಾಸ್ ಪೈ ಮಂಡ್ಯ ಗ್ರಾಮಾಂತರ ಪೊಲೀಸ್ ಇನ್ಸ್‌ಪೆಕ್ಟರ್ ಲಕ್ಷ್ಮೀಗೌಡರ ಮುಂದೆ ನಿಂತು ಒಪ್ಪಿಸಿದ ಕಂಠಪಾಠ.




ರೋಧಿಸುತ್ತಿರುವ ಜಡೇಜಾ ರವಿಯ ಪತ್ನಿ



ಜಡೇಜಾ ರವಿ ಹತ್ಯೆಯ ಆರೋಪಿಗಳು

ಸ್ಕೆಚ್ ಆತನದೇ ಆದರೂ ಪೈ ಪ್ರತ್ಯಕ್ಷವಾಗಿ ಜಡೇಜನನ್ನು ಕೊಂದಿಲ್ಲ ಎಂಬುದು ಪೊಲೀಸರಿಗೆ ಚೆನ್ನಾಗಿ ಗೊತ್ತಿತ್ತು. ಕೊಲೆಯಾಗುವ ಕೊನೇ ಗಳಿಗೆಯಲ್ಲೂ ಜಡೇಜನ ಜೊತೆಗಿದ್ದು ಕಣ್ಣಾರೆ ಕಂಡಿದ್ದ ಮಧು ಅದನ್ನು ಪೊಲೀಸರಿಗಾಗಲೇ ತಿಳಿಸಿದ್ದ. ಬೆಂಗಳೂರಿನ ಕಲಾಸಿಪಾಳ್ಯದ ಇನ್ಸ್‌ಪೆಕ್ಟರ್ ಎಸ್.ಕೆ. ಉಮೇಶ್ ಈ ಹೊತ್ತಿಗಾಗಲೇ ಜಡೇಜನನ್ನು ಕೊಂದು ಬಂದಿದ್ದ ಕಾಮಾಕ್ಷಿಪಾಳ್ಯದ ಹಂತಕರನ್ನು ಹಿಡಿದಾಗಿತ್ತು. ಅದು ಗೊತ್ತಿದ್ದೂ ಪೈ ಮತ್ತೆಮತ್ತೆ ತಾನೇ ನಿಂತು ಜಡೇಜನನ್ನು ಕತ್ತರಿಸಿದ್ದಾಗಿ ರೈಲು ಬಿಡುತ್ತಿದ್ದಾನೆಂದರೆ ಅದಕ್ಕಿರುವ ಕಾರಣವೇ ಬೇರೆ.



ಇನ್ಸ್‌ಪೆಕ್ಟರ್ ಉಮೇಶ್

ಆದು ಜಡೇಜನ ಕೊಲೆ ಕೇಸನ್ನೇ
ತಂತ್ರ. ಅಶೋಕ್ ಪೈಗೆ ಆ ಕಾಲದಿಂದಲೂ
ಲಿಂಕ್ ಅಂತ ಇದ್ದದ್ದು ಹನುಮಂತನಗ
ಪೀಟರ್ ಜೋಡಿ ಉರ್ಫ್ ರಾಜೇಂದ್ರ.
ಮೂಲದ ಬ್ರಾಹ್ಮಣನಾದ ಜೋಡಿ ತನಗೆ
ಮಂಡ್ಯದ ಪೈಯನ್ನು ಬೆಂಗಳೂರಿಗೆ
ಹನುಮಂತನಗರದ ಸುತ್ತಮುತ್ತ ಆಫೆನ್ಸ್
ಹಾಗೇ ಮಂಡ್ಯಕ್ಕೆ ಹೋಗಿ ಪೈ ಪರವಾಗಿ
ಕ್ರೈಮ್ ಮಾಡುತ್ತಲೂ ಇದ್ದ ಈತ ಕತ್ರಿಗ
ಗೆಳೆಯ. ಆತನ ಮೂಲಕವೇ ಕೊರಂಗು

ಯಾವತ್ತು ಲಿಂಗನ ದುಷ್ಮನ್ ಸೈಕಲ್ ರ
ಸಂಪರ್ಕಕ್ಕೆ ಬಂದಿದ್ದು ಗೊತ್ತಾಯಿತೋ ಕೊ
ಕೆಡಿಸಿಕೊಂಡಿದ್ದಾನೆ. ಚೀರನಹಳ್ಳಿ ಶಂಕ್ರನ ಕೊ
ಮಂಡ್ಯದ ಹುಡುಗರು ಛಟ್ಟಾದರೂ ಅದನ್ನು
ಸೈಕಲ್ ರವಿಯೇ ಎಂಬುದು ಕೊರಂಗ
ಗ್ಯಾರಂಟಿಯಾಗಿದೆ. ಆನಂತರ ಶಂಕ್ರ
ಶಿವರಾಮನನ್ನು ಮುಗಿಸಿದ್ದು ಕೂಡ ಸೈಕಲ್
ಎಂಬ ಗುಮಾನಿಯೂ ಕೊರಂಗು
ಹುಟ್ಟಿಕೊಂಡಿದೆ. ಕೊರಂಗು ಮೇಲೆ
ಹಳ್ಳಿಯ ಡಾಬಾದಲ್ಲಿ ಹೆಬ್ಬೆಟ್ಟು ಮಂ
ನಡೆಸಿದ ದಾಳಿಗೆ ಜಡೇಜ ತನ್ನ
ಕೊಟ್ಟಿದ್ದೂ ಗೊತ್ತಾಗಿದೆ. ಕೊರಂಗ
ತನ್ನ ಮಂಡ್ಯದ ಲಿಂಕುಗಳಿಗಾಗಿ
ದ್ದಾಗಲೇ ಹನುಮಂತನಗರದ ಬೊ
ಜೋಡಿ ಅಶೋಕ್ ಪೈನನ್ನು
ಕರೆತಂದು ಕೋತಿರಾಮನಿಗೆ ಪರಿಚ

ಬಹುಶಃ ಕೊರಂಗು ಶಿಷ್ಯರು ಬೆ
ಹೋಗಿದ್ದರೆ ಜಡೇಜನನ್ನು ಮು
ಎದೆಗಾರಿಕೆಯಾಗಲಿ ಹರಕತ್ತಾಗಲಿ
ನಿವೃತ್ತ ರೌಡಿ ಪೈಗೆ ಖಂಡಿತಾ ಇ

ಚಿತ್ರದುರ್ಗ ಜೈಲಿಂದಲೇ
ಡೀಲು ಕುದುರಿಸಿದ ಕೋತಿರಾ
ನಾಗರಬಾವಿ ಮಾರುತಳ್ಳಿಯ
ಪಾತಕಿ ಕಳ್ಳಾಜಗ್ಗನನ್ನು ಜೊತೆ ಮ
ದ್ದಾನೆ. ಕಳ್ಳಾಜಗ್ಗನಿಗೆ ನೆರವಾಗಲೆಂ
ಪಾಳ್ಯದ ಮಚ್ಚನ ಬಾಮೈದ ಉ
ಯಾಸ್ ಉಮರೆ, ಸುಂಕದಕಟ್ಟೆಯ
ರೇಪು ರೆಡ್ಡಿ ಮುಂತಾದ ಛಪ್ಪರ್
ಹಿಂದೇ ಸಜ್ಜಾಗಿದೆ. ಜಡೇಜನ ಕೊ
ವುದಕ್ಕೂ ತಿಂಗಳ ಹಿಂದಿನಿಂದಲೇ
ಹುಡುಗರೆಲ್ಲ ಶ್ರೀರಂಗಪಟ್ಟಣದ
ದರಲ್ಲಿ ಜಮೆಯಾಗಿದ್ದಾರೆ. ಅ
ಚೀರನಹಳ್ಳಿ ಶಂಕ್ರನ ಅಕ್ಕನ ಮ
ಮಂಡ್ಯದ ಚೇತು ಮುಂತಾದ
ಹುಡುಗರು ಕೈಜೋಡಿಸಿದ್ದಾರೆ. ನ
ರಿಂದಲೇ ಮಂಡ್ಯದ ಹರಿಪ್ರಿಯ
ಹಿಂಭಾಗದ ಮನೆಯೊಂದಕ್ಕೆ ಸೇರಿಕೊಂಡ
ಮೂರು ಬೈಕುಗಳಲ್ಲಿ ಜಡೇಜನ ಚಲನವಲ
ಕಣ್ಣಿಟ್ಟಿದ್ದಾರೆ.

ರಾ. ಸೋಮನಾಥ್

ಡಿಸೆಂಬರ್ ಏಳರ ಬೆಳಿಗ್ಗೆ ಈ ಪೈಕಿ
ಮೊದಲೇ ಎಲಿಯೂರಿನ ರಸ್ತೆಯಲ್ಲಿ ಟಾ
ನಿಲ್ಲಿಸಿಕೊಂಡಿದ್ದು ಜಡೇಜನ ಸ್ಕಾರ್ಪಿಯೋ
ಸರ್ಕಲ್ ದಾಟಿದ್ದು ಗೊತ್ತಾಗಿದ್ದೇ ಗಾ
ಮಾಡಿದ್ದಾರೆ. ವೇಗವಾಗಿ ಬಂದಿದ್ದೇ ಜಡೇ
ಗುದ್ದುವುದಕ್ಕೂ ಹಿಂಭಾಗದಿಂದ ಪೈ ಗ್ಯಾಂ
ಗಾಡಿಯಲ್ಲಿ ಬರುವುದಕ್ಕೂ ಒಂದೇ ಆಗಿ
ಏಟಿಗೆ ಜಡೇಜನ ಸ್ಕಾರ್ಪಿಯೋದ ಬಾ
ಕೊಂಡಿತ್ತು. ಗುದ್ದಿದ ಹುಡುಗರು ಮತ್ತು
ಬಂದವರೆಲ್ಲ ಲಾಂಗ್ ಹಿಡಿದು ಬಂದದ್ದನ್ನು
ಜಡೇಜನ ಬಂಟರು ದಿಕ್ಕಾಪಾಲಾದರು. ಅ
ಹಂತರ ಕೈಗೆ ಸಿಕ್ಕಿಬಿದ್ದ ಜಡೇಜ
ಪ್ರತಿರೋಧವನ್ನೂ ತೋರದೇ ನೆಲಕ್ಕೇ


ಹಾಗೇ ಸತ್ತು ಬಿದ್ದಿದ್ದ ಜಡೇಜನ ಎ
ಕತ್ತರಿಸಿ ತಂದು ಅದನ್ನು ಚೀರನ
ಸಮಾಧಿ ಮೇಲಿಟ್ಟಿದ್ದು ಚೀರನಹಳ್ಳಿ ಚ
ಕುಮಾರ!

ಆನಂತರ ಇಡೀ ಹಂತಕ ಕೂಟ ಶ್ರೀರಂ
ಜಮೆಯಾಗಿದೆ. ಅಲ್ಲಿ ಹುಡುಗರ ಕೈಗ
ದುಡ್ಡುಕೊಟ್ಟ ಅಶೋಕ್ ಪೈ ತನ್ನ ಜೊತೆಗಿ
ಹಂತಕರನ್ನು ಕರಕೊಂಡು ಕನಕಪುರ
ಬರುತ್ತಾನೆ. ಅದು ಹೇಗೋ ಮಂಡ್ಯದ
ಗೊತ್ತಾಗಿ ಅವರು ದಾಳಿಯಿಡುವ ಹೊತ್ತ
ಅಲ್ಲಿಂದ ಎಸ್ಕೇಪಾಗಿ ಸೀದಾ ಬೆಂಗಳೂರಿನ
ದೋಸ್ತ್ ಜೋಡಿ ರಾಜೇಂದ್ರನ ಅಡ್ಡೆಗ

ರಕ್ಕಸ ರಂಗಸ್ವಾಮಿ ನಿರ್ನಾಮವಾಗುವ ತನಕ

ಜಡೇಜನ ಹತ್ಯೆ ಮೇಲುನೋಟಕ್ಕೆ ಪೈ ಅಶೋಕನ ಆಕ್ರೋಶವಾಗಿ ಕಂಡರೂ ಆಳದಲ್ಲದು ಮಂಡ್ಯದ ಒಕ್ಕಲಿಗರ ಕಾರಸ್ಥಾನದ ಫಲವಾಗಿತ್ತೆ?

ಏಕೆಂದರೆ ಲಿಕ್ಕರ್ ರಂಗಸ್ವಾಮಿ ಜಾತಿಯಲ್ಲಿ ಗಾಣಿಗ. ಎಲ್ಲಿಂದಲೋ ಬಂದು ಜಡೇಜನಂಥ ಹುಳುವನ್ನು ಬೆಳೆಸಿ ಇಡೀ ಮಂಡ್ಯವನ್ನೇ ಪಾಪಕೂಪವನ್ನಾಗಿಸಿದ ಆತನ ವಿರುದ್ಧ ಮಾಜಿ ಮಂತ್ರಿ ಆತ್ಮಾನಂದ ಕಂಡಕಂಡಲ್ಲಿ ಕಿಡಿಕಾರುತ್ತಿದ್ದರು. ಅದೂ ಜಡೇಜನನ್ನು ಮುಂದಿನ ಎಮ್ಮೆಲ್ಲೇ ಮಾಡಲು ಹೊರಟ ರಂಗಸ್ವಾಮಿಯಿಂದಾಗಿ ಹಾಲಿ ಶಾಸಕ ಶ್ರೀನಿವಾಸ್ ಕೆಂಡಾಮಂಡಲರಾದರು. ಒಬ್ಬ ಮಗ ಮಹೇಶನನ್ನು ಬೂದನೂರಿನಿಂದ ಜಿಲ್ಲಾ ಪಂಚಾಯ್ತಿಗೆ ನಿಲ್ಲಿಸಿ ಗೆಲ್ಲಿಸಿದ್ದು ಇನ್ನೊಬ್ಬ ಮಗ ಶ್ರೀನಿವಾಸನನ್ನು ನಗರಸಭಾ ಚುನಾವಣೆಯಲ್ಲಿ ಬಿಜೆಪಿ ನಾಯಕ ಬಸ್ ನಂಜುಂಡಯ್ಯನ ವಿರುದ್ಧ ನಿಲ್ಲಿಸಿದ್ದು ಸಹಜವಾಗೇ ಲೋಕಲ್ ಒಕ್ಕಲಿಗರನ್ನು ಕೆರಳಿಸಿದೆ. ಅದೇ ಹೊತ್ತಿಗೆ ಬಡ್ಡಿಪಾಪಮ್ಮನ ಕೊಲೆ ನಡೆದರೆ ರಂಗಸ್ವಾಮಿ ಪೊಲೀಸರಿಗೆ ತಿನ್ನಿಸಿ ಆ ಕೇಸಿಗೆ ಅಶೋಕ್ ಪೈ ಹೆಸರನ್ನು ಸೇರಿಸಿಬಿಟ್ಟ.



ರಂಗನಾಥ


ಇನ್ನು ಜಡೇಜ ಕೌನ್ಸಿಲರ್ ಆಗಿದ್ದೇ ತಡ, ಮಂಡ್ಯದ ಸೀಮೆಎಣ್ಣೆ ದಂಧೆಯಿಂದ ಹಿಡಿದು ಯಾವ ಏರಿಯಾಕ್ಕೆ ಯಾರು ಹೋಗಿ ಪತ್ರಿಕೆ ಹಾಕಬೇಕೆನ್ನುವ ತನಕ ಪ್ರತಿಯೊಂದಕ್ಕೂ ಕೈಯಿಟ್ಟ. ಎಮ್ಮೆಲ್ಲೇ ಶ್ರೀನಿವಾಸ್‌ಗೆ ಬರುತ್ತಿದ್ದ ಚೂರುಪಾರು ಆದಾಯವೂ ತಪ್ಪಿಹೋಯಿತು. ಲಿಕ್ಕರ್ ನಾಗಣ್ಣ ಬೇರೆ ರಂಗಸ್ವಾಮಿಯ ಹಾವಳಿಗೆ ಕಂಗೆಟ್ಟಿದ್ದ. ಜೊತೆಗೆ ಜಫ್ರುಲ್ಲಾಖಾನ್ ಮತ್ತು ಅಬ್ಬಾಸ್ ಅಲಿಬೋಹ್ರಾ ಥರದವರೂ ಜಡೇಜನನ್ನು ಕಂಡರೆ ಲಟಿಕೆ ಮುರಿಯುತ್ತಿದ್ದರಲ್ಲ; ಇದೆಲ್ಲವನ್ನೂ ಬಳಸಿಕೊಂಡೇ ಪೈ ಜಡೇಜನನ್ನು ತೆಗೆದುಬಿಟ್ಟ.

ದುರಂತವೆಂದರೆ ಇಷ್ಟಾದ ಮೇಲೂ ಪೊಲೀಸರು ಲಿಕ್ಕರ್ ನಾಗಣ್ಣನ ಕೊಲೆ ಕೇಸಿಗೆ ರಾಕ್ಷಸ ರಂಗಸ್ವಾಮಿಯನ್ನು ಬಂಧಿಸಿಲ್ಲ, ಆತ ನಿರ್ನಾಮವಾಗುವ ತನಕ ಮಂಡ್ಯಕ್ಕೆ ಮುಕ್ತಿಯಿಲ್ಲ.

ಮಂಡ್ಯದ ವಿನಾಶಕ್ಕೆ ವಿಕೋಪಗಳೇ ಸುಗ್ಗಿ!

ಒಂದಾನೊಂದು ಕಾಲಕ್ಕೆ ನಾಡಿಗೇ ಅನ್ನ ಕೊಟ್ಟವನು ಮಂಡ್ಯದ ರೈತ. ಇಡೀ ಬೆಂಗಳೂರಿನ ಜನ ಇವತ್ತು ಕಾವೇರಿ ನೀರು ಕುಡಿಯುತ್ತಾರೆಂದರೆ ಅದಕ್ಕೆ ಮೊದಲು ಋಣಿಯಾಗಬೇಕಿದ್ದದ್ದು ಮಂಡ್ಯದ ರೈತನಿಗೇ.

ಅಂಥಾ ಮಂಡ್ಯಕ್ಕೆ ಮಂಡ್ಯವೇ ಇವತ್ತು ದಿವಾಳಿ ಎದ್ದಿದೆ. ಇಲ್ಲಿ ಸುಖವಾಗಿರುವವರೆಂದರೆ–ಇಸ್ಪೀಟು ಕ್ಲಬ್ಬು ನಡೆಸೋರು, ಮೈಕಸುಬು ದಂಧೆಯ ಬಾಸ್‌ಗಳವರು, ರೌಡಿಗಳು, ಪೊಲೀಸರು, ಸರ್ಕಾರಿ ಅಧಿಕಾರಿಗಳು ಮತ್ತು ನರ್ಸಿಂಗ್ ಹೋಮುಗಳ ಮಾಲೀಕರು ಮಾತ್ರ. ಮಂಡ್ಯದಲ್ಲಿರುವ ಇಸ್ಪೀಟು ಕ್ಲಬ್ಬುಗಳ ಒಟ್ಟು ಸಂಖ್ಯೆಯೇ ಎಪ್ಪತ್ತೆಂಟು. ಸಾಲದ್ದಕ್ಕೆ ಹಳ್ಳಿಹಳ್ಳಿಗಳಲ್ಲೂ ಕಬ್ಬಿನಗದ್ದೆ ಹೊಕ್ಕು ಇಸ್ಪೀಟು ತಟ್ಟುವ ಹೊಸ ಜುಗಾರಿ ಅಡ್ಡೆಗಳು ತಲೆ ಎತ್ತಿವೆ. ಮಂಡ್ಯದ ಅಸಂಖ್ಯಾತ ಲಾಡ್ಜುಗಳ ಪೈಕಿ ಹರಿಪ್ರಿಯ, ಅದರ ಪಕ್ಕದ ಗುರುರಾಜ ಮತ್ತು ವಿ.ವಿ. ರೋಡಿನ ವಿಶ್ರಾಂತ್ ಲಾಡ್ಜುಗಳನ್ನು ಬಿಟ್ಟರೆ ಮಿಕ್ಕೆಲ್ಲವೂ ಮಿನಿ ಕಾಮಾಟಪುರಗಳೇ!



ಮಾಜಿ ಮಂತ್ರಿ ಆತ್ಮಾನಂದರ ಒಡೆತನದ ಪದ್ಮಾ ಸಾಗರ್ ಲಾಡ್ಜಿನಿಂದ ಹಿಡಿದು ಜಡೇಜಾ ರವಿಯ ಚಾಣುಕ್ಯ ಸ್ವಾಭಿಮಾನ್, ಮಯೂರ ಲಾಡ್ಜುಗಳ ತನಕ ಪ್ರತಿಯೊಂದರಲ್ಲೂ ದಿನದ ಯಾವುದೇ ಗಳಿಗೆಯಲ್ಲೂ ಡಜನ್ನುಗಟ್ಟಲೇ 'ಮುತ್ತೈದೆ'ಯರಿರುತ್ತಾರೆ. ಈ ಪೈಕಿ ಅರ್ಧದಷ್ಟು ಮಂಡ್ಯ ಸುತ್ತಮುತ್ತಲ ರೈತಾಪಿ ಹೆಣ್ಣು ಮಕ್ಕಳೇ!

ಯಾವ ಮಂಡ್ಯವನ್ನು 'ಸಕ್ಕರೆ ನಾಡು', ಕಾವೇರಿಯ ಬೀಡು, ವಿಶ್ವೇಶ್ವರಯ್ಯನವರ ಕನಸಿನ ಗೂಡೆಂದು ಕನ್ನಡಿಗರು ಹೆಮ್ಮೆಪಡುತ್ತಿದ್ದರೋ ಅಂಥ ಮಂಡ್ಯದ ರೈತನ ಮಕ್ಕಳೇ ಇವತ್ತು ರೌಡಿಗಳಾಗುತ್ತಿದ್ದಾರೆ, ಲಾಡ್ಜುಗಳಲ್ಲಿ ಮೈಮಾರಾಟಕ್ಕಿಟ್ಟಿದ್ದಾರೆ! ಅದನ್ನು ಒಕ್ಕಲಿಗರ ದುರಂತವೆನ್ನಿ, ರೈತನ ಅವನತಿಯೆನ್ನಿ, ಕನ್ನಡಿಗರ ದೌರ್ಭಾಗ್ಯವೆನ್ನಿ. ಪರಿಸ್ಥಿತಿ ಹೀಗೇ ಮುಂದುವರೆದರೆ ಇವತ್ತು ರೌಡಿಗಳಾದ ರೈತನ ಮಕ್ಕಳೆಲ್ಲ ಮುಂದೊಮ್ಮೆ ಡಕಾಯಿತರಾಗಬೇಕು. ಇನ್ನು ಹೆಣ್ಣುಮಕ್ಕಳ ಪಾಡಂತೂ ವಿವರಿಸದಿದ್ದರೇನೇ ಒಳ್ಳೆಯದು!


ಹಾಗಂತ ಹೇಳಿದ್ದು ಕೆರಗೋಡಿನ ರೈತ ಮೂಗಣ್ಣ ಗೌಡ. ಒಂದು ಕಾಲಕ್ಕೆ ಮಂಡ್ಯದಲ್ಲಿ ಪೇಪಿ ನಗರವೆಂಬ ಪುಟ್ಟ ಕಾಮಾಟಪುರವಿತ್ತು, ಅಂದಿನ ಎಸ್ಪಿ ಬಿರಾದ್‌ಕರ್ ಅದನ್ನು ಮುಚ್ಚಿಸಿದ ನಂತರ ಅಲ್ಲಿದ್ದ ಹತಬಾಗಿನಿಯರೆಲ್ಲ ದೂರದ ಗೋವಾ, ಪುಣೆ ಎಲ್ಲೆಲ್ಲಿಗೋ ಓಡಿಹೋದರು. ದುರಂತವೆಂದರೆ ಇವತ್ತು ಮಂಡ್ಯಕ್ಕೆ ಮಂಡ್ಯವೇ ಕಾಮಾಟಪುರವಾಗುತ್ತಿದೆ. ಪ್ರತಿನಿತ್ಯ ಹಳ್ಳಿಗಳಿಂದ ಬಂದು ಮೈಮಾರಿಕೊಂಡು ಸಂಜೆಯ ಹೊತ್ತಿಗೆ ಮತ್ತೆ ವಾಪಸ್ಸಾಗುವ ಇಂಥ ಹೆಣ್ಣು ಮಕ್ಕಳೆಲ್ಲ ರೈತರ, ಮಾಜಿ ರೈತರ, ರೈತ ಕೂಲಿಗಳ ಮನೆಗಳ ಹೆಣ್ಣುಮಕ್ಕಳೆ.

ನಿನ್ನೆಮೊನ್ನೆಯ ತನಕ ಹತ್ತು ಜನಕ್ಕೆ ಊಟ ಹಾಕುತ್ತಿದ್ದೋರು ಇವತ್ತು ಹತ್ತು ಮಂದಿಗೆ ಮೈಮಾರಿಕೊಂಡು ಒಂದು ತುತ್ತು ತಿನ್ನುವ ಗತಿಗೆ ಬಂದಿದ್ದಾರೆ. ಮದ್ದೂರು, ಶಿವಳ್ಳಿ, ಬೇವಕಲ್ಲು, ಆಟ್ಲ, ಚಿಕ್ಕಮಂಡ್ಯ, ಮಂಗಲ, ಚೀರನಹಳ್ಳಿ, ಗಾಮನಹಳ್ಳಿ, ಬನ್ನೂರು ಮುಂತಾದೆಡೆಗಳಿಂದ ಪ್ರತಿನಿತ್ಯ ಮಂಡ್ಯಕ್ಕೆ ಬರುವವರೆಂದರೆ ಒಂದೋ ಗೂಂಡಾ ಅಡ್ಡೆಗಳಲ್ಲಿ ಅಂಡಲೆಯುವ ಹಳ್ಳಿ ಪುಂಡರು ಅಥವಾ ಲಾಡ್ಜುಗಳಲ್ಲಿ 'ಮೈ ಕಾಯಕ'ಕ್ಕೆ ಬರುವ ಅಬಲೆಯರು!

ಮಂಡ್ಯ ರೋಗದ ಕೊಂಪೆಯಾಗುತ್ತಿದೆ. ಜನ ಸಂಖ್ಯೆಯ ಅನುಪಾತಕ್ಕೆ ಲೆಕ್ಕ ಹಾಕಿದರೆ ಅತೀ ಹೆಚ್ಚಿನ ಏಡ್ಸ್ ರೋಗಿಗಳು ಮಂಡ್ಯ ಜಿಲ್ಲೆಯಲ್ಲೇ ಇದ್ದಾರೆ. ನಿನ್ನೆಮೊನ್ನೆಯ ತನಕ ರೈತರು ಕಬ್ಬು ತರಕಾರಿ ಮಾರಿ ದವರೆಲ್ಲ ಇಂಥ ಲಾಡ್ಜ್‌ಗಳಿಗೆ ಗಿರಾಕಿಗಳಾಗಿ ಬರುತ್ತಿದ್ದರು. ಆದರೆ ಈಗೀಗ ಕಾಲೇಜು ವಿದ್ಯಾರ್ಥಿಗಳೂ ಇಂಥ ಲಾಡ್ಜುಗಳಲ್ಲಿ ಕಾಣ ಸಿಗುತ್ತಾರೆಂದರೆ ಮಂಡ್ಯಕ್ಕೆ ಭವಿಷ್ಯವುಂಟೆ?

ಇಲ್ಲಿನ ರೈತರ ಸರ್ವನಾಶಕ್ಕೆ ಇಸ್ಪೀಟ್ ಕ್ಲಬ್ಬುಗಳು, ರೋಗದ ಲಾಡ್ಜುಗಳು, ಹಳ್ಳಿಹಳ್ಳಿಗಳಲ್ಲಿನ ದಿನಸಿ ಅಂಗಡಿಗಳನ್ನೂ ಬಿಡದೇ ಇಟ್ಟಾಡುವ ಥರ್ಡ್ಸ್ ಲಿಕ್ಕರ್ ಯಾವುದೂ ಬೇಡ. ಮಂಡ್ಯದ ರಕ್ತಪಿಪಾಸು ನರ್ಸಿಂಗ್ ಹೋಮಗಳೇ ಸಾಕು. ಬಹುಶಃ ಇಲ್ಲಿರುವಷ್ಟು ನರ್ಸಿಂಗ್ ಹೋಂಗಳು, ಮೆಡಿಕಲ್ ಸ್ಟೋರುಗಳು, ನಕಲಿ ವೈದ್ಯರು ಬೇರಾವುದೇ ಜಿಲ್ಲಾ ಕೇಂದ್ರದಲ್ಲಿಲ್ಲ. ಅಸಂಖ್ಯಾತ ವೇಶ್ಯಾವಾಟಿಕೆ ಲಾಡ್ಜುಗಳಿಂದಾಗಿ ನಾನಾ ಕಾಯಿಲೆಗಳು ಹರಡಿಕೊಂಡಿವೆ. ಇಂಥ ಕಾಯಿಲೆ, ಉಪಕಾಯಿಲೆಗಳನ್ನೇ ಬಂಡವಾಳವಾಗಿಟ್ಟುಕೊಂಡು ರೈತರ ರಕ್ತ ಹೀರಲು ನಿಂತಿರುವುದು ನರ್ಸಿಂಗ್ ಹೋಂ ಮಾಫಿಯಾ. ರೋಗಿ ಸಣ್ಣಗೆ ಕೆಮ್ಮಿದರೂ ಸಾಕು ಅದಕ್ಕೆ ಟೀಬಿಯ ಬಣ್ಣ ಕಟ್ಟಿ ನಾನಾ ಟೆಸ್ಟುಗಳ ನೆಪದಲ್ಲಿ ಸುಲಿದು ಹಾಕುತ್ತಾರೆ.

ಇದು ಮಂಡ್ಯದ ದುರಂತದ ಒಂದು ಮುಖವಷ್ಟೆ. ಅಸಲಿಗೆ ಮಂಡ್ಯದ ಆರ್ಥಿಕತೆಯೇ ದಿವಾಳಿಯೆದ್ದಿದೆ. ಒಂದಾನೊಂದು ಕಾಲಕ್ಕೆ ಸಹಸ್ರಾರು ಜನಕ್ಕೆ ಕೆಲಸ ಕೊಟ್ಟಿದ್ದ ಬೆಳಗೊಳದ ಪೇಪರ್ ಮಿಲ್, ಅಸಿಟೇಟ್ ಫ್ಯಾಕ್ಟರಿಗಳೆಲ್ಲ ಒಂದೊಂದಾಗಿ ಮುಚ್ಚಿಕೊಂಡವು. ನಾಲ್ಕೂವರೆ ಸಾವಿರದಷ್ಟಿದ್ದ ಮೈಷುಗರ್ ಕಾರ್ಮಿಕರ ಸಂಖ್ಯೆ ಕ್ರಮೇಣ ಏಳುನೂರಕ್ಕಿಳಿಯಿತು. ಮಂಡ್ಯ ಸುತ್ತಮುತ್ತ ಇದ್ದ ಎಂಟು ಸಾವಿರದಷ್ಟು ಆಲೆಮನೆಗಳ ಪೈಕಿ ಆರು ಸಾವಿರದಷ್ಟು ಒಂದೊಂದಾಗಿ ಮುಚ್ಚಿಕೊಂಡವು. ಕನಿಷ್ಠ ಆಲೆಮನೆಯೊಂದು ಹಳ್ಳಿಯೊಂದರ ಹದಿನೈದಿಪ್ಪತ್ತು ಜನಕ್ಕೆ ಕೆಲಸ ಕೊಡುತ್ತಿತ್ತು. ಇದೇ ಹೊತ್ತಿಗೆ ಬೆಂಕಿ ರೋಗ, ಕಂದು ಜಿಗಿರೋಗ ಬಂದು ಬತ್ತದ ಬೆಳೆ ಎಕ್ಕುಟ್ಟಿತು. ಟನ್ ಕಬ್ಬಿಗೆ ಮೈಷುಗರ್ ಕೊಡುತ್ತಿದ್ದ ರೇಟೂ ಕುಸಿದು ಹೋಯಿತು. ಬೆಲ್ಲಕ್ಕೆ ಸ್ಥಿರವಾದ ಬೆಲೆ ಸಿಗದಿದ್ದದ್ದು ಒಂದೆಡೆಯಾದರೆ ಮತ್ತೊಂದೆಡೆ ಇಡೀ ಬೆಲ್ಲದ ಮಾರುಕಟ್ಟೆಯನ್ನೇ ಮಾರ್ವಾಡಿಗಳು ಆಕ್ರಮಿಸಿಕೊಂಡರು. ಅವರು ಕೇಳಿದ ರೇಟಿಗೆ ಬೆಲ್ಲ ಹಾಕಬೇಕು. ಅದೂ ಸಾಲಕ್ಕೆ ಕೊಡಬೇಕು. ಬೆಲ್ಲ ಮಾರಿದ ಮಾರ್ವಾಡಿ ಅದನ್ನು ರೈತನಿಗೆ ತಲುಪಿಸುವ ಹೊತ್ತಿಗೆ ಬಡ್ಡಿ ವಿಪರೀತ ಬೆಳೆದಿರುತ್ತದೆ. ಬೆಲ್ಲದ ಉಸಾಬರಿ ಬೇಡವೆಂದು ಮೈಷುಗರ್ ಫ್ಯಾಕ್ಟರಿಗೆ ಕಬ್ಬು ಹೊಡೆದರೆ ಅವರು ದುಡ್ಡು ಕೊಡುವುದು







ಮೂರು ತಿಂಗಳ ನಂತರವೇ. ಅಷ್ಟು ಹೊತ್ತಿಗೆ ಬಡ್ಡಿ ಬೆಳೆದಿರುತ್ತೆ, ರೈತನ ಹೆಂಡತಿಯ ಚಿನ್ನದ ಒಡವೆಗಾಗಲೇ ಮಾರ್ವಾಡಿ ಕೈಗೆ ಹಾಕಿರುತ್ತಾನೆ.

ಇಲ್ಲಿನ ಪೇಟೆ ಬೀದಿಯ ಮಾರ್ವಾಡಿಗಳದ್ದೇ ಮತ್ತೊಂದು ನರಕ. ಕಬ್ಬೋ, ಭತ್ತವೋ ನಾಟ ಮಾಡಬೇಕೆಂದರೆ ಅದಕ್ಕೂ ಮಾರ್ವಾಡಿಯೆದುರು ಕೈಚಾಚಬೇಕು. ಎಕರೆಗೆ 50 ಸಾವಿರವನ್ನಷ್ಟೇ ಸಾಲ ಕೊಡುವ ಮಾರ್ವಾಡಿ ಇಡೀ ಆಸ್ತಿಯನ್ನೇ ಕ್ರಯಪತ್ರ ಬರೆಸಿಕೊಳ್ಳುತ್ತಾನೆ. ಅವರಿಗೆ ಪ್ರತಿ ಹಳ್ಳಿಯಲ್ಲೂ ಏಜೆಂಟರಿದ್ದಾರೆ. ರಸಗೊಬ್ಬರ ಉಂಡೂ ಉಂಡು ಮಂಡ್ಯದ ಗದ್ದೆಗಳೆಲ್ಲ ವಿಷಮಯಗೊಂಡಿವೆ. ಹೆಚ್ಚೆಂದರೆ ಇನ್ನು ಹತ್ತು ವರ್ಷಗಳ ಕಾಲ ಅದರಲ್ಲಿ ಬೆಳೆಯಬಹುದೇ ಹೊರತು ಆನಂತರ ಮಂಡ್ಯದ ನೆಲ ಬರಡಾಗುತ್ತದೆ. ಆದರೆ ಅದಕ್ಕೂ ಮೊದಲ ರೈತ ಆತ್ಮಹತ್ಯೆಗಿಳಿದಿದ್ದಾನೆ. ಇಲ್ಲಿನ ಆತ್ಮಹತ್ಯೆಗಳೆಲ್ಲ ಇಸ್ಪೀಟಿನ ಕಾರಣಕ್ಕೋ, ಕುಡಿತದ ಚಟಕ್ಕೋ ಅಥವಾ ಸಾಲದ ಒಡುಗಿಗೋ ಸಂಭವಿಸಿದ ಆತ್ಮಹತ್ಯೆಗಳೆ. ಇಲ್ಲಿನ ವರದಕ್ಷಿಣೆ ಸಾವುಗಳ ಹಿಂದೆ ಸೂಕ್ಷ್ಮವಾಗಿ ಗಮನಿಸಿದರೆ ಕೃಷಿ ದಿವಾಳಿಯಾಗಿರುವುದು ಗೋಚರಿಸುತ್ತದೆ. ಆತ್ಮಹತ್ಯೆಗಳ ವೇಗದಲ್ಲಿ ಮಂಡ್ಯ ಜಿಲ್ಲೆ ಇಡೀ ಕರ್ನಾಟಕಕ್ಕೇ ಮೊದಲನೇ ಸ್ಥಾನದಲ್ಲಿದೆ.

2006 ರಲ್ಲಿ 25 ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡರೆ ಈ ವರ್ಷದ ಅಕ್ಟೋಬರ್‌ತನಕ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ ಹದಿನಾಲ್ಕು.

ಕೆಲಸವಿಲ್ಲ, ಬೆಳೆ ಬೆಳೆದು ಪ್ರಯೋಜನವಿಲ್ಲ, ಅಸಲಿಗೆ ವ್ಯವಸಾಯದ ಬಗ್ಗೆ ಯುವ ಪೀಳಿಗೆಗೇ ಆಸಕ್ತಿಯಿಲಲ್. ಜೀನ್ಸ್ ಹಾಕಬೇಕು, ಚೆನ್ನಾಗಿ ತಿಂದು ಕುಡಿಬೇಕು. ಸಿನಿಮಾ ನೋಡಬೇಕು. ಇದು ಪ್ರತಿ ಹಳ್ಳಿಯ ಪಡ್ಡೆ ಹುಡುಗರ ಪ್ರವೃತ್ತಿಯಾಗಿಬಿಟ್ಟಿದೆ.

ಇಂಥ ಹುಡುಗರನ್ನು ಬಿಟ್ಟು ಹಳ್ಳಿಹಳ್ಳಿಗಳಲ್ಲಿ ಥರ್ಡ್ಸ್ ದಂಧೆಗೆ ಕೈಯಿಟ್ಟವನು ಜಡೇಜಾ ರವಿ. ಲಿಕ್ಕರ್ ರಂಗಸ್ವಾಮಿ ಥರ್ಡ್ಸ್‌ನ ಅಸಲಿ ಧಣಿಯಾದರೆ ಜಡೇಜಾ ಈ ದಂಧೆಯ ಉಸ್ತುವಾರಿ ನಿಭಾಯಿಸುತ್ತಿದ್ದ. ಕ್ರಮೇಣ ಇದೇ ಹುಡುಗರು ಬಡ್ಡಿ ದಂಧೆಗೆ ನಿಂತರು. ಇಂಥ ಹುಡುಗರನ್ನು ಬಿಟ್ಟು ಜಡೇಜಾ ಹಳ್ಳಿಹಳ್ಳಿಯಲ್ಲೂ ಕೇಬಲ್ ಕಾಳಗ ಶುರು ಹಚ್ಚಿಕೊಂಡ. ಮಂಡ್ಯಾಕ್ಕಷ್ಟೇ ಸೀಮಿತವಾಗಿದ್ದ ರೌಡಿ ಗುಂಪುಗಳು ಹಳ್ಳಿಹಳ್ಳಿಗಳಲ್ಲೂ ತಲೆ ಎತ್ತಿದವು.

ಈಗ ಜಡೇಜನ ಕೊಲೆಯಾಗಿದ್ದೇ ತಡ, ಈ ಅಷ್ಟೂ ಹಳ್ಳಿ ಗ್ಯಾಂಗ್‌ಗಳು ಅನಾಥವಾಗಿವೆ. ಪೈ ಹತ್ಯೆಗೆಂದು ಜಡೇಜನ ಹುಡುಗರು ಶಪಥಗೈದಿದ್ದಾರೆ ನಿಜ. ಆದರೆ ಇದೇ ಗುಂಪಿನ ಒಂದು ವರ್ಗಕ್ಕೆ ಸದ್ಯ ಅಶೋಕ್ ಪೈ ಆರಾಧ್ಯದೈವವಂತೆ. ಯಾವತ್ತು ಯಾರು ಯಾರನ್ನು ಕೊಲ್ಲುತ್ತಾರೋ? ಒಂದಾನೊಂದು ಕಾಲಕ್ಕೆ ಮಂಡ್ಯವೆಂದರೆ ಎಚ್.ಕೆ. ವೀರಣ್ಣಗೌಡ, ಶಂಕರೇಗೌಡ, ಮಾದೇಗೌಡರು ನೆನಪಾಗುತ್ತಿದ್ದರು. ಅಲ್ಲಿನ ಎತ್ತಿನಗಾಡಿಗಳ ಮೇಲೆ ವಿಶ್ವೇಶ್ವರಯ್ಯ, ರಾಜ್‌ಕುಮಾರ್, ಕಾವೇರಿ ತಾಯಿಯ ಚಿತ್ರಗಳಿರುತ್ತಿತ್ತು. ಇವತ್ತು ಜಡೇಜಾ, ಪೈ, ಎಸ್ಸೆ ರಾಮಣ್ಣನಂಥ ರೌಡಿಗಳು ನೆನಪಾಗುತ್ತಾರೆ. ಅವರ ಹತ್ಯೆಗಳೇ ದೊಡ್ಡ ಸುದ್ದಿಯಾಗುತ್ತವೆ. ಅಲ್ಲಿನ ವೇಶ್ಯಾವಾಟಿಕೆ, ಇಸ್ಪೀಟ್ ಕ್ಲಬ್ಬುಗಳು, ಬಡ್ಡಿ ದಂಧೆ, ರೈತರ ಆತ್ಮಹತ್ಯೆ, ನರ್ಸಿಂಗ್ ಹೋಮುಗಳ ಸುಲಿಗೆ ಎಲ್ಲವೂ ಕಣ್ಣಿಗೆ ರಾಚುತ್ತಲೇ ಇವೆ.

ಏನಾಗಬೇಕಿದ್ದ ಮಂಡ್ಯ ಏನಾಯಿತು?

–ರಾ.ಸೋ.

ಒಂದಷ್ಟು ದಿನ ಜೋಡಿಯ ಕುಮಾರಸ್ವಾಮಿ ಲೇಔಟನ ಮನೆಯಲ್ಲಿದ್ದು ಆನಂತರ ಕೋರಮಂಗಲದ ಜಪ್ರುಲ್ಲಾಖಾನ್‌ನ ಬಂಗಲೆಯಲ್ಲಿ ತಂಗುತ್ತಾನೆ.

ಈ ಹೊತ್ತಿಗಾಗಲೇ ಕಲಾಸಿಪಾಳ್ಯದ ಇನ್ಸ್‌ಪೆಕ್ಟರ್ ಎಸ್.ಕೆ. ಉಮೇಶ್ ಜಡೇಜನ ಅಸಲೀ ಹಂತಕರ ಪೈಕಿ ಅರ್ಧ ಡಜನ್ ಹುಡುಗರನ್ನು ಹಿಡಿದುಹಾಕಿದ್ದು; ಪೈನ ಇಡೀ ಲೆಕ್ಕಾಚಾರವನ್ನೇ ತಲೆಕೆಳಗು ಮಾಡಿಬಿಟ್ಟಿತ್ತು. ಜಡೇಜನ ಹತ್ಯೆಯ ಬೆಂಗಳೂರು ಲಿಂಕನ್ನು ಯಾರಿಗೂ ಗೊತ್ತಾಗದ ಹಾಗೇ ಮುಚ್ಚಿಹಾಕಿ ತಾನು ಮಂಡ್ಯದ ಒಂದಷ್ಟು ಹುಡುಗರ ಜೊತೆ ಸರೆಂಡರ್ ಆಗುವುದು ಪೈ ಹುನ್ನಾರವಾಗಿತ್ತು, ಆದರೆ ಕಲಾಸಿಪಾಳ್ಯದ ಇನ್ಸ್‌ಪೆಕ್ಟರ್ ಉಮೇಶ್ ಇನ್ನಾವುದೋ ತನಿಖೆಗೆ ಕೈಯಿಟ್ಟು ಕಾಮಾಕ್ಷಿಪಾಳ್ಯದ ಮಚ್ಚನ ಭಾಮೈದ ಉಮರೆಯ ಬೆನ್ನಿಗೆ ಬಿದ್ದಿದ್ದರಲ್ಲ; ಉಮರೆ ಉರ್ಫ್ ಉಮೇಶ ಜಡೇಜ ಕೊಲೆಯಾಗುವುದಕ್ಕೂ ತಿಂಗಳ ಹಿಂದಿನಿಂದಲೇ ಕಾಮಾಕ್ಷಿಪಾಳ್ಯದಿಂದ ನಾಪತ್ತೆಯಾಗಿದ್ದ, ಹಾಗೇ ನಾಪತ್ತೆಯಾದವನು ಶ್ರೀರಂಗಪಟ್ಟಣದ ಹಾಸ್ಟೆಲಿನಲ್ಲಿ ಅಡಗಿ ಕೂತಿದ್ದ.

ಇನ್ಸ್‌ಪೆಕ್ಟರ್ ಉಮೇಶ್‌ಗಿದು ಗೊತ್ತಾಗುತ್ತಿದ್ದಂತೆ ಇನ್ನೇನೋ ಅಪಾಯದ ವಾಸನೆ ಹತ್ತಿದೆ. ಆತನನ್ನು ಹಿಂಬಾಲಿಸಿಕೊಂಡೇ ಇರುವಾಗಲೇ ಜಡೇಜನ ಹತ್ಯೆ ನಡೆದದ್ದಕ್ಕೂ, ಅತ್ತ ಚಿತ್ರದುರ್ಗ ಜೈಲಿನಲ್ಲಿ ಕೋತಿರಾಮ ಮತ್ತು ಕಾಮಾಕ್ಷಿಪಾಳ್ಯದ ಜಾನಿಯ ಜೊತೆ ಉಮರೇ ಮತ್ತು ಕಳ್ಳಜಗ್ಗ ರೆಗ್ಯುಲರ್ ಕಾಂಟ್ಯಾಕ್ಟ್‌ನಲ್ಲಿರುವುದಕ್ಕೂ, ಒಂದೇ ಆಗಿದೆ. ಕಸ್ಟಡಿಯಲ್ಲಿದ್ದ ಉಮೇಶ್ ಜಡೇಜನ ಹತ್ಯೆ ನಂತರ ಕಾಮಾಕ್ಷಿಪಾಳ್ಯಕ್ಕೆ ವಾಪಸ್ಸಾಗಿದ್ದ ಉಮರೇ ಮಹೇಂದ್ರ, ರೆಡ್ಡಿ ಇತ್ಯಾದಿ ಆರು ಮಂದಿ ಹುಡುಗರನ್ನು ಹಿಡಿದು ಜಡೇಜನ ಹತ್ಯೆಯ ಸತ್ಯವನ್ನು ಬಾಯಿಬಿಡಿಸದೇ ಹೋಗಿದ್ದರೆ, ಬಹುಶಃ ಅಶೋಕ್ ಪೈ ಯಾರ್‍ಯಾರೋ ಅನಾಮಿಕರ ಜೊತೆ ಸರೆಂಡರ್ ಆಗಿರುತ್ತಿದ್ದ.


ಈಗ ಏನನ್ನೂ ಬಚ್ಚಿಡುವಂತಿಲ್ಲ, ಇನ್ನೂ ಹೆಚ್ಚುಕಾಲ ತಲೆ ಮರೆಸಿಕೊಂಡಿರುವುದಕ್ಕೂ ಸಾಧ್ಯವಿಲ್ಲ, ಏಕೆಂದರೆ ಹತ ಜಡೇಜನ ಹೆಂಡತಿ ಪೂರ್ಣಿಮಾ ತನ್ನ ತಲೆಗೆ 25 ಲಕ್ಷದ ಸುಪಾರಿ ಘೋಷಿಸಿದ್ದಾಳೆ. ಜಡೇಜನ ಶಿಷ್ಯ ಬಂಗಾರಪ್ಪ ಸದ್ಯ ಜೈಲಲ್ಲಿದ್ದಾನಾದರೂ ಆತನ ಹುಡುಗರು ತನ್ನನ್ನು ಹುಡುಕಿ ಫೀಲ್ಡಿಗಿಳಿದಾಗಿದೆ. ಹಾಗೊಮ್ಮೆ ಅವರಿಂದ ತಪ್ಪಿಸಿಕೊಂಡರೂ ಮಂಡ್ಯದ ಪೊಲೀಸರು ಬಿಡಬೇಕಲ್ಲ? ಒಂದೋ ಅವರೇ ನಿಂತು ಎನ್‌ಕೌಂಟರ್ ಮಾಡಬಹುದು ಅಥವಾ ಎದುರಾಳಿಗಳಿಗೆ ಟಿಪ್ಸ್ ಕೊಟ್ಟು ಕೊಲ್ಲಿಸಲೂಬಹುದು. ಅದಕ್ಕಿಂತ ಜೈಲೇ ಸೇಫು.

ಇಂಥ ಲೆಕ್ಕ ಹಾಕಿಯೇ ಪೈ ಬೆಂಗಳೂರಿನ ವಕೀಲೆ ಪದ್ಮಾವತಿ ಮತ್ತು ಮುರಳೀಧರ್‌ರನ್ನು ಹಿಡಿದು ಡಿಸೆಂಬರ್ 21 ರ ಶುಕ್ರವಾರ ಮಧ್ಯಾಹ್ನ ಮಂಡ್ಯಕ್ಕೆ ಬಂದಿದ್ದಾನೆ. ಕೋರ್ಟು ಆತನನ್ನು ಚಾಮರಾಜನಗರ ಜೈಲಿಗೆ ರವಾನಿಸಿದೆ. ಸದ್ಯ ಪೊಲೀಸ್ ಎನ್‌ಕೌಂಟರ್ ಮತ್ತು ಜಡೇಜನ ಶಿಷ್ಯರ ಪ್ರತೀಕಾರ ಎರಡರಿಂದಲೂ ಪೈ ಬಚಾವಾಗಿರಬಹುದು. ಆದರೆ ಕೊಂದ ಪಾಪ?


ಮಂಡ್ಯಕ್ಕೆ ಇನ್ನೇನೆಲ್ಲಾ ಅನಾಹುತ ಕಾದಿದೆಯೋ!

ಬ್ಯಾಟ್ಸ್‌ಮನ್ ಕಳ್ಳಾಜಗ್ಗನ ವಿಕೆಟ್ಟಿಗಾಗಿ...!

ಮೊದಲು ಗಿರಿನಗರದ ಕುಮ್ಮಿಯನ್ನು ಕೊಂದ. ಆನಂತರ ಕೆಂಗೇರಿಯಲ್ಲಿ ತಿಮ್ಮೇನಹಳ್ಳಿ ಸೂರಿ ಮತ್ತು ಟೋನಿಯ ಜೋಡಿ ಹತ್ಯೆಗೆ ಪ್ರಮುಖ ಬ್ಯಾಟ್ಸ್‌ಮನ್ ಆಗಿದ್ದ. ಈಗೇನು ಜಡೇಜನ ಬರ್ಬರ ಕೊಲೆ ನಡೆಯಿತೋ ಅದಕ್ಕೆ ಮೂಲ ಸೂತ್ರಧಾರನೇ ಈತ. ಹೆಸರು ಜಗದೀಶ ಅಲಿಯಾಸ್ ಕಳ್ಳ ಜಗ್ಗ!








ನಾಗರಬಾವಿ ಮಾರುತಹಳ್ಳಿಯ ಕಳ್ಳಾ ಜಗ್ಗ ಸದ್ಯ ಕೋತಿರಾಮನ ಪಡೆಯ ಇನ್ನೂ ಪೊಲೀಸರಿಗೆ ಸಿಕ್ಕಿಬೀಳದ ಏಕೈಕ ಬ್ಯಾಟ್ಸ್‌ಮನ್. ಪಾತಕ ಭಾಷೆಯಲ್ಲಿ ಬ್ಯಾಟ್ಸ್‌ಮನ್ ಅಂದರೆ ನುಗ್ಗಿ ಕತ್ತರಿಸುವವನು. ಯಾವುದೇ ದಾಳಿಯಲ್ಲಿ ಅದೆಷ್ಟೇ ಹಂತಕರಿದ್ದರೂ ಮುನ್ನುಗ್ಗಿ ಅದೂ ಬೇಟೆಯ ತಲೆಗೇ ಗುರಿಯಿಟ್ಟು ಲಾಂಗ್ ಬೀಸುವುದರಲ್ಲಿ ಕಳ್ಳಾ ಜಗ್ಗ ನಿಸ್ಸೀಮ. ಎದುರಾಳಿ ಸೈಕಲ್ ರವಿಯ ಪಡೆಯಲ್ಲಿ ಇಂಥ ಡಜನ್ನುಗಟ್ಟಲೇ ಬ್ಯಾಟ್ಸ್‌ಮನ್‌ಗಳಿರಬಹುದು. ಆದರೆ ಕಾಮಾಕ್ಷಿಪಾಳ್ಯದ ಮಚ್ಚನ ಪಡೆಯಲ್ಲಿ ಇದ್ದೊಬ್ಬನೇ ಬ್ಯಾಟ್ಸ್‌ಮನ್ ಅಂದರೆ ಆತ ಪೆದ್ದಗುಂಡ. ಆತನನ್ನು ಇನ್ಸ್‌ಪೆಕ್ಟರ್ ಉಮೇಶ್ ಹಿಡಿತಂದು ಮಂಡಿಚಿಪ್ಪು ಪುಡಿ ಮಾಡಿ ದವಡೆ ಹಲ್ಲನ್ನೆಲ್ಲ ಕಿತ್ತು ಸ್ವಾಪ್ ಮಾಡಿದ ನಂತರ ಆ ಜಾಗಕ್ಕೆ ಬಂದವನು ದಿನೇಶ.

ಇಲ್ಲಿಗೆ ನಾಲ್ಕು ತಿಂಗಳ ಹಿಂದೆ ದಿನೇಶನನ್ನು ಹಿಡಿದು ತಂದು ಮಂಡಿಚಿಪ್ಪು ಒಡೆದು ಹಲ್ಲುಕಿತ್ತು ಬರುವಂತೆ ರಿಪೇರಿ ಮಾಡಿದ ಇನ್ಸ್‌ಪೆಕ್ಟರ್ ಉಮೇಶ್ ಆತನನ್ನೂ ಜೈಲಿಗೆ ದಬ್ಬಿದ್ದಾರೆ. ಆತನಕ ಕಳ್ಳಾ ಜಗ್ಗ ಎಂಬ ಜೀವಿಯೊಂದು ಇದೆಯೆಂಬುದು ಯಾರಿಗೂ ಗೊತ್ತಿರಲಿಲ್ಲ. ಯಾವತ್ತು ಜಡೇಜನ ಕೊಲೆಯಾಯಿತೋ ಮಚ್ಚನ ಬಾಮೈದ ಉಮೇಶನನ್ನು ತಂದು ರುಬ್ಬಿದ ಮೇಲೆ ಬೆಳಕಿಗೆ ಬಂದವನೇ ಕಳ್ಳಾಜಗ್ಗ. ಜ್ಞಾನಭಾರತಿ ಲಿಮಿಟ್ಸಿನಲ್ಲಿ ಕಳುವು ಮಾಡಿ ಜೈಲು ಪಾಲಾಗಿದ್ದ ಈತನಿಗೆ ಜೈಲಲ್ಲೇ ಕೋತಿರಾಮನ ಪರಿಚಯವಾಗಿದೆ. ಹಾಗೇ ಮಚ್ಚನ ಪಡೆ ಸೇರಿದ ಜಗ್ಗ ಗಿರಿನಗರಕ್ಕೆ ಬಂದು ಕುಮ್ಮಿಯನ್ನು ಕೊಂದ. ತದನಂತರ ಟೋನಿ-ಸೂರಿ ಕೊಲೆಯಲ್ಲಿ ಪ್ರಮುಖ ಹಿಟ್‌ಮ್ಯಾನ್ ಆಗಿದ್ದ. ಜೊತೆಗಿದ್ದ ಪೆದ್ದುಗುಂಡ ಸಿಕ್ಕಿಬಿದ್ದನಾದರೂ ಜಗ್ಗ ಮಾತ್ರ ಭೂಗತನಾಗೇ ಇದ್ದ. ಹಾಗಿದ್ದುಕೊಂಡೇ ಈಗ ಜಡೇಜನನ್ನು ಮುಗಿಸಿದ್ದಾನೆ. ಈತನ ಹಿನ್ನೆಲೆಯೇನು? ತಂದೆತಾಯಿ ಯಾರು? ಮೂಲವೇನು? ಇತ್ಯಾದಿ ಎಲ್ಲವೂ ನಿಗೂಢ. ಸದ್ಯ ಇನ್ಸ್‌ಪೆಕ್ಟರ್ ಉಮೇಶ್ ಈತನ ಬೆನ್ನಿಗೆ ಬಿದ್ದಿದ್ದಾರೆ. ಕೊರಂಗು ಪಡೆಯ ಮೂವರು ಬ್ಯಾಟ್ಸ್‌ಮನ್‌ಗಳ ಪೈಕಿ ಸದ್ಯ ಬಾಕಿ ಉಳಿದಿರುವುದು ಕಳ್ಳಾಜಗ್ಗ ಮಾತ್ರ.

ಇನ್ಸ್‌ಪೆಕ್ಟರ್ ಉಮೇಶ್ ಬೌಲ್ಸರ್‌ಗೆ ಅದ್ಯಾವತ್ತು ವಿಕೆಟ್ ಉರುಳುತ್ತೋ?

'ಜೋಗಿ'ಯಿಂದ ಬಂದದ್ದು 'ಪ್ರೀತಿ..' ಯಲ್ಲಿ ಕೊಚ್ಚಿ ಹೋಗುತ್ತದೆ



ಬಿಡುಗಡೆಯ ಮುನ್ನ 'ಜೋಗಿ' ಚಿತ್ರ ಬಗ್ಗೆ ಎಲ್ಲೆಡೆ ದೊಡ್ಡ ಹವಾ ಎದ್ದಿದ್ದರಿಂದ ನಿರ್ಮಾಪಕ ರಾಮ್‌ಪ್ರಸಾದ್ ರಾಜ್ಯದ ಬಹುತೇಕ ಕಡೆ ತಾವೇ ಅದನ್ನು ರಿಲೀಜ್ ಮಾಡಿ ತಮ್ಮ ಜೋಳಿಗೆಯನ್ನು ತುಂಬಿಸಿಕೊಂಡಿದ್ದರು. ಆ ಚಿತ್ರದಿಂದ ಬಂದ ಲಾಭದಲ್ಲಿಯೇ ಅವರು ಒಂದೂವರೆ ಕೋಟಿ ರೂಪಾಯಿಗಳನ್ನು ತೆರಿಗೆಯಾಗಿ ನೀಡಿದ್ದರೆಂದರೆ ಅವರು ಇನ್ನೆಷ್ಟು ಲಾಭ ಮಾಡಿಕೊಂಡಿದ್ದರು ಎಂಬುದನ್ನು ನೀವೇ ಊಹಿಸಿ!

ಈಗ 'ಪ್ರೀಯಾಭೂಮೇ' ಚಿತ್ರದ ಬಗ್ಗೆ ಅಂತಹದ್ದೇ ಹವಾ ಇಲ್ಲದಿದ್ದರೂ ಚಿತ್ರದ ಬಗ್ಗೆ ಅದಮ್ಯ ವಿಶ್ವಾಸ ಹೊಂದಿರುವ ರಾಮ್‌ಪ್ರಸಾದ್ ಅದನ್ನು — ಮೈಸೂರು ಮತ್ತು ಬಳ್ಳಾರಿ ಹೊರತುಪಡಿಸಿ— ಎಲ್ಲೆಡೆ ತಾವೇ ಬಿಡುಗಡೆ ಮಾಡುವುದಕ್ಕೆ ಮುಂದಾಗಿದ್ದಾರೆ.

ಆದರೆ ಬಾಕ್ಸ್ ಆಫೀಸಿನಲ್ಲಿ ಗೆಲ್ಲಲೇಬೇಕು ಎಂದು ಅವರೊಂದು ತಂತ್ರವನ್ನು ರೂಪಿಸಿದ್ದಾರೆ. ಅದ್ಯಾವುದೆಂದರೆ ಏಕಕಾಲದಲ್ಲಿ ಐವತ್ತು, ಅರವತ್ತು ಕೇಂದ್ರಗಳಲ್ಲಿ ಬಿಡುಗಡೆ ಮಾಡಿ ಒಂದೇ ವಾರದಲ್ಲಿ ಹಾಕಿರುವ ಬಂಡವಾಳವನ್ನು ವಾಪಾಸು ಪಡೆಯುವುದು.

ಈ ತಂತ್ರ ವರ್ಕ್‌ಔಟ್ ಆದರೆ ಸರಿ. ಇಲ್ಲವೆಂದರೆ 'ಜೋಗಿ' ಯಿಂದ ಬಂದದ್ದು 'ಪ್ರೀತಿ..'ಯಲ್ಲಿ ಕೊಚ್ಚಿಹೋಗಲಿದೆ.



ಪ್ರೇಮ್ ಭೂಮಿಮೇಲೆ ಇದಾನಾ?

ಈ ವಾರ ಪ್ರೇಮ್ ಭವಿಷ್ಯ ನಿರ್ಧಾರವಾಗಲಿದೆ. 'ಪ್ರೀತಿ ಏಕೆ ಭೂಮಿ ಮೇಲಿದೆ' ಚಿತ್ರಕ್ಕೆಂದು ಅವರು ಮಾಡಿರುವ ಗಿಮಿಕ್‌ಗಳಿಗೆ ಲೆಕ್ಕವೇ ಉಳಿದಿಲ್ಲ. ಆದರೆ ಚಿತ್ರದಲ್ಲಿ ಗಟ್ಸ್ ಇದ್ದರೆ ಮಾತ್ರ ಗೆಲ್ಲುತ್ತದೆ. ಒಂದು ವೇಳೆ ಚಿತ್ರ ಕೈಕೊಟ್ಟಿದ್ದೇ ಆದಲ್ಲಿ ಪ್ರೇಮ್ ಕತೆ ಮುಂದೇನು?

■ ಜಿ. ಅರುಣ್ ಕುಮಾರ್

'ಕರಿಯ' ಪ್ರೇಮ್ ಮತ್ತೆ 'ಜೋಗಿ'ಯಂತಹ ಹಿಟ್ ಚಿತ್ರ ನೀಡುತ್ತಾರೋ ಅಥವಾ 'ಎಕ್ಸ್‌ಕ್ಯೂಸ್ ಮಿ, ಈ ಬಾರಿ ಎಡವಿದೆ' ಎಂದು ಕ್ಷಮೆ ಕೇಳುತ್ತಾರೋ? ಪ್ರೇಮ್ ನಿರ್ದೇಶಿಸಿರುವ ಮತ್ತು ನಾಯಕನಾಗಿ ನಟಿಸಿರುರುವ ಚಿತ್ರ 'ಪ್ರೀತಿ ಯಾಕೆ ಭೂಮಿ ಮೇಲಿದೆ' ಬಿಡುಗಡೆಗೆ ಸಜ್ಜಾಗಿನಿಂತಿರುವ ಈ ಹೊತ್ತಿನಲ್ಲಿ ಈ ಪ್ರಶ್ನೆ ಗಾಂಧಿನಗರದೆಲ್ಲೆಡೆ ಕೇಳಿಬರುತ್ತಿದೆ.

ಇದಕ್ಕೆ ಕಾರಣವೂ ಇದೆ. ಯಾವತ್ತೂ ಚಿತ್ರಕತೆಯನ್ನು, ಡೈಲಾಗ್‌ಗಳನ್ನು, ಶಾಟ್ ಬ್ರೇಕ್‌ಡೌನ್ ಅನ್ನು ತಯಾರಿಸಿಯೇ ಚಿತ್ರೀಕರಣಕ್ಕೆ ಕೈಹಾಕುತ್ತಿದ್ದ ಪ್ರೇಮ್ ತನ್ನ ಮಹತ್ವಾಕಾಂಕ್ಷೆಯ ಚಿತ್ರದ ಬಗ್ಗೆ ಮೊದಲಿನಿಂದಲೂ ಅವಸರವನ್ನು ತೋರಿಸುತ್ತಾ, ಎಡವಟ್ಟುಗಳನ್ನು ಮಾಡಿಕೊಳ್ಳುತ್ತಾ ಸಾಗಿದ್ದಾರೆ. ಉದಾಹರಣೆಗೆ ಚಿತ್ರೀಕರಣ ಪ್ರಾರಂಭವಾದ ಮೇಲೆ ತಮ್ಮ ನೂತನ ಪತ್ನಿ ರಕ್ಷಿತಾಳಿಗೆ ಒಂದು ಪಾತ್ರ ನೀಡುವುದರಿಂದ ಶುರುಮಾಡಿ ಕೊನೆಕೊನೆಗೆ ಅಂದಿನ ಮುಖ್ಯಮಂತ್ರಿ ಕುಮಾರಸ್ವಾಮಿಗೊಂದು ... ಕೊಡುವ ಪಾತ್ರ, ಸಿದ್ದಗಂಗಾ ಸ್ವಾಮಿಗಳಿ... ಬೋಧನೆ ನೀಡುವ ಪಾತ್ರ, ಹೀಗೆ ಕತೆಗೆ ಸರಿ... ಇಲ್ಲವೋ ಆದರೂ ಎಲ್ಲರನ್ನು ಸೇರಿಸಿ... ಸಾಗಿದರು. ಇದನ್ನು ಕಂಡೇ "ಈ ಪ್ರೇಮ... ಹೀಗೆ ಮಾಡುತ್ತಿದ್ದಾನೆ" ಎಂಬ ಪ್ರಶ್ನೆ ... ಕಾಡಲಾರಂಭಿಸಿತ್ತು.



ರೋಹಿಣಿ

ಇದಕ್ಕೆ ಪೂರಕವೆಂಬಂತೆ 'ಪ್ರೀತಿ ಯಾ... ಮೇಲಿದೆ' ಚಿ... ಈಗಾಗಲೇ ನೋ... ಮಿತ್ರರೊಬ್ಬರು ... ಕುರಿತಂತೆ 'ಲಂಕೇ... ಪತ್ರಿಕೆಗೆ ಹೇಳಿದ್ದೇನೆಂ... ಚಿತ್ರ ಪ್ರೇಮ್‌ರ ... ಚಿತ್ರಗಳಂತೆ ಇಲ್ಲ... ಚಿತ್ರದ ಕತೆ ಪ್ರೇಮ್... ಸಿಗದೆ ಹುಚ್ಚು ಕುದ... ಎಲ್ಲೆಲ್ಲೋ ಸಾಗುತ್ತ... ನರೇಶನ್ ಅಂತೂ ... ಹಿಡಿಸುವಷ್ಟು ಕೆಟ್ಟದಾಗಿದೆ. ಒಂದು ... ಮತ್ತೊಂದು ದೃಶ್ಯಕ್ಕೆ ಕತೆಯನ್ನು ಯಾವ... ತೆಗೆದುಕೊಂಡು ಹೋಗಬೇಕೆಂದು ಪ್ರೇ... ಕನ್‌ಫ್ಯೂಸ್ ಆಗಿದ್ದಂತಿದೆ. ಒಟ್ಟಾರೆ ಪ್ರೇ... ಎಂಬ ನಿರೀಕ್ಷೆಯಿಂದ ಇದನ್ನು ನೋ... ಜಿಗುಪ್ಸೆಯಾಗುತ್ತದೆ."

ನಿಜ, ಇದು ಒಬ್ಬರ ಅಭಿಪ್ರಾಯ. ಜನ ... ನೋಡಿದ ನಂತರ ಇದಕ್ಕಿಂತ ಭಿನ್ನ ಅಭಿಪ್ರಾ... ವ್ಯಕ್ತ ಪಡಿಸಬಹುದು. ಆದರೆ ಇವತ್ತಿನವರ... ಚಿತ್ರಕ್ಕೆ ಸಂಬಂಧಪಟ್ಟಂತೆ ನಡೆದಿರುವ ವಿದ್ಯಮಾ... ನೋಡಿದರೆ ಅದ್ಯಾಕೋ ಪ್ರೇಮ್‌ರವರ ಓವರ್ ... ಈ ಬಾರಿ ಕೈ ಕೊಡುವಂತೆ ಕಾಣಿಸುತ್ತಿದೆ.

ಈ ಹಿಂದೆ ಓವರ್ ಕಾನ್ಫಿಡೆನ್ಸ್ ಚಿತ್ರೋ... ಬಹಳಷ್ಟು ಜನರನ್ನು ಹಾಳು ಮಾಡಿದೆ. ರ... 'ಶಾಂತಿಕ್ರಾಂತಿ', 'ಕಲಾವಿದ' ಮತ್ತು 'ಏಕಾಂಗಿ... ಬಗ್ಗೆಯೂ ಹೀಗೆ ಓವರ್ ಕಾನ್ಫಿಡೆಂಟ್ ... ಆದರೆ ಅವೆಲ್ಲವೂ ಬಾಕ್ಸ್ ಆಫೀಸಿನಲ್ಲಿ ... ಬಿದ್ದಿದ್ದವು. ಉಪೇಂದ್ರರ 'H_2O' ಬಗ್ಗೆ ... ಅಪಾರ ನಿರೀಕ್ಷೆ ಇತ್ತು ಆದರೆ ಅವರೇ ಅದ... ಮಾಡಿದ್ದರು. ಇದೇ ಸಾಲಿಗೆ ರಜನೀಕಾಂತ್‌ರ... ಕಮಲ್‌ರ 'ಆಳವಂದಾನ್', 'ವಿರುಮಾಂಡಿ... ಚಿತ್ರಗಳೂ ಸೇರುತ್ತವೆ.

ವರ್ಕ್‌ಔಟ್ ಆಗದ ಆಡಿಯೋ

ಪ್ರೇಮ್ ಚಿತ್ರಗಳಲ್ಲಿ ಸಂಗೀತವೂ ಮುಖ್ಯ ಪಾತ್ರ ವಹಿಸುವುದನ್ನು ನಾವು ಈಗಾಗಲೇ ನೋಡಿದ್ದೇವೆ. ತಮ್ಮ ಹೊಸ ಚಿತ್ರದಲ್ಲಿ ಪ್ರೇಮ್ ಸಂಗೀತಕ್ಕೆ ಎಷ್ಟು ಒತ್ತು ಕೊಟ್ಟಿದ್ದಾರೆಂದರೆ ಅದರಲ್ಲಿ ಬರೋಬ್ಬರಿ ಹತ್ತು ಹಾಡುಗಳಿವೆ. ಆದರೆ ಇಷ್ಟೊಂದು ಹಾಡುಗಳ ನಡುವೆ ಕತೆಗೆ ಜಾಗ ಎಲ್ಲಿರುತ್ತದೆ?

ಇಷ್ಟೊಂದು ಸಮಸ್ಯೆ ಯಾವುದೆಂದರೆ, ಈ ಚಿತ್ರದ ಕ್ಯಾಸೆಟ್‌ಗಳು ಸುಮಾರು ಆರು ತಿಂಗಳ ಹಿಂದೆಯೇ ಬಿಡುಗಡೆಯಾಗಿದ್ದು ಮಾರುಕಟ್ಟೆಯಲ್ಲಿ ಅಟ್ಟರ್ ಫ್ಲಾಪ್ ಆಗಿದೆ. ಹೀಗಿರುವಾಗ ಆ ಫ್ಲಾಪ್ ಹಾಡುಗಳನ್ನು ತೆರೆಯ ಮೇಲೆ ನೋಡಲು ಜನ ಥಿಯೇಟರ್‌ಗೆ ಬರುತ್ತಾರೆಯೇ?

ಸಂಗೀತ ಪ್ರಧಾನವಾದ 'ಎಕ್ಸ್‌ಕ್ಯೂಸ್ ಮಿ' ಚಿತ್ರಕ್ಕೆ ಮೊದಲ ಬಾರಿಗೆ ಆಂಧ್ರದ ಆರ್.ಪಿ. ಪಟ್ನಾಯಕ್ ಸಂಗೀತ ನೀಡಿದ್ದರು. ಅದು ಚೆನ್ನಾಗಿಯೇ ಇತ್ತಾದ್ದರಿಂದ ಆಡಿಯೋ ಸೂಪರ್ ಹಿಟ್ ಆಗಿತ್ತು. ಗುರುಕಿರಣ್ ಸಂಗೀತ ನಿರ್ದೇಶನ ಮಾಡಿದ್ದ 'ಜೋಗಿ'ಯ ಹಾಡುಗಳಂತೂ ಸೂಪರ್ ಆಗಿದ್ದು ಸ್ವಲ್ಪ ದಿನಗಳಲ್ಲೇ ಗಲ್ಲಿ ಗಲ್ಲಿಗಳಿಂದ, ಬಸ್ಸು-ಆಟೋಗಳಿಂದ, ಎಲ್ಲಾ ರೇಡಿಯೋ ಚಾನಲ್‌ಗಳಿಂದ ಕೇಳಿಬರುತ್ತಿದ್ದವು. ಅಷ್ಟೇ ರಾಂಪ್ರಸಾದ್ ಕ್ಯಾಸೆಟ್ ಮಾರಾಟದಿಂದಲೇ ಲಕ್ಷಾಂತರ ರೂಪಾಯಿಗಳ ಲಾಭವನ್ನೂ ಮಾಡಿದ್ದರು.

ಆದರೆ 'ಪ್ರೀತಿ...ಮೆ' ಚಿತ್ರಕ್ಕೆ ಮತ್ತೆ ಪಟ್ನಾಯಕ್‌ರನ್ನು ಕರೆತಂದು ಮ್ಯೂಸಿಕ್ ಮಾಡಿಸಿದ್ದಾರೆ ಪ್ರೇಮ್. ಈ ಬಾರಿ ಅದು ಎಳ್ಳಷ್ಟೂ ವರ್ಕ್‌ಔಟ್ ಆಗಿಲ್ಲ. 'ಬಿಡದೇ ಒಡೇ' ಎಂಬಂತಹ ಉಚ್ಚಾರಣೆ ಇರುವ 'ಈ ಪ್ರೀತಿ ಯಾಕೆ ಭೂಮಿ ಮ್ಯಾಲೆ?' ಹಾಡಿನಿಂದ ಹಿಡಿದು ಪುಣ್ಯಕೋಟಿ ಹಾಡಿನ ಶೈಲಿಯಲ್ಲಿರುವ 'ಗೋರಿಪಾಳ್ಯದ ಗಲ್ಲಿಯೊಳಗ' ತನಕ ಯಾವ ಹಾಡುಗಳೂ ಸಾಮಾನ್ಯ ಕೇಳುಗನ ಮನಮುಟ್ಟಿಲ್ಲ.

ಅಸಲಿಗೆ ಚಿತ್ರವೊಂದಕ್ಕೆ ಹತ್ತು ಹಾಡುಗಳು ಬೇಕಾ? ಎಂಬುದೇ ಪ್ರಶ್ನೆ. ಊಟದ ಜೊತೆ ಉಪ್ಪಿನಕಾಯಿ ಇರಬೇಕೇ [illegible] ಉಪ್ಪಿನಕಾಯಿಯೇ ಊಟ ಹಾದರೆ? ಆದರೆ ಪ್ರೇಮ್ ಇದಾವುದನ್ನೂ ಒಪ್ಪುವ ಮನಸ್ಥಿತಿಯಲ್ಲಿಲ್ಲ. ಬದಲಾಗಿ ಆಡಿಯೋ ಫ್ಲಾಪ್ ಆಗಿಲ್ಲ ಎಂದೇ ವಾದಿಸುತ್ತಿರುವ ಆತ "ಇಲ್ಲ ಸಾ... ನಮ್ ಕ್ಯಾಸೆಟ್ ರಿಲೀಜ್ ಮಾಡಿದ ಮಾರ್‍ನೇದಿನ ಎಲ್ಲಾ ಕ್ಯಾಸೆಟ್ ಅಂಗಡಿ ಮುಂದೆನೂ ಜನ ಬೆಳಗ್ಗೆ 6 ಗಂಟೆಗೇ ಬಂದು ಕ್ಯೂ ನಿಂತಿದ್ರು" ಅಂತ



ಸುಮ್‌ಸುಮ್ಮೇ ಕಾಗೆ ಹಾರಿಸ್ತಾರೆ.

ಇವರ ಕ್ಯಾಸೆಟ್ ಏನು ಸಂಪಿಗೆ ಹಾ... ಹೀಗೆ ಎಕ್ಸ್ಟಾ? ಜನ ಬಂದು ಆರು ಗಂ... ನಿಲ್ಲೋಕೆ. ಹೇಳುವ ಸುಳ್ಳನ್ನಾದರೂ [illegible] ಹೇಳಬಾರ್‍ದ ಪ್ರೇಮೂ?

ಮಹತ್ತರ ಸಾಧನೆಗಳಿಗೆ ಮೊದಲ ಅಗತ್ಯವೇ ಆತ್ಮಸ್ಥೈರ್ಯ - ಸ್ಯಾಮುಯೆಲ್ ಜಾನ್ಸನ್

ಉಢಾಳನಲ್ಲದ ಪ್ರೇಮ್



[illegible]



ಈ ಚಿತ್ರದಲ್ಲಿ ಎಲ್ಲ ರೀತಿಯ ಮಸಾಲೆಗಳನ್ನು ಸೇರಿಸಲು ಪ್ರೇಮ್ ಪ್ರಯತ್ನಿಸಿದ್ದಾರೆ. 'ಜೋಗಿ' ಹಿಟ್ ಆಗುವುದಕ್ಕೆ ಕಾರಣವಾದ 'ಮದರ್ ಸೆಂಟಿಮೆಂಟ್'ಗೆ ಇದರಲ್ಲೂ ಮುಖ್ಯ ಸ್ಥಾನವಿದೆ ಎಂದು ಸ್ವತಃ ಪ್ರೇಮ್ ಹೇಳುತ್ತಾರೆ. ಆದರೆ ಹಳ್ಳಿಯ ತಾಯಿಯ ಬದಲಾಗಿ ಇಲ್ಲಿ ಮೆಜೆಸ್ಟಿಕ್ ರಸ್ತೆಯಲ್ಲಿನ ಕಾಣಸಿಗುವಂತಹ ತಾಯಂದಿರ ಚಿತ್ರಣವನ್ನು ತೋರಿಸಿದ್ದಾರಂತೆ.

ಅಂದಹಾಗೆ ಈ ಚಿತ್ರದಲ್ಲಿ ತಾಯಿಯ ಪಾತ್ರವನ್ನು ಅರ್ಚನಾ ನಿರ್ವಹಿಸಿದ್ದಾರೆ. ಇವರು ಈ ಹಿಂದೆ ಶಂಕರ್‌ನಾಗ್ ನಿರ್ದೇಶಿಸಿದ್ದ ಮತ್ತು ಡಾ. ರಾಜ್ ನಟಿಸಿದ್ದ 'ಒಂದು ಮುತ್ತಿನ ಕತೆ' ಮತ್ತು ದೇವರಾಜ್ ನಟಿಸಿದ್ದ 'ಹುಲಿಯಾ'ದಲ್ಲಿ ನಟಿಸಿದ್ದರು. "ಅವರು ಕರ್‍ರಗೆ ನನ್ನಂಗೇ ಇರೋದ್ರಿಂದ ಮದ್ರಾಸಿನಿಂದ ಅವರನ್ನೇ ಕರೆತಂದೆ' ಅಂತಾರೆ ಪ್ರೇಮ್!

ಹಾಗೆಯೇ ತಾವು ತಮ್ಮನ್ನು ಹೀರೋ ತರಹ ಚಿತ್ರದಲ್ಲಿ ತೋರಿಸಿಲ್ಲವಂತೆ. "ನಾನು ಈ ಚಿತ್ರದಲ್ಲಿ ಹೀರೋನೂ ಅಲ್ಲ, ನಟನೂ ಅಲ್ಲ" ಎನ್ನುವ ಪ್ರೇಮ್ "ಒಬ್ಬ ಚಪ್ಪರ್ ದೃಷ್ಟೀಲಿ ನಾನು ಚಪ್ಪರ್, ಅದೇ ರೀತಿ ಒಬ್ಬ ಇಡ್ಲಿ ಮಾಡೋನ ದೃಷ್ಟೀಲಿ ಇಡ್ಲಿ ಮಾಡೋನು, ಚಪ್ಪಲಿ ಹೊಲಿಯೋನ ದೃಷ್ಟೀಲಿ ಚಪ್ಪಲಿ ಹೊಲಿಯೋನು.... ಆದರೆ ಭೂಮಿ ಮೇಲೆ ಹುಟ್ಟಿದ ಪ್ರತಿಯೊಬ್ಬರೂ ಹೇಗೆ ಪ್ರೀತಿಗಾಗಿ ಹುಡುಕುತ್ತಿರುತ್ತಾರೋ, ಯಾರ್ಯಾರ ಪ್ರೀತಿ ಎಲ್ಲೆಲ್ಲಿರುತ್ತದೋ ಎಂಬುದಕ್ಕೆ ನನ್ನ ಚಿತ್ರದಲ್ಲಿ ಉತ್ತರ ಸಿಕ್ಕಿದ್ದೀತು..." ಎಂದು [illegible] ಡೈಲಾಗ್ [illegible].

ಇನ್ನು [illegible] ಮಲ್ಲಿಕಾ ಶೆರಾವತ್ [illegible] ಪ್ರೇಮ್ ಕರೆತಂದಿದ್ದು ಈಗಾಗಲೇ ಎಲ್ಲರಿಗೂ ಗೊತ್ತಿದೆ. ಆದರೆ 'ಜೋಗಿ'ಯಲ್ಲಿ ಮಜಬೂತಾಗಿ ಕುಣಿದಿದ್ದ ಯಾನಾಗುಪ್ತ ಎಂಬ ಚೆಲುವೆ ಎಲ್ಲಿ, ಅಷ್ಟು ಚೆಂದವಲ್ಲದ ಮಲ್ಲಿಕಾ ಶೆರಾವತ್ ಎಲ್ಲಿ?

ಇನ್ನು 'ಜೋಗಿ'ಯಂತೆಯೇ 'ಪ್ರೀಯಾಭೂಮಿ' ಚಿತ್ರದಲ್ಲೂ ಸಾಕಷ್ಟು ಮಚ್ಚು ಮತ್ತು ಲಾಂಗುಗಳಿವೆ. ಒಂದು ಫೈಟಿಂಗ್ ದೃಶ್ಯವಂತೂ ಘೋರಾತಿಘೋರವಾಗಿದೆಯಂತೆ. ಇದನ್ನು ಕತ್ತರಿಸಿದರೆ 'ಯು' ಸರ್ಟಿಫಿಕೇಟು, ಇಲ್ಲಾಂದ್ರೆ 'ಯು/ಎ' ಸರ್ಟಿಫಿಕೇಟು ಎಂದು ಸೆನ್ಸಾರ್ ಮಂಡಳಿ ಅಂದದ್ದು ಈ ರಕ್ತಪಾತವನ್ನು ನೋಡಿಯೇ. ಆದರೆ ಶಿವರಾಜ್ ಕುಮಾರ್ ಸಕತ್ತಾಗಿ ಲಾಂಗ್ ಬೀಸಿದಂತೆ ಪ್ರೇಮ್ ಕೂಡ ಬೀಸಿದ್ದಾರೆಯೇ? ಅವರಂತೆ ಚಪ್ಪಾಳೆ ಗಿಟ್ಟಿಸುತ್ತಾರೆಯೇ? ಎಲ್ಲವೂ ಡೌಟೋ, ಡೌಟು.

ಏನೇ ಆಗಲಿ ಈ ವಾರ ಪ್ರೇಮ್ ಭವಿಷ್ಯ ನಿರ್ಧಾರವಾಗಲಿದೆ. ಈ ಚಿತ್ರಕ್ಕೆಂದು ಅವರು ಮಾಡಿರುವ 'ಗಿಮಿಕ್‌ಗಳಿಗೆ ಲೆಕ್ಕವೇ ಉಳಿದಿಲ್ಲ. ಆದರೆ ಚಿತ್ರದಲ್ಲಿ ಗಟ್ಸ್ ಇದ್ದರೆ ಮಾತ್ರ ಗೆಲ್ಲುತ್ತದೆ. ಒಂದು ವೇಳೆ ಚಿತ್ರ ಕೈಕೊಟ್ಟದ್ದೇ ಆದಲ್ಲಿ ಪ್ರೇಮ್ ಕತೆ ಮುಂದೇನು ಎಂಬಂತಾಗುತ್ತದೆ.

'ಪ್ರೀತಿ ಯಾಕೆ ಭೂಮಿ ಮೇಲಿದೆ' ಎಂಬ ಹಳೇ ಪ್ರಶ್ನೆಗೆ ನ್ಯೂ ಫಿಲಾಸಫಿಯನ್ನು ನೀಡಲು ಹೊರಟಿರುವ ಪ್ರೇಂಗೆ ಹಾಗಾಗುವುದು ಬೇಡ. ಕಷ್ಟಪಟ್ಟು ಸಿನಿಮಾ ಮಾಡಿದ್ದಾರೆ. ಅವರ ಪ್ರೀತಿ ಭೂಮಿಮೇಲೆ ಉಳಿಯಲಿ, ಬೆಳೆಯಲಿ ಎಂದಷ್ಟೇ [illegible]

ಚಾನೆಲ್ ರೈಟ್ಸ್‌ಗೆ [illegible] ಕೋಟಿ!

[illegible] ರೂಪಾಯಿಗಳಿಗೆ ಖರೀದಿಸಿದ್ದಾರಂತೆ! ಅಷ್ಟೇ ಅಲ್ಲದೆ, [illegible]







ನದೀಂನ ಕಾಮಚೇಷ್ಟೆಗೆ ಬಲಿಯಾದ ನತದೃಷ್ಟೆಯರು

ಇವನು ಮೈಸೂರಿನ ನದೀಂ ಯಾನೆ ಸೈಯದ್. ಸದ್ಯಕ್ಕೆ ಪೊಲೀಸರಿಗೆ ಕೈಕೊಟ್ಟು ನಾಪತ್ತೆಯಾಗಿದ್ದಾನೆ. ಆದರೆ ಇವನು ರೆಡಿ ಮಾಡಿಟ್ಟು ಮಾರಿರುವ ಸೆಕ್ಸ್ ಸಿಡಿಗಳು ಬೀದಿಬೀದಿಗಳಲ್ಲಿ ಮಾರಾಟವಾಗುವ ದಿನಗಳು ಮಾತ್ರ ದೂರವಿಲ್ಲ ಅನ್ನಿಸುತ್ತಿದೆ. ಮೈಸೂರು ಪೊಲೀಸರ ಶತ ಭಯಂಕರ ಸೋಂಭೇರಿತನ ಹಾಗೂ ಬೇಜವಾಬ್ದಾರಿ ತನದಿಂದಾಗಿ ಈಗ ಕೆಲ ಅಮಾಯಕ ಮಹಿಳೆಯರ ಬದುಕು ನಾಶವಾಗುವ ಹಂತಕ್ಕೆ ಬಂದು ನಿಂತಿದೆ. ಕಳೆದ ಶುಕ್ರವಾರದ ಬಕ್ರೀದ್ ಹಬ್ಬದ ಸಂಭ್ರಮದ ಸಮಯದಲ್ಲೇ ಮೈಸೂರಿನ ಮುಸ್ಲಿಂ ಸಮುದಾಯದವರ ನೆಮ್ಮದಿ ಭಂಗ ಮಾಡಿದ ಈ ಸೆಕ್ಸ್ ಸಿಡಿ ಹಗರಣ ಈಗ ದೊಡ್ಡ ರಾದ್ಧಾಂತವಾಗಿ ಬಿಟ್ಟಿದೆ.

ಮೈಸೂರ್ ಸೆಕ್ಸ್ ಸಿಡಿ ಹಗರಣ
ಬಲಿಪಶು ಯಾರು?

ಉದಯಗಿರಿ ಬಡಾವಣೆಯಲ್ಲಿ ಗ್ಯಾಲಕ್ಸಿ ಮ್ಯೂಸಿಕ್ ಸೆಂಟರ್ ನಡೆಸುತ್ತಿದ್ದ ಈ ನದೀಂ ತನ್ನ ಅಂಗಡಿಗೆ ರೆಗ್ಯುಲರ್ ಆಗಿ ಬರುತ್ತಿದ್ದ ಕೆಲ ಮಹಿಳೆಯರ ತಲೆ ಕೆಡಿಸಿ ಆಗೊಂದು ಈಗೊಂದು ಸೆಕ್ಸ್ ಸಿಡಿಗಳನ್ನು ಸರಬರಾಜು ಮಾಡುತ್ತಿದ್ದ. ಅದು ಹಾಗೇ ಮುಂದುವರೆಯುತ್ತಾ ಒಂದಿಬ್ಬರು ನದೀಂನ ಬಲೆಗೂ ಬಿದ್ದಿದ್ದರು. ನೋಡಲು ಸ್ಮಾರ್ಟಾಗಿರುವ ನದೀಂ 'ನನಗಿನ್ನು ಮದುವೆ ಆಗಿಲ್ಲ'ವೆಂಬ ಕತೆ ಕಟ್ಟಿ ಅವರನ್ನು ಬಳಸಿಕೊಂಡಿದ್ದಾನೆ. ಈ ಉದ್ದೇಶಕ್ಕೆಂದೇ ಉದಯಗಿರಿ ಸ್ಮಶಾನದ ಹತ್ತಿರ ಪ್ರತ್ಯೇಕ ರೂಂ ಮಾಡಿಕೊಂಡು ಈ ಮಹಿಳೆಯರನ್ನು ಅಲ್ಲಿಗೆ ಕರೆದೊಯ್ಯುತ್ತಿದ್ದ. ಆಸೀಫಾ ಬಾನು ಎಂಬಾಕೆಯನ್ನು ಆದಾಗಲೇ ಮದುವೆಯಾಗಿದ್ದ ನದೀಂ ಸ್ವಭಾವತಃ ವಿಕೃತ ಮನಸ್ಸಿನವನು. ತನ್ನ ಬಲೆಗೆ ಬಿದ್ದ ಮಹಿಳೆಯರ ಜೊತೆಗಿನ ರಾಸಲೀಲೆಗಳನ್ನು ಅವರಿಗೂ ಗೊತ್ತಾಗದಂತೆ ಕ್ಯಾಮರಾ ಬಳಸಿ ಶೂಟ್ ಮಾಡಿಕೊಂಡು ಆಮೇಲೆ ಅವರನ್ನೇ ಬ್ಲಾಕ್‌ಮೇಲ್ ಮಾಡಿ ಹಣ ಕೀಳುತ್ತಿದ್ದ. ಹೀಗೆ ಯಾರ್ಯಾರು ಎಷ್ಟೆಷ್ಟು ಹಣ ಕೊಟ್ಟು ನದೀಂ ಕಿರುಕುಳಕ್ಕೊಳಗಾದರೋ ಈಗ ಲೆಕ್ಕ ಸಿಗುತ್ತಿಲ್ಲ. ಆದರೆ ಅವನ ಪಾಪದ ಕೊಡ ಭರ್ತಿಯಾಗಿದ್ದು ಮಾತ್ರ ಅವನ ಹೆಂಡತಿಯಿಂದಲೇ!



ವಿಡಿಯೋ ಪಾರ್ಲರ್ ಮುಂದೆ ಜನರ ಪ್ರತಿಭಟನೆ

ಇತ್ತೀಚೆಗೆ ಮನೇಲಿ ಬಟ್ಟೆ ಒಗೆಯುವಾಗ ನದೀಂನ ಜರ್ಕಿನ್ ಜೇಬಿನಲ್ಲಿ ಆಸಿಫಾಗೆ ಒಂದು ಸಿಡಿ ಕಂಡಿದೆ. ಅದೇನೆಂದು ಕುತೂಹಲದಿಂದ ಆಕೆ ನೋಡಿದರೆ ಗಂಡನ ಹಲ್ಕಟ್ ವ್ಯವಹಾರದ ಸೆಕ್ಸ್ ಸಿಡಿ ಅದು.

ಇದರಿಂದ ಕೆರಳಿದ ಆಸೀಫಾ ತನ್ನ ತಾಯಿ ನಸ್ರತ್‌ಗೆ ವಿಷಯ ತಿಳಿಸಿ ನೇರ ಮಹಿಳಾ ಠಾಣೆಗೆ ಹೋಗಿ ಕಂಪ್ಲೇಂಟ್ ಕೊಟ್ಟಿದ್ದಾಳೆ. ಆದರೆ ಆಗಲೇ ಆಸೀಫಾ ಒಂದು ತಪ್ಪು ಮಾಡಿಬಿಟ್ಟಳು. ಗಂಡ ತನಗೆ ವರದಕ್ಷಿಣೆ ಕಿರುಕುಳ ಕೊಡುತ್ತಿದ್ದಾನೆ ಅಂತ ದೂರು ಕೊಟ್ಟಳೇ ವಿನಃ ಈ ಸೆಕ್ಸ್ ಸಿಡಿ ಹಗರಣದ ಬಗ್ಗೆ ಆಗ ಬಾಯಿ ತೆರೆಯಲಿಲ್ಲ. ಅದರ ಬದಲಾಗಿ ನದೀಂ ಜೊತೆಗಿನ ಮದುವೆ ಸಂಬಂಧ ಮುಗಿದುಹೋಗಲಿ ಅಂತ ತೀರ್ಮಾನಿಸಿಕೊಂಡಳೋ ಏನೋ ಅವನೊಂದಿಗೆ ಒಂದು ಸೆಟಲ್‌ಮೆಂಟ್ ಮಾಡಿಕೊಳ್ಳುವ ಮಾತಿಗೆ ಕುಂತಳು.

ಆ ಪ್ರಕಾರವಾಗಿ ನದೀಂ-ಆಸೀಫಾ ಬೇರೆಯಾಗಬೇಕು. ಆಸೀಫಾಳ ಜೀವನ [illegible] ನದೀಂ ತನ್ನ ಗ್ಯಾಲಕ್ಸಿ ಮ್ಯೂಸಿಕ್ ಶಾಪ್ ಅವಳಿಗೆ ಬಿಟ್ಟು ಕೊಡಬೇಕೆಂಬ ಮಾತು ಚರ್ಚೆಗೆ ಬಂತು. ಆದರೆ ಹೆಂಡತಿಯ ಕೈಲಿ ತನ್ನ ಸೆಕ್ಸ್ ಸಿಡಿ ಇದೆ ಎಂದು ಗೊತ್ತಿರದಿದ್ದ ನದೀಂ ಅಂಗಡಿ ಬಿಟ್ಟುಕೊಡಲ್ಲ ಅಂದ. ಆಮೇಲೆ ಪೊಲೀಸರು ಬಂದು ನದೀಂನನ್ನು ಅರೆಸ್ಟ್ ಮಾಡಿಕೊಂಡು ಹೋದರು. ಇದರ ಎರಡೇ ದಿನದಲ್ಲಿ ನದೀಂ ಜಾಮೀನು ಪಡೆದು ಹೊರಬಂದವನೇ ಕ್ಯಾಸೆಟ್ ಅಂಗಡಿ ಖಾಲಿ ಮಾಡಿಕೊಂಡು ಪರಾರಿಯಾಗಿಬಿಟ್ಟ.

ಅದುವರೆಗೂ ಸೀಕ್ರೆಟಾಗಿದ್ದ ಈ ಸೆಕ್ಸ್ ಸಿಡಿ ವಿಚಾರ ಹೊರಬಂದಿದ್ದೇ ಆಗ. ತನ್ನ ಮೋಸಗಾರ ಗಂಡ ನಾಪತ್ತೆಯಾದ ಮೇಲೆ ಈ ಆಸೀಫಾ ಜ್ಞಾನೋದಯವಾದವಳಂತೆ ಮತ್ತೆ ಪೊಲೀಸರ ಹತ್ತಿರ ಹೋಗಿ ಸಿಡಿ ನೀಡಿ ನದೀಂನ ಪುರಾಣ ಹೇಳಿ ಬ್ಲಾಕ್‌ಮೇಲ್ ಮಾಡುತ್ತಿದ್ದ ವಿಚಾರವನ್ನು ಹೇಳಿಬಿಟ್ಟಳು. ಆದರೆ ಪೊಲೀಸರಿಗೆ ನದೀಂ ಎಲ್ಲಿ ಸಿಗುತ್ತಾನೆ? ಅವನಿಗಾಗಲೇ ಹೆಂಡತಿಯ ಬಗ್ಗೆ ಅನುಮಾನ ಬಂದಿತ್ತೇನೋ. ಯಾರ ಕೈಗೂ ಸಿಗದಂತೆ ಈಗ ಪರಾರಿಯಾಗಿದ್ದಾನೆ.

ಹೀಗೆ ಪೊಲೀಸರು ಒಂಚೂರು ಎಚ್ಚರ ತಪ್ಪಿದ ಕಾರಣ ನದೀಂ ತಪ್ಪಿಸಿಕೊಂಡ. ಆದರೆ ಅಷ್ಟರಲ್ಲಿ ಮೈಸೂರಿನ ತುಂಬಾ ಇದೇ ಸುದ್ದಿ. ಇದರಿಂದ ಆತಂಕಕ್ಕೊಳಗಾದ ಜನ ಲೋಕಲ್ ಲೀಡರ್ ಅಯೂಬ್‌ಖಾನ್ ಜೊತೆ ಸೇರಿ ಶನಿವಾರ ರಾತ್ರಿ ಗ್ಯಾಲಕ್ಸಿ ಮ್ಯೂಸಿಕ್ ಸೆಂಟರಿಗೇ ನುಗ್ಗಿ ಇಡೀ ಅಂಗಡಿ ಚಿಂದಿಯೆಬ್ಬಿಸಿದ್ದಾರೆ.

ಅದೃಷ್ಟವಶಾತ್ ಅಲ್ಲಿ ನದೀಂ ಶೂಟ್ ಮಾಡಿಕೊಂಡಿದ್ದ ಸಿಡಿಗಳೇನೂ ಸಿಕ್ಕಿಲ್ಲ. ಇದರಿಂದ ಅದರಲ್ಲಿ ಅಭಿನಯಿಸಿದ್ದ ಮಹಿಳಾಮಣಿಗಳಿಗಂತೂ ಹೋದ ಜೀವ ಬಂತೆನ್ನಿಸಿರಬಹುದು. ನದೀಂ ಈ ಸಿಡಿಗಳನ್ನು ದುಬೈಗೆ ಕಳಿಸಿ ಮಾರುತ್ತಿದ್ದ ಎಂಬ ಅನುಮಾನಗಳಿವೆ. ಅವನ ಚರಿತ್ರೆ ಪೊಲೀಸರಿಗೂ ಸ್ವಲ್ಪ ಗೊತ್ತಿತ್ತು. ಆಸೀಫಾ ಮದುವೆಯಾದ ಎರಡೇ ತಿಂಗಳಲ್ಲಿ ನದೀಂ ಕಿರುಕುಳ ಕೊಡ್ತಿದ್ದಾನೆಂದು ಆಗಿನ ಮಹಿಳಾ ಎಸ್‌ಐ ಚಂದ್ರಕಲಾರಿಗೂ ದೂರು ನೀಡಿದ್ದಳು.

ಬಹುಶಃ ನದೀಂನ ವಿಕೃತ ವರ್ತನೆ ಬಗ್ಗೆ ಆಸೀಫಾಗೆ ಆಗಲೇ ಕಹಿ ಅನುಭವವಾಗಿರಲಿಕ್ಕೂ ಸಾಕು.

ಮೈಸೂರು ಪೊಲೀಸರು ಈಗಲಾದರೂ ಎದ್ದು ನಿಂತು ತಮ್ಮ ಡ್ಯೂಟಿ ಮಾಡಲಿ.

ಪೊಲೀಸರಿಗೆ ಒಂದು ಕೊನೆ ಬುದ್ಧಿವಾದ ಹೇಳಲೇಬೇಕಿದೆ.

ಸ್ವಾಮಿ

ಈ ಸೆಕ್ಸ್ ಸಿಡಿಯನ್ನು ಮೀಡಿಯಾದವರು, [illegible] ಕೇಳಿದರೂಂತ ಸಿಕ್ಕಸಿಕ್ಕವರಿಗೆಲ್ಲಾ ಹಂಚಬೇಡಿ. [illegible] ನಿಮಗೂ ನದೀಂಗೂ ಯಾವ ವ್ಯತ್ಯಾಸವೂ [illegible].

ನದೀಂ ವಂಚಕ, ವಿಕೃತ [illegible]. ಅವನಿಗೆ [illegible] ಆದರೆ ಇದರಲ್ಲಿ ಕೆಲ ಮಹಿಳೆಯರೂ ಇದ್ದಾರೆ. [illegible] ದುರ್ಬಲ ಕ್ಷಣದಲ್ಲಿ ಅವನ ಬಲೆಗೆ ಬಿದ್ದು [illegible] ತಪ್ಪು ಮಾಡಿರಬಹುದು. ಆದರೆ [illegible]

ತುರುವೇಕೆರೆ:
ಜಗ್ಗೇಶ್‌ಗೆ ಇಲ್ಲಿ ಬರೀ ಕಣ್ಣೀರು

ಅವಧಿಗೆ ಮುನ್ನ ದಿಢೀರ್ ಬಂದು ನಿಂತಿರುವ ಚುನಾವಣೆಯಿಂದ ಕಂಗಾಲಾಗಿರುವ ರಾಜ್ಯದ ಎಲ್ಲ ರಾಜಕಾರಣಿಗಳಂತೆ ತುರುವೇಕೆರೆ ರಾಜಕಾರಣಿಗಳು ಆತಂಕಕ್ಕೀಡಾಗಿದ್ದಾರೆ.

ಹಾಗೆ ನೋಡಿದರೆ ಮಾಜಿ ಶಾಸಕ ಜೆಡಿ(ಎಸ್)ನ ಎಂ.ಟಿ. ಕೃಷ್ಣಪ್ಪ, ಕೋ-ಚಾ ಸರ್ಕಾರದಲ್ಲಿ ಕೈಮಗ್ಗ ಮಂಡಳಿಯ ಅಧ್ಯಕ್ಷರಾಗಿದ್ದ ಬಿಜೆಪಿ ಮಾಜಿ ಶಾಸಕ ಎಂ.ಡಿ. ಲಕ್ಷ್ಮಿನಾರಾಯಣ್ (ಎಂ.ಡಿ.ಎಲ್) ಮತ್ತು ಕಳೆದ ಚುನಾವಣೆಯಲ್ಲಿ ಕಾಂಗ್ರೆ ಅಭ್ಯರ್ಥಿಯಾಗಿ ಕೆಲವೇ ಮತಗಳಿಂದ ಸೋತಿದ್ದ ಚಿತ್ರನಟ ಜಗ್ಗೇಶ್ ಮೂವರು ಪೈಪೋಟಿಯಿಂದ ಕ್ಷೇತ್ರದ ತುಂಬ ತಿರುಗುತ್ತಿದ್ದಾರಾದರು ಮೂವರು ಸಮಾನ ದುಃಖಿಗಳು.

ಸಾಮಾನ್ಯವಾಗಿ ಚುನಾವಣೆ ಸಮಯದಲ್ಲಿ ಎದುರಾಗುವ ಟಿಕೆಟ್ ಆಕಾಂಕ್ಷಿಗಳ ಬಂಡಾಯ ಮೂರು ಪಕ್ಷಗಳಲ್ಲಿ ಕಂಡುಬರುತ್ತಿದೆ. ಅಂತಿಮವಾಗಿ ಟಿಕೆಟ್ ಸಿಗುವುದು ಮತ್ತು ಆಯಾ ಪಕ್ಷಗಳಿಂದ ಚುನಾವಣೆ ಎದುರಿಸುವ ಪ್ರಸ್ತುತ ಯೋಗ್ಯ ವಾತಾವರಣವಿರುವುದು ಈ ಮೂವರಿಗೆ ಮಾತ್ರ. ಮಿಕ್ಕೆಲ್ಲ ಚಟುವಟಿಕೆಗಳು ಮಾಮೂಲಿ ಪ್ರಹಸನಗಳಂತೆ ಕಂಡರೂ ಫಲಿತಾಂಶದ ಮೇಲೆ ಪರಿಣಾಮ ಬೀರಲಿವೆ.

ಕ್ಷೇತ್ರದಲ್ಲಿ ಆಗೊಮ್ಮೆ ಈಗೊಮ್ಮೆ ಕಾಣಿಸಿಕೊಳ್ಳುತ್ತಿದ್ದ ಮಾಜಿ ಹಾಗು ಪ್ರಥಮ ಜೆಡಿ(ಎಸ್) ಶಾಸಕ ಎಚ್.ಬಿ. ನಂಜೇಗೌಡ (ಮೂರ್ತಿ) ಜೆಡಿ(ಎಸ್)ನಿಂದ ಟಿಕೆಟ್ ಆಕಾಂಕ್ಷಿಯಾಗಿದ್ದರೂ ಎಂ.ಟಿ. ಕೃಷ್ಣಪ್ಪನಿಗೆ ಪ್ರಬಲ ಪೈಪೋಟಿ ನೀಡಿ ಟಿಕೆಟ್ ಗಳಿಸುವುದು ಸಾಧ್ಯವಾಗದ ಮಾತು. ಈಗಲೂ ತನ್ನ ಸರಳ, ನೇರ ಮಾತು ಮತ್ತು ಸಾರ್ವಜನಿಕ ಪ್ರೀತಿ ಉಳಿಸಿಕೊಂಡಿದ್ದರೂ ಒಮ್ಮೆ ಎಂಎಲ್‌ಎ ಅಧ್ಯಕ್ಷರಾಗಿ ಸಂತೃಪ್ತರಾದ ನಂತರ ಮೊದಲಿನ ಸಂಘಟನಾ ಚತುರತೆ, ಉತ್ಸಾಹ ಕಳೆದುಕೊಂಡಿದ್ದಾರೆ. ಹಾಗಾಗಿ ಜೆಡಿ(ಎಸ್)ನಲ್ಲಿ ಕೃಷ್ಣಪ್ಪ ಒಂಟಿ ಸಲಗ.

ಆದರೆ ಈ ಕ್ಷೇತ್ರದಲ್ಲಿ ಒಮ್ಮೆ ಶಾಸಕರಾದವರು ಎರಡನೆ ಬಾರಿ ನಿರಂತರ ಶಾಸಕರಾದ ಉದಾಹರಣೆ ಇಲ್ಲ. ಹೆಚ್ಚೆನದಾಗಿ, ಒಮ್ಮೆ ಸೋತಿರುವ ತಮ್ಮದೇ ಒಕ್ಕಲಿಗ ಜಾತಿಯ ಜಗ್ಗೇಶ್ ಕಡೆ ಒಕ್ಕಲಿಗರು ನಿಧಾನವಾಗಿ ವಾಲುತ್ತಿರುವುದು ಜೆಡಿ(ಎಸ್)ಗೆ ತೊಡಕಾಗಲಿದೆ. ಜೆಡಿ(ಎಸ್), ಬಿಜೆಪಿಯೊಂದಿಗೆ ಕೈ ಜೋಡಿಸಿ ಕೋ-ಚಾ ಸರ್ಕಾರ ಅಧಿಕಾರಕ್ಕೆ ಬರುವಂತೆ ಮಾಡಿದಾಗಿನಿಂದ ಜೆಡಿ(ಎಸ್)ನೊಂದಿಗಿದ್ದ ಅನೇಕ ಪ್ರಜ್ಞಾವಂತ ಮುಸ್ಲಿಮರು ಅಸಮಾಧಾನದಿಂದ ಗೊಣಗಾಡುತ್ತಿದ್ದಾರೆ. ಚುನಾವಣಾ ವೇಳೆಗೆ ಇದು ಸ್ಫೋಟಗೊಳ್ಳುವ ಎಲ್ಲ ಲಕ್ಷಣಗಳು ಕಾಣುತ್ತಿವೆ. ಮುಖ್ಯವಾಗಿ ಸಿದ್ಧರಾಮಯ್ಯನವರ ಪಕ್ಕ ಶಿಷ್ಯರುಗಳಾದ ನಾಗೇಶ್, ರೇವಣ್ಣ, ನಿಂಗಣ್ಣ ಎಲ್ಲಾ ಕುರುಬ ಲೀಡರ್‌ಗಳು ಕಾಂಗ್ರೆ ಆಫೀಸಿನಲ್ಲಿ ದರ್ಬಾರು ನಡೆಸತೊಡಗಿದ್ದಾರೆ.

ಇನ್ನು ಬಿಜೆಪಿಯ ಕಮಲದ ಗುರುತಿಗೆ ಈ ಕ್ಷೇತ್ರದಲ್ಲಿ ಮತಗಳೇನಾದರೂ ಬರುವುದಾದರೆ ಅದು ಬಿಜೆಪಿಯ ಮಾಜಿ ಶಾಸಕ ಎಂ.ಡಿ. ಲಕ್ಷ್ಮೀ ನಾರಾಯಣ್‌ರ ವೈಯಕ್ತಿಕ ವರ್ಚಸ್ಸಿನಿಂದ ಮಾತ್ರ. ಆದಕ್ಕಾಗಿಯೇ ಇಲ್ಲಿ ಯಾವುದೇ ಬಿಜೆಪಿ ಕೃಪಾಪೋಷಿತ ಸರ್ಕಸ್ಸಿಗೆ ಅವಕಾಶವಿಲ್ಲ.


ಎಂ.ಡಿ.ಎಲ್. ಮೂಲತಃ ಜನತಾಪಕ್ಷದಲ್ಲಿದ್ದವರು. ಆದರೆ ಕಡಿಮೆ ಸಂಖ್ಯಾಬಲದ ದೇವಾಂಗ ಜನಾಂಗಕ್ಕೆ ಸೇರಿದ ಇವರಿಗೆ ಆ ಪಕ್ಷದಲ್ಲಿ ಟಿಕೆಟ್ ಸಿಗುವುದು ಹಗಲುಗನಸಿನ ಮಾತಾಗಿತ್ತು. ಅದೇ ವೇಳೆಗೆ ನಾಮಕಾವಸ್ಥೆ ನಾಯಕರೂ ಇಲ್ಲದೆ ಬಿಜೆಪಿ ಪರಿತಪಿಸುತ್ತಿತ್ತು. ಈ ಅವಕಾಶವನ್ನು ಬಳಸಿಕೊಂಡ ಎಂಡಿಎಲ್ ಬಿಜೆಪಿ ಸೇರಿ ತಮ್ಮ ನಯವಾದ ಮಾತುಗಾರಿಕೆ ಮತ್ತು ಜಾಣ ಮೌನಗಳಿಂದ ಜನರನ್ನು ಆಕರ್ಷಿಸಿ, ತಮ್ಮ ಜನಾಂಗದ ಲೀಡರುಗಳಿಲ್ಲದೆ ಒದ್ದಾಡುತ್ತಿದ್ದ ಬಹುಸಂಖ್ಯಾತ ಲಿಂಗಾಯತರನ್ನು ಒಲಿಸಿಕೊಂಡು 1999 ರ ಚುನಾವಣೆಯಲ್ಲಿ ಶಾಸಕರಾದರು.

ಈವರೆಗೆ ಬೆಂಗಳೂರಿನಲ್ಲಿ ತಮ್ಮ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ಬ್ಯುಸಿಯಾಗಿದ್ದ ಎಂಡಿಎಲ್ ಈಗ ಕ್ಷೇತ್ರದ ತುಂಬ ಓಡಾಡತೊಡಗಿದ್ದಾರೆ. ಆದರೆ ಅಜಾತ ಶತ್ರುವಿನಂತೆ ಗೋಚರಿಸುತ್ತಿದ್ದ ಇವರಿಗೆ ಈಗ ತನ್ನದೇ ಪಕ್ಷದಲ್ಲಿ ಅಪಸ್ವರ ಕಾಣತೊಡಗಿದೆ.

ಮೊನ್ನೆ ಡಿಸೆಂಬರ್ ಮೂರರಂದು ನಡೆದ ಧರ್ಮಯಾತ್ರೆ ಸಭೆಯಲ್ಲಿ ಯಡಿಯೂರಪ್ಪ, ಕರಂದ್ಲಾಜೆ, ರಾಮಚಂದ್ರಗೌಡ ಮುಂತಾದ ರಾಜ್ಯ ನಾಯಕರುಗಳ ಸಮ್ಮುಖದಲ್ಲಿ ಎಂಡಿಎಲ್ ಮುಜುಗರ ಪಡುವಂಥ ಪ್ರಸಂಗ ನಡೆಯಿತು.

ಎಂ.ಡಿ.ಎಲ್. ಹುಟ್ಟೂರಾದ ಮುನಿಯೂರು ಗ್ರಾಮ ಪಂಚಾಯ್ತಿ ಅಧ್ಯಕ್ಷ, ರಿಯಲ್ ಎಸ್ಟೇಟ್ ಉದ್ಯಮಿ, ಕಟ್ಟಾ ಸುಬ್ರಮಣ್ಯ ನಾಯ್ಡುವಿನ 'ಕಟ್ಟಾ ಅಭಿಮಾನಿ'ಯೆಂದು ಧರ್ಮಯಾತ್ರೆ ಸಂದರ್ಭ ಊರ ತುಂಬ ಬೋರ್ಡು ಬರೆಸಿ ಹಾಕಿಕೊಂಡಿದ್ದ ರಾಜಶೇಖರ ಎಂಬಾತ ಆ ದಿನ ಸುಮಾರು ತನ್ನ ಐನೂರು ಜನ ಹಿಂಬಾಲಕರೊಂದಿಗೆ ಬಂದು ತಾನು ಕೂಡ ಟಿಕೆಟ್ ಆಕಾಂಕ್ಷಿಯೆಂಬ ಸಂದೇಶವನ್ನು ಯಡಿಯೂರಪ್ಪನವರಿಗೆ ಮುಟ್ಟಿಸಿದ. ಎಂಡಿಎಲ್ ಹೊರತುಪಡಿಸಿ, ಯಡಿಯೂರಪ್ಪ, ಕಟ್ಟಾ ನಾಯ್ಡು ಮತ್ತು ತನ್ನ ಪರ ಮಾತ್ರ ಘೋಷಣೆಗಳನ್ನು ಕೂಗಿಸಿಕೊಂಡಿದ್ದು ಅಲ್ಲದೆ ತಾನು ಬರೆಸಿದ್ದ ಬ್ಯಾನರ್‌ಗಳಲ್ಲಿ ತಪ್ಪಿಯೂ 'ಎಂಡಿಎಲ್ ಹೆಸರಿರಲಿಲ್ಲ. ಈ ರಾಜಕೀಯ ದ್ವೇಷಕ್ಕೆ ಮೂಲ ಎಂಡಿಎಲ್ ಮತ್ತು ರಾಜಶೇಖರ್ (ಕಟ್ಟಾ ಅಭಿಮಾ... ನಡುವಿನ ರಿಯಲ್ ಎಸ್ಟೇಟ್ ವ್ಯವಹಾರ ಎಂದ... ಜನ ಮಾತನಾಡಿಕೊಳ್ಳುತ್ತಿದ್ದರು. ಧರ್ಮಯಾತ್ರೆಗೆ ಭಾ... ಜನಸಂಖ್ಯೆ ನಿರೀಕ್ಷಿಸಿದ್ದ ಯಡಿಯೂರಪ್ಪನವರು ನಾಲ್ಕೈದು ಗಂಟೆ ಕಾದು ಸಂತೆಗೆ ಬಂದಿದ್ದ ನಾಲ್ಕು ಸಾವಿ... ಜನಗಳಿಗೆ ಭಾಷಣ ಹೇಳಿ ಪಲಾಯನಗೈದರು. ಭಾ... ಜನಸ್ತೋಮಕ್ಕೆ ಮಾಡಿದ್ದ ಕೊಳಗಗಟ್ಟಲೆ ಟೊಮ್ಯಾಟೊ ಬಾತ್ ತುರುವೇಕೆರೆ ಕೆರೆಯಲ್ಲಿರುವ ಮೀನುಗಳ ಪಾಲಾಯ್ತು.


ಈ ಬೆಳವಣಿಗೆಗಳು ಎಂಡಿಎಲ್‌ಗೆ ಮಾರಕ ಎಂದು ತಕ್ಷಣಕ್ಕೆ ಹೇಳಲಿಕ್ಕಾಗದಿದ್ದರೂ ತೊಡಕಾಗಲು ಕಾದು ಕುಳಿತಿರುವುದು ಸತ್ಯ. ಅಷ್ಟಕ್ಕೂ ತಮ್ಮ ವ್ಯವಹಾರಿಕ ರಾಜಕಾರಣಗಳಿಗಾಗಿ ಮಾತ್ರ ಇವರಿಗೆ ರಾಜಕೀಯ ಅನಿವಾರ್ಯವಾಗಿದೆ.



ತೆರೆಯ ಮೇಲೆ ಹಾಸ್ಯನಟನಾಗಿ, ನಾಯಕನಟನಾಗಿ ತನ್ನದೇ ರೇಂಜಿನಲ್ಲಿ ನಿರಂತರವಾಗಿ ಯಶಸ್ವಿಯಾಗುತ್ತ ಬಂದಿರುವ ಚಿತ್ರನಟ ಜಗ್ಗೇಶ್ ನಿಜಕ್ಕೂ ಇಲ್ಲಿ ದುರಂತ ನಾಯಕರಂತೆ ಕಾಣುತ್ತಿದ್ದಾರೆ.

'ನಾನೊಬ್ಬ ಪ್ರಾಮಾಣಿಕ ರಾಜಕಾರಣಿಯಾಗಬೇಕೆಂದಿದ್ದೇನೆ. ರಾಜಕೀಯದಿಂದ ಹಣ ಮಾಡಬೇಕಿಲ್ಲ, ಹಣ, ಕೀರ್ತಿ, ಚಿತ್ರರಂಗ ಕೊಟ್ಟಿದೆ. ನಾನು ಹುಟ್ಟಿದ ಊರಿಗೆ ಸೇವೆ ಸಲ್ಲಿಸ... ಬೇಕೆಂಬುದು ನನ್ನಿಚ್ಛೆ. ಇಲ್ಲದಿದ್ದರೆ ಬೆಂಗಳೂರಿನ ಯಾವುದಾದರೂ ಕ್ಷೇತ್ರದಲ್ಲಿ ಸ್ಪರ್ಧಿಸುತ್ತಿದ್ದೆ ಅಥವಾ ಎಂಎಲ್‌ಸಿಯಾಗುತ್ತಿದ್ದೆ. ಆದ್ದರಿಂದ ಮತನೀಡಿ, ಎನ್ನುವ... ತನ್ನ ಮಾತುಗಳಿಗೆ ಜನ ಮತ ನೀಡುತ್ತಾರೆಂದು ಭ್ರಮಿಸಿ... ತನ್ನ ಅಹಂಕಾರ ಮತ್ತು ಹಣದೊಂದಿಗೆ ತುರುವೇಕೆರೆಗೆ ಬಂದ ಜಗ್ಗೇಶ್‌ಗೆ ಹಿಂದಿನ ಚುನಾವಣೆ ಯಾರೂ ಕಲಿಸಲಾಗದಿದ್ದ ಪಾಠ ಕಲಿಸಿಬಿಟ್ಟಿದೆ.

ಚಿತ್ರರಂಗದಲ್ಲಿ ಗೆದ್ದು ರಾಜಕೀಯದಲ್ಲಿ ಒಮ್ಮೆ ಸೋತು ಆಘಾತಗೊಂಡಿರುವ ಜಗ್ಗೇಶ್ ಈ ಬಾರಿ...



ನಿಮ್ಮ ಶಾಸಕರು ಕಡಿದಿದ್ದೇನು?

ಪ್ರಜ್ಞಾವಂತಿಕೆ ಪ್ರದರ್ಶಿಸಬೇಕಿರುವ ಸೇಡಂ ಜನತೆ

ಕರ್ನಾಟಕದ ಬಹುತೇಕ ಕಡೆ ಚೆಡ್ಡಿಗಳ ಪರವಾಗಿ ಅನುಕಂಪದ ಅಲೆ ನಿರ್ಮಾಣವಾಗಿದೆ ಅನಿಸಿದರೂ ಅದು ಹೈದ್ರಾಬಾದ್ ಕರ್ನಾಟಕದಲ್ಲಿ ವರ್ಕಔಟ್ ಆಗುವುದು ಕಷ್ಟವೆಂದೇ ಹೇಳಬೇಕು. ಮಾಜಿ ಲೋಕಸಭಾ ಸದಸ್ಯ ಶರಣ ಬಸವರಾಜ ಪಾಟೀಲ ಸೇಡಂ ಚೆಡ್ಡಿ ತೊಟ್ಟುಕೊಂಡು ಬಸವಣ್ಣನವರ ತತ್ವಗಳ ಸಮಾಧಿ ಕಟ್ಟಲು ಕಂಕಣತೊಟ್ಟು ನಿಂತುಕೊಂಡಿದ್ದಾರೆ. ಏಕೆಂದರೆ ಗುಲಬರ್ಗಾ ಜಿಲ್ಲೆಯ ಸೇಡಂ ಬಸವರಾಜ ಪಾಟೀಲ ಸೇಡಂನ ತವರೂರು. ವರ್ಷದಲ್ಲಿ ಆಗಾಗ ಹತ್ತೆಂಟು ಬೃಹತ್ ಕಾರ್ಯಕ್ರಮಗಳನ್ನು ಏರ್ಪಡಿಸಿಕೊಳ್ಳುತ್ತ ತನ್ನ ಖದರನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿರುವ ಆಸಾಮಿ. ಆದರೂ ಇಲ್ಲಿ ಬಿ.ಜೆ.ಪಿ. ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬ ಸ್ಥಿತಿಯಲ್ಲಿದೆ. 1982ರಲ್ಲಿ ಮಾತ್ರ ಎಲ್ಲರ ಒಕ್ಕೊರಲ ಅಭಿಪ್ರಾಯಕ್ಕೆ ಕಟ್ಟು ಬಿದ್ದು ಡಾ. ನಾಗರೆಡ್ಡಿ ಪಾಟೀಲ ಗೆದ್ದುಬಂದಿದ್ದ.



ಶಾಸಕ ಶರಣ ಪ್ರಕಾಶ ಪಾಟೀಲ


ಆದರೆ ಇಂದು ಇಲ್ಲಿ ಬಿಜೆಪಿ ಸ್ಥಿತಿ ಹೇಗಿದೆ ಎಂಬುದನ್ನು ಬಣ್ಣಿಸಲು ಇತ್ತೀಚೆಗೆ ನಡೆದ ಪುರಸಭೆಯ ಚುನಾವಣೆಯ ಸಂದರ್ಭದಲ್ಲಿ ಬಸವರಾಜ ಪಾಟೀಲ ಸೇಡಂನ ಸಹೋದರ ಶಿವರಾಜ ಪಾಟೀಲ ತನ್ನ ಎದುರಾಳಿಯಾಗಿ ನಿಂತ ಪಡ್ಡೆ ಹುಡುಗ ಗುರುರಾಜ ಪಟವಾರಿಯ ವಿರುದ್ಧ ಕೇವಲ ನಾಲ್ಕು ಮತಗಳ ಅಂತರದಿಂದ ಗೆದ್ದ ಎಂಬುದೇ ಸಾಕೆನಿಸುತ್ತದೆ.

ಆದರೂ ಒಂದು ಕೈ ನೋಡಲೇಬೇಕೆಂದು ರಾಜಕುಮಾರ ಪಾಟೀಲ ತೇಲ್ಕೂರ ಆಗಲೇ ಸ್ಕೆಚ್ ಹಾಕಿ ರೆಡಿಯಾಗಿ ನಿಂತಿದ್ದಾನೆ. ಚುನಾವಣೆಯ ದಿನಾಂಕ ಘೋಷಣೆ ಆಗುವ ಮೊದಲೇ ಅಧಿಕೃತವಾಗಿ ಪಕ್ಷದ ಕಾರ್ಯಾಲಯ ಉದ್ಘಾಟನೆ ಮಾಡಲಿದ್ದಾನೆ. ಜೊತೆಗೆ ಒಂದು ಕೋಟಿ ರೂ. ಖರ್ಚು ಮಾಡಿ ಚುನಾವಣೆಯಲ್ಲಿ ಗೆದ್ದು ಬರುವ ಹೊಂಚು ರೂಪಿಸುತ್ತಿದ್ದಾನೆ. ಇದನ್ನೆಲ್ಲ ಕಂಡು ಒಳಗೊಳಗೆ ಹಲ್ಲು ಮಸೆಯುತ್ತಿರುವ ಪರ್ವತರೆಡ್ಡಿ ಪಾಟೀಲ ಕೂಡ ತಾನೂ ಚುನಾವಣೆಗೆ ನಿಂತು ತನ್ನದೂ ಒಂದು ಖದರನ್ನು ತೋರಬಾರದ್ಯಾಕೆ? ಎಂದು ಟಿಕೆಟ್‌ಗಾಗಿ ಗಾಳಹಾಕಿಕೊಂಡು ಕುಳಿತಿದ್ದಾನೆ. ಹೇಗೂ ಶರಣ ಪ್ರಕಾಶ ಪಾಟೀಲನ ಬಲಗೈ ಬಂಟ ಎಂದೇ ಹೆಸರಾಗಿದ್ದ ಹೊಸಳ್ಳಿಯ ಸಿದ್ದನಗೌಡ ಪಾಟೀಲ ಲಿಂಗಾಯತರ ಪಂಚಮ ಬಳಕೆಯನಾದ್ದರಿಂದ ದೀಕ್ಷ ಬಳಕೆಯ ಶರಣಪ್ರಕಾಶ ಪಾಟೀಲಗೆ ಈ ಬಾರಿ ಟಾಂಗು ಕೊಡಬೇಕೆಂದು ನಿರ್ಧರಿಸಿದ್ದರಿಂದ ಬಿಜೆಪಿಯ ಪರವಾಗಿ ಕ್ಯಾಂಡಿಡೇಟುಗಳಾಗಲು ಬಹಳಷ್ಟು ಜನ ಈಗಾಗಲೇ ತಯಾರಿ ನಡೆಸಿದ್ದಾರೆ.

ಶರಣಪ್ರಕಾಶ ಪಾಟೀಲ ಕಳೆದ ಬಾರಿ ಸೇಡಂನಲ್ಲಿ ಗೆದ್ದು ಬಂದಿರುವ ಕಾಂಗ್ರೆ ಅಭ್ಯರ್ಥಿ. ಈತ ಖರ್ಗೆಯ ನೆರಳಿನಂತೆ ಓಡಾಡಿಕೊಂಡು ಅವರ ಮಾನಸ ಪುತ್ರ ಎಂದೇ ಕರೆಸಿಕೊಂಡಿದ್ದಾನೆ. ವೆಲ್ ಎಜುಕೇಟೆಡ್ ಆಗಿರುವ ಶರಣಪ್ರಕಾಶ ತನ್ನ ಇದ್ದಬದ್ದ ಅವಧಿಯಲ್ಲಿ ಯಾರಿಗೂ ದೋಖಾ ಮಾಡಿಲ್ಲವಾದರೂ ಕೆಲಸವನ್ನಂತೂ ಮಾಡಿಲ್ಲ, ಆದರೂ ಕಾಂಗ್ರೆಸ ಬಗ್ಗೆ ಈ ಮೊದಲಿಗೆ ಸೇಡಂನಲ್ಲಿ ಇದ್ದ ಇಮೇಜನ್ನು ಡ್ಯಾಮೇಜ್ ಮಾಡಿದ ಕೀರ್ತಿಗೆ ಶರಣಪ್ರಕಾಶ ಪಾಟೀಲ ಪಕ್ಕಾಗಿದ್ದಾನೆ. ಪಕ್ಷದ ನಾಜೇಮುದ್ದೀನ್, ಅಬ್ದುಲ್ ಗುತ್ತೇದಾರ ಎಂಬ ಕಂಟ್ರ್ಯಾಕ್ಟರ್ ಮೂಲಕ ಹಲವಾರು ಬಾರಿ ಮುಜುಗರಕ್ಕೆ ಇದಿರಾಗುವ ಸಂದರ್ಭಗಳೂ ಬಂದಿವೆ. ಆದರೂ ಅದೇನು ಕಾರಣವೋ ಶರಣಪ್ರಕಾಶನ ಕೃಪಾಶೀರ್ವಾದ ಇವರಿಬ್ಬರ ಮೇಲೆ ಇರುವುದು ಮಾತ್ರ ನಿಶ್ಚಿತವಾಗಿದೆ.

ಪಾಟೀಲ ಕುಟುಂಬ ವರ್ಗದ ಸದಸ್ಯರ್ಯಾರೂ ಇವರ ರಾಜಕೀಯ ಜೀವನದಲ್ಲಿ ತಲೆಹಾಕುವುದಿಲ್ಲ ಎಂಬುದು ಒಂದು ಸಮಾಧಾನದ ಸಂಗತಿಯಾಗಿದೆ. ಹಿಂದೆ ಜಿಲ್ಲಾ ಪಂಚಾಯತಿ ಉಪಾಧ್ಯಕ್ಷನಾಗಿದ್ದಾಗ ಹಾರಾಡುತ್ತಿದ್ದ ಪ್ರಕಾಶ ಪುಂಗಿ ಅದ್ಯಾಕೋ ಇದ್ದಕ್ಕಿದ್ದಂತೆ ಬಂದ್ ಆಗಿದೆ.

ಒಂದೆರಡು ಬಾರಿ ಮಾತ್ರ ಎಚ್.ಡಿ. ಕುಮಾರಸ್ವಾಮಿಯ ಮುಖಕ್ಕೆ ನೇರವಾಗಿ ನಿಂತು ಖಾರವಾಗಿ ಮಾತಾಡಿದ್ದಾನೆ. ಪುರಸಭೆಗೆ ಬಂದ 11 ಹಣಕಾಸು...



ಮಾಜಿ ಶಾಸಕ ಚಂದ್ರಶೇಖರ ರೆಡ್ಡಿ

ಎಲ್ಲವೂ ನಿಮ್ಮ ಹತೋಟಿಯಲ್ಲಿದ್ದರೆ ನೀವು ತುಂಬಾ ನಿಧಾನವಾಗಿ ಸಾಗುತ್ತಿದ್ದೀರಿ ಎಂದೇ ಅರ್ಥ -ಮೇರಿಯೋ ಅಂಡ್ರೆಟ್ಟಿ

ಸುಖ ಒತ್ತವಕ್ಕೆ ಸಿಕ್ಕಿದವರಂತೆ ಕಾಣುತ್ತಿದ್ದಾರೆ. ತನ್ನ ಸ್ಟಾರ್ ಇಮೇಜಿನಿಂದ ಗದ್ದುಗೆಯಾತ್ತೇನ ಎನ್ನುವ ಆತ್ಮವಿಶ್ವಾಸದಲ್ಲಿದ್ದ ಜಗ್ಗೇಶ್‌ಗೆ ಒಂದು ಸೋಲು ಅಹಂಕಾರ ಮುರಿದು ಹದಕ್ಕೆ ತಂದಿದೆ. ತನ್ನ ಇಡೀ ಜೀವನದಲ್ಲಿ ಗತ್ತಿನಿಂದ ಮಾತನಾಡುತ್ತಿದ್ದ ಜಗ್ಗೇಶ್ ಮೊದಲ ಬಾರಿಗೆ ಆತಂಕಗೊಂಡಂತೆ ಕಾಣುತ್ತಿದ್ದಾರೆ.

ಜಗ್ಗೇಶ್ ರಾಜಕೀಯ ಉದ್ದೇಶಗಳೇನೇ ಇರಲಿ, ಸಾಮಾನ್ಯ ಜನ ಬಯಸುವುದು ತಮ್ಮ ನಾಯಕ ತಮ್ಮ ನಿತ್ಯ ಜಂಜಾಟಗಳ ಬಗ್ಗೆ ಅರಿವಿನವನಾಗಿರಬೇಕು. ತಮ್ಮ ನೋವು-ನಲಿವುಗಳಲ್ಲಿ ಪಾಲುಗಾರನಾಗಬೇಕು. ತಮ್ಮ ವೈಯಕ್ತಿಕ ಕಷ್ಟ-ಸುಖಗಳನ್ನು ವಿಚಾರಿಸಿ ತಮ್ಮವನ್ನೊಳಗೊಬ್ಬನಂತೆ ಇರಬೇಕು ಎಂದು. ಆದರೆ ನಗರವಾಸಿಯಾಗಿದ್ದು, ಗ್ಲಾಮರ್ ಇಲ್ಲದಿದ್ದರೂ ತನ್ನ ಪ್ರತಿಭೆಯಿಂದ ಗ್ಲಾಮರ್ ಲೋಕದಲ್ಲಿ ಮಿಂಚಿದ ಜಗ್ಗೇಶ್ ಗ್ರಾಮೀಣ ಜನರ ನಾಡಿಮಿಡಿತ ತಿಳಿಯಲು ಯತ್ನಿಸಬೇಕು. ಇಷ್ಟರ ಮೇಲೆ ಇಲ್ಲಿನ ಕೆಲವು ಹಳೆಯ ಕಾಂಗ್ರೆಸಿಗಳ ಕುತ್ಸಿತ ವರ್ತನೆ ಜಗ್ಗೇಶ್‌ಗೆ ಕಿರಿಕಿರಿ ಉಂಟು ಮಾಡಿದೆ.

ಕಾಂಗ್ರೆ ಮಾಜಿ ಶಾಸಕ ಎಸ್. ರುದ್ರಪ್ಪ, ಮಾಜಿ ಜಿಲ್ಲಾ ಪಂಚಾಯ್ತಿ ಉಪಾಧ್ಯಕ್ಷ ಚೌದ್ರಿ ರಂಗಪ್ಪ ಜೊತೆ ಕೆಲವು ಚಿಕ್ಕಪುಟ್ಟವುಗಳೆಲ್ಲ ಸೇರಿ ತಮ್ಮ ಕಾಂಗ್ರೆ ಸಂಸ್ಕೃತಿಗನುಗುಣವಾಗಿ ತಮಗೆ ಟಿಕೆಟ್ ಬೇಕು ಇಲ್ಲದಿದ್ದರೆ ಜಗ್ಗೇಶ್ ಗೆಲ್ಲಲು ಬಿಡುವುದಿಲ್ಲ ಎಂದು ತಾಲ್ಲೂಕನ್ನು ಗುತ್ತಿಗೆ ಹಿಡಿದವರಂತೆ ಮಾತನಾಡತೊಡಗಿದ್ದಾರೆ.


"ತಾಲ್ಲೂಕಿಗೆ ಬಂದ ಹೊಸದರಲ್ಲಿ ನಮ್ಮನ್ನು ಗೌರವಿಸುತ್ತಿದ್ದ ಜಗ್ಗೇಶ್ ನಮ್ಮನ್ನು ತಾತ್ಸಾರ ಮಾಡುತ್ತಿದ್ದಾರೆ" ಎಂಬ ರಬ್ಬರ್ ಹಾವು ಬಿಡತೊಡಗಿದ್ದಾರೆ. ಸೋಲು-ಗೆಲುವು ನಿರ್ಧಾರ ಇವರ ಕೈಲಿ ಸಾಧ್ಯವಿಲ್ಲವಾದರೂ ಕಾಂಗ್ರೆನಲ್ಲಿ ಒಡಕಿದೆಯೆಂದು ತೋರಿಸಿ ಜನರನ್ನು ಮಾನಸಿಕವಾಗಿ ಅಸ್ಥಿರಗೊಳಿಸುವುದು ಮತ್ತು ಜಗ್ಗೇಶ್‌ಗೆ ಭಯ ಹುಟ್ಟಿಸುವುದು ಇವರ ತಂತ್ರ.

ಅವರಿಗೆ ಕೊಡುತ್ತಿದ್ದ ಗೌರವಕ್ಕೆ ಚ್ಯುತಿ ಯಾಕೆ ತಂದಿರಿ ಎಂದು ಕೇಳಿದರೆ ಬೆಚ್ಚಿಬಿದ್ದವರಂತೆ ಕಣ್ಣುಕಣ್ಣು ಬಿಡುತ್ತಾರೆ ಜಗ್ಗೇಶ್.

ಒಟ್ಟಾರೆ, ಮಾಜಿ ಸಂಸದ ಜಿ.ಎಸ್. ಬಸವರಾಜು ನಿಯತ್ತಾಗಿ ಪ್ರಯತ್ನಪಟ್ಟರೆ ಗುಪ್ತವಾಗಿರುವ ಕಾಂಗ್ರೆ ಪರ ಜನಾಭಿಪ್ರಾಯವನ್ನು ಎನ್‌ಕ್ಯಾಷ್ ಮಾಡಿಕೊಳ್ಳುವುದು ಕಷ್ಟವಲ್ಲ. ಜಗ್ಗೇಶ್ ಭವಿಷ್ಯ 'ತೆರೆ'ಯ ಮೇಲೆ....

-ವರದಿಗಾರ

ನಿಮ್ಮ ಶಾಸಕರು ಕಡಿದಿದ್ದೇನು?



ಆಯೋಗ ಒದಗಿಸಿದ್ದ ಹಣವನ್ನು ಸದ್ಬಳಕೆ ಮಾಡಿಕೊಂಡಿದ್ದರೆ ಶರಣ ಪ್ರಕಾಶ ಪಾಟೀಲ ಕುಬ್ಜನಾಗಿ ಮತದಾರರ ಹತ್ತಿರ ಹೋಗುವ ದರ್ದು ಇರಲಿಲ್ಲ. ಬಹುತೇಕ ಕಡೆಗಳಂತೆ ಶಾಸಕನಾಗಿದ್ದರೂ ಸರಕಾರಿ ಕಚೇರಿಗಳಲ್ಲಿ ತಿಂಗಳ ಹಫ್ತಾ ಫಿಕ್ಸ್ ಮಾಡಿಕೊಂಡಿಲ್ಲದಿರುವುದು ಪ್ರಕಾಶ ಹೆಗ್ಗಳಿಕೆ. ಆದರೆ ಮುದಿಗಾಸಿ ಕಂತ್ರಾಟುದಾರರಿಂದ ಅವಮಾನಕ್ಕೆ ತುತ್ತಾಗಬೇಕಾದ ಸಂದರ್ಭ ಇಲ್ಲಿ ಈಗ ಎದುರಾಗಲಿದೆ. ವೈರತ್ವವನ್ನು ಎಂದೂ ಸಾಧಿಸದ, ಸರಳ ನೇರ ನಡೆನುಡಿಯ ಶರಣ ಪ್ರಕಾಶ ಪಾಟೀಲ ಮತ್ತೊಮ್ಮೆ ಸೇಡಂನಲ್ಲಿ ಪ್ರಕಾಶ ಮಾನವಾಗಲಿದ್ದಾರೆ.

ಕಲಬುರ್ಗಿಯಲ್ಲಿ ದಳ ದಳ ದಳವಾಗಿ ಉದುರಿ ಹೋದರೂ ಫ್ಯೂಡಲ್ ಮಾದರಿಯ ಪಳಿಯುಳಿಕೆ ಯಂತಿರುವ ಚಂದ್ರಶೇಖರ ರೆಡ್ಡಿ ಮತ್ತು ಮದನ ದೇಶಮುಖ ಮತ್ತೊಂದು ಅವಕಾಶಕ್ಕಾಗಿ ಜನರೆದುರು ನಿಲ್ಲಲಿದ್ದಾರೆ. ಮಿರಾಜುದ್ದೀನ್ ಪಟೇಲನನ್ನು ಹಿಡಕೊಂಡು ಹೇಗಾದರೂ ಸೈ ಈ ಬಾರಿ ತನ್ನ ಚರಿಸ್ಮಾ ವೃದ್ಧಿಸಿ ಕೊಳ್ಳಬೇಕೆಂದು ಹೊರಟಿರುವ ಮಕ್ತುಂಖಾನ ಜೆಡಿಎಸ್ ಟಿಕೆಟಗಾಗಿ ಹೆಣಗಾಡುವ ಸಾಧ್ಯತೆಗಳಿವೆ. ಉಳಿದಂತೆ ನಿವೃತ್ತ ಡಿ.ವಾಯ್.ಎಸ್ಪಿಯಾಗಿರುವ ಸಿ.ದ್ಯಾಮಪ್ಪ ಸಣ್ಣೂರ್ ಸಮಾಜವಾದಿ ಪಕ್ಷದಿಂದ ನಿಲ್ಲಲಿದ್ದಾನೆ. ಅಂಬಿಗರ ಸಮಾಜದ ಮತಗಳನ್ನು ನೆಚ್ಚಿಕೊಂಡು ಹೊರಟಿರುವ ಸಣ್ಣೂರ ಯಶಸ್ವಿ ಪಡೆಯುವುದು ಕನಸಿನ ಮಾತೇ ಸೈ.

ಚಿಞ್ಚೋಳಿಗೆ ಬಸವಣ್ಣನ ನೆಲದಲ್ಲಿ ಮತ್ತೆ ಚಿಗುರುವ ಶಕ್ತಿ ಒದಗಿಸಿಕೊಟ್ಟರೆ ಮುಂದೊಂದು ದಿನ ಇಡೀ [illegible] ಸಮಾಜ ಅವರನ್ನು ಕ್ಷಮಿಸಲಾರರು ಎಂಬ [illegible] ಇಟ್ಟುಕೊಂಡು ಸೇಡಂ ಮತದಾರ ಪ್ರಜ್ಞಾವಂತಿಕೆ [illegible]

-ವಿಶ್ವಾರಾಧ್ಯ ಸತ್ಯಂಪೇಟೆ

ಕೊಪ್ಪಳ: ಭರವಸೆಗೆ ಬೆಂಕಿ ಇಟ್ಟ ಬಸವರಾಜ ಹಿಟ್ನಾಳ್!

ಕೊಪ್ಪಳದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರಿ ಯಾರು ಅಂತ ಯಾರನ್ನೇ ಕೇಳಿ. ನಿಮಗೆ ಸಿಗುವ ಉತ್ತರ ಒಂದೇ: ಆತ ಮಾಜಿ ಶಾಸಕ ಬಸವರಾಜ ಹಿಟ್ನಾಳ್.


ಮೂಲತಃ ಹಿಟ್ನಾಳ್ ಅರೆಬರೆ ಕಾಂಗ್ರೆಸ್ಸಿಗ. ಮೊದಲು ಬಂಗಾರಪ್ಪನ ಕೆಸಿಪಿ. ಆನಂತರ ಜೆಡಿಎಸ್ (ಟ್ರ್ಯಾಕ್ಟರ್ ಚಿಹ್ನೆ)ನಿಂದ ಸ್ಪರ್ಧಿಸಿ ಸೋತಿದ್ದ. ಕೊನೆಗೆ ಎಪಿಎಂಸಿಗೆ ಆಯ್ಕೆಯಾಗಿ 2000 ನೇ ಇಸ್ವಿಯಲ್ಲಿ ಅದರ ಅಧ್ಯಕ್ಷನಾಗಿ ಅಧಿಕೃತ ಕಾಂಗ್ರೆಸ್ಸಿಗನಾದ. ಆದರೆ ಕಾಂಗ್ರೆಸ್‌ನ ಭದ್ರ ಕೋಟೆಯಾಗಿದ್ದ ಕೊಪ್ಪಳದಲ್ಲಿ ಪಕ್ಷವೇ ಲೆಕ್ಕಕ್ಕಿಲ್ಲದಂತಾಗಿತ್ತು. ಹದಿಮೂರೂವರೆ ವರ್ಷಗಳಿಂದ ತಮ್ಮ ಕಚ್ಚಾಟದಿಂದಾಗಿಯೇ ಅಧಿಕಾರದಿಂದ ದೂರ ಉಳಿದಿದ್ದ ಕಾಂಗ್ರೆಸ್ಸಿಗರು 2004 ರ ಹೊತ್ತಿಗೆ ಪಶ್ಚಾತ್ತಾಪ ಪಡಲಾರಂಭಿಸಿದ್ದರು. ಕೊನೆಗೆ ಒಂದು ಡಜನ್ ಕಾಂಗ್ರೆಸ್ ನಾಯಕರು ಮಳೆ ಮಲ್ಲೇಶ್ವರ ದೇವಸ್ಥಾನದಲ್ಲಿ ಸೇರಿ "ಯಾರಿಗೇ ಟಿಕೆಟ್ ಸಿಗಲಿ, ನಾವೆಲ್ಲ ಒಗ್ಗಟ್ಟಿನಿಂದ ಪಕ್ಷದ ಗೆಲುವಿಗೆ ಶ್ರಮಿಸುತ್ತೇವೆ" ಎಂದು ಪ್ರಮಾಣ ಮಾಡಿದ್ದರು. ಆಗಲೂ ಆ ಎಲ್ಲ ನಾಯಕರೂ ಟಿಕೆಟ್‌ಗಾಗಿ ಪ್ರಯತ್ನಿಸಿದ್ದರೂ ಕೊನೆಗೆ ಅದು ಸಂಸದ ವಿರುಪಾಕ್ಷಪ್ಪನ ಕೃಪೆಯಿಂದ ಹಿಟ್ನಾಳ್ ಪಾಲಾಗಿತ್ತು.

ಆಗ ದೇವರ ಮುಂದೆ ಪ್ರಮಾಣ ಮಾಡಿದ್ದಂತೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ದಿವಟರ್ ನೇತೃತ್ವದಲ್ಲಿ ಕೆಲಸ ಮಾಡಿದ ಎಲ್ಲಾ ನಾಯಕರು ಮತ್ತು ಕಾರ್ಯಕರ್ತರು ಹಿಟ್ನಾಳ್‌ನನ್ನು ಗೆಲ್ಲಿಸಿ ಸಂಭ್ರಮಪಟ್ಟಿದ್ದರು. ಸಾಮಾಜಿಕ ನ್ಯಾಯ ಪ್ರತಿಪಾದಿಸುವವರೂ ಅಂದು ಸಂಭ್ರಮಿಸಿದ್ದರು. ಜೊತೆಗೆ ಸಂಗಣ್ಣ ಕರಡಿ ಬಿಜೆಪಿ ಸೇರಿದ್ದರಿಂದ, ಮುಸ್ಲಿಂ ಮತದಾರರೆಲ್ಲ ಕಾಂಗ್ರೆಸ್ ಕಡೆ ತಿರುಗಿದ್ದರು. ಆದರೆ ಈ ಎಲ್ಲ ಸಂಭ್ರಮ ಕೆಲವೇ ದಿನಗಳಲ್ಲಿ ಕಳಚಿಹೋಯಿತು ಕಾರಣ ಬಸವರಾಜ ಹಿಟ್ನಾಳನ ಬಕಾಸುರತನ.

ಗೆದ್ದ ಕೂಡಲೇ ಎಲ್ಲ ಅಧಿಕಾರಿಗಳನ್ನು ಕರೆದು "ನೀವೆಲ್ಲ ಅದೇನು ಮಾಡ್ತೀರೋ ನನಗೆ ಗೊತ್ತಿಲ್ಲ. ನನಗಿಷ್ಟು ಬೇಕು" ಅಂತ ಮಂತ್ಲಿ ಫಿಕ್ಸ್ ಮಾಡಿಕೊಂಡ.

ಈತನ ದಿವ್ಯ ನಿರ್ಲಕ್ಷ್ಯದಿಂದಾಗಿ ಕ್ಷೇತ್ರ ಪೂರ್ತಿ ಹಾಳು, ಹಾಳು ಹೊಡೆಯಲು ಹತ್ತಿತು. ಐದು ಲಕ್ಷದಲ್ಲಾಗುವ ರಸ್ತೆ ಕೆಲಸಕ್ಕೆ ಹತ್ತು ಲಕ್ಷದ ಎಸ್ಟಿಮೇಟ್ ಮಾಡಿ ದುಡ್ಡು ಗೆಬರಿದ. ಪಕ್ಷದ ನಿಷ್ಠಾವಂತ ಕಾರ್ಯಕರ್ತರು ಕೆಲಸ ಕೇಳಿದರೆ ಅದಕ್ಕೂ ಅಡ್ವಾನ್ಸ್ ಕಮಿಷನ್ ಕೇಳತೊಡಗಿದ. ಮಾಡಿದ್ದ ರಸ್ತೆಗಳು ತಿಂಗಳಿಗೇ ಎಕ್ಕುಟ್ಟಿ ಹೋದವು.

ಆಹಿಂದ ರ‍್ಯಾಲಿ, ಸಭೆಗಳಲ್ಲಿ ದೇವೇಗೌಡರನ್ನು ಹಿಗ್ಗಾಮುಗ್ಗಾ ಬೈಯ್ಯುತ್ತಾ "ದೇವೇಗೌಡ ಧೃತರಾಷ್ಟ್ರ" ಎಂದು ಮೂದಲಿಸಿದ್ದ ಹಿಟ್ನಾಳ್ ಎಲ್ಲರ ವಿರೋಧದ ಮಧ್ಯೆಯೂ ಜಿ.ಪಂ. ಚುನಾವಣೆಯಲ್ಲಿ ಅಳವಂಡಿ ಕ್ಷೇತ್ರದಿಂದ ತನ್ನ ಮಗ ರಾಘವೇಂದ್ರನಿಗೆ ಟಿಕೆಟ್ಟು ಕೊಟ್ಟ. ಅಷ್ಟೇ ಅಲ್ಲ, 30 ಲಕ್ಷದಷ್ಟು ಖರ್ಚು ಮಾಡಿ ಮಗನನ್ನು ಗೆಲ್ಲಿಸಿಕೊಂಡ. ತಂದೆಯಂತೆ ಮಗ ಎಂಬಂತೆ ರಾಘವೇಂದ್ರನನ್ನು ಕೈಗಾರಿಕಾ ಮತ್ತು ಕೃಷಿ ಸ್ಥಾಯಿ ಸಮಿತಿ ಅಧ್ಯಕ್ಷನನ್ನಾಗಿ ಮಾಡಿದ ಹಿಟ್ನಾಳ್ ಆತನನ್ನು ಅಲ್ಲಿ ಮೇಯಲು ಬಿಟ್ಟ.




ಶ್ರೀರಾಮುಲು

2005 ರಲ್ಲಿ ಮಳೆ ವಿಫಲವಾಗಿ ಬರ ಆವರಿಸಿದರೆ, ಬರ ಕಾಮಗಾರಿ ಮಾಡಿಸದೇ "ಬಿಲ್ ಮಾಡಿ" ಎಂದು ಅಧಿಕಾರಿಗಳಿಗೆ ಧಮಕೀ ಕೊಟ್ಟಿದ್ದ. ಅದರ ಪರಿಣಾಮವಾಗಿ ಗೊಂಡಬಾಳ ಭಾಗದ ನೂರಾರು ಬಡವರು ದುಡಿಮೆಯಿಲ್ಲದೆ, ಆಹಾರವಿಲ್ಲದೆ ನಡೆದುಕೊಂಡೇ ಕೊಪ್ಪಳಕ್ಕೆ ಆಗಮಿಸಿದರೂ ಹಿಟ್ನಾಳನ ಮನಸ್ಸು ಕರಗಲಿಲ್ಲ.

ಜಿಲ್ಲಾ ಕೇಂದ್ರ, ಕೊಪ್ಪಳ ಕುಡಿಯುವ ನೀರಿಲ್ಲದೇ ತತ್ತರಿಸುತ್ತಿದೆ. ಒಳ್ಳೆಯ ರಸ್ತೆಗಳಿಲ್ಲ. ಹಾಸಗ ರಸ್ತೆ, ಸಾಲಾರ್‌ಜಂಗ್ ರಸ್ತೆ ಸುಧಾರಿಸಲಿಲ್ಲ. ಬೀದಿ ದೀಪ ಕಾಣದೇ ಕೊಪ್ಪಳ ಮೂರು ವರ್ಷವಾಯಿತು. ಜಿಲ್ಲಾ ಕೇಂದ್ರ ಕೊಪ್ಪಳವನ್ನು ದೊಡ್ಡ ಕೊಂಪೆಯನ್ನಾಗಿ ಮಾಡಿಟ್ಟ ಪುಣ್ಯಾತ್ಮ ಹಿಟ್ನಾಳ್.

ಶಾಸಕರ ಪ್ರದೇಶಾಭಿವೃದ್ಧಿ ಸಮಿತಿಯ ಹಣವನ್ನೆಲ್ಲ ತನ್ನ ಓಟ್‌ಬ್ಯಾಂಕ್ ಗಟ್ಟಿ ಮಾಡಿಕೊಳ್ಳಲು ವ್ಯಯಿಸಿದ. ಅಳವಂಡಿ ಕ್ಷೇತ್ರದಲ್ಲಿಯೇ ಮೂರು ಸಾವಿರಕ್ಕೂ ಹೆಚ್ಚು ಜನರಿಗೆ ವೃದ್ಧಾಪ್ಯ ವೇತನವನ್ನು ಕೊಡಿಸಲು ಈತ



ಬಸವರಾಜ್ ಹಿಟ್ನಾಳ್

"ಎಲೆಕ್ಷನ್ ಸಂದರ್ಭದಲ್ಲಿ ನಾನು ಖಾಲಿಯಾಗಿದ್ದೆ. ಮಗ ರಾಘುನ ಮದುವೆಗೆ ದಾವಣಗೆರೆಯಿಂದ 20 ಕೆಜಿ ಬೆಳ್ಳಿ ಖರೀದಿ ಮಾಡಿದ" ಎನ್ನುತ್ತಾನೆ.

ಕಿರ್ಲೋಸ್ಕರ್ ಕಾರ್ಖಾನೆಯಲ್ಲಿ ಸಣ್ಣ ಪ್ರಮಾಣದ ಗುತ್ತಿಗೆದಾರನಾಗಿದ್ದ ಹಿಟ್ನಾಳ್ ಶಾಸಕನಾದ ಮೇಲೆ ಅಲ್ಲಿದ್ದ ಎಲ್ಲ ಗುತ್ತಿಗೆದಾರರನ್ನು ಓಡಿಸಿ ಕಾರ್ಖಾನೆಯ ಕಸ ಬಳಿಯುವ, ಪಾಯಖಾನೆ ತೊಳೆಯುವ, ನೀರು ಹಾಯಿಸುವ, ಮಣ್ಣು ಹೊರುವ ಎಲ್ಲ ಗುತ್ತಿಗೆಗಳನ್ನು ತಾನೇ ಪಡೆದಿದ್ದಾನೆ. ಇದರೊಂದಿಗೆ ನಾಲ್ಕು ಟಿಪ್ಪರ್‌ಗಳನ್ನು ಮತ್ತು ಆರು ಜೆಸಿಬಿಗಳನ್ನು ಬಾಡಿಗೆ ಬಿಟ್ಟಿದ್ದಾನೆ. ಗಿಣಿಗೇರಿ ಹತ್ತಿರ ಕಾರ್ಖಾನೆಗಳು ದುಬಾರಿ ಬೆಲೆ ಭೂಮಿಯನ್ನು ಖರೀದಿಸುವುದು ಕಂಡು, ಸರ್ಕಾರಿ ಭೂಮಿಗೆ ಕೈಯಿಟ್ಟಿದ್ದ ಹಿಟ್ನಾಳನ ಪ್ರಯತ್ನವನ್ನು ಅದೃಷ್ಟವಶಾತ್ ಕರ್ನಾಟಕ ರೈತ ಸಂಘ ವಿಫಲಗೊಳಿಸಿತು. ಹೆಚ್ಚು ಕಾರ್ಖಾನೆಗಳು ಬಂದಷ್ಟೂ ತಾನು ಅವುಗಳ ಗುತ್ತಿಗೆದಾರನಾಗಬಹುದೆಂಬ ದುರಾಸೆಗೆ ಬಿದ್ದಿರುವ ಹಿಟ್ನಾಳ್ ಕೂಡ ರೈತನ ಮಗನೇ. ಆದರೆ "ನಿನ್ನ ಗದ್ದೆಗಳನ್ನು ಕಾರ್ಖಾನೆಗೆ ಕೊಡ್ತೀಯಾ" ಅಂದ್ರೆ "ಆಗಲ್ಲ" ಅಂತಾನೆ. ಈತನ ಎಲ್ಲ ವ್ಯವಹಾರ, ಗಳಿಕೆ ಅಭಯ್ ಸೇಠನೊಂದಿಗೆ. "ಬೇವಿನ ಹಳ್ಳಿ ಹತ್ತಿರ ಇರುವ ಕಿರ್ಲೋಸ್ಕರ್ ಕಾರ್ಖಾನೆಯಂತದ್ದು ಹಾಕಬೇಕಂದ್ರೆ ಎಷ್ಟು ಹಣ ಬೇಕು? ಅಷ್ಟನ್ನೂ ಗಳಿಸುತ್ತಿದ್ದೆ ಆದರೆ 19 ತಿಂಗಳ ಮುಂಚೆಯೇ ಗೌರ್ನಮೆಂಟ್ ಬಿದ್ದು ಹೋಯಿತು. ಥತ್!" ಅಂತ ಬೇಜಾರು ಮಾಡಿಕೊಳ್ಳುತ್ತಾನೆ ಪಾಪ ಹಿಟ್ನಾಳ್. ಮತ್ತೆ ಚುನಾವಣೆ ಬರುತ್ತಿದೆ. ಆದರೆ ಆವತ್ತು ಹಿಟ್ನಾಳ್‌ನೊಂದಿಗಿದ್ದ ಎಲ್ಲ ಜಾತಿಯ ನಾಯಕರೂ, ಕಾರ್ಯಕರ್ತರೂ ಇವತ್ತು ಇವನ ಬಗ್ಗೆ ಮುನಿಸಿಕೊಂಡಿದ್ದಾರೆ. ಆದರೂ ಮತ್ತೆ ಟಿಕೆಟು ತಂದು, ಕೋಟಿಗಟ್ಟಲೆ ಚೆಲ್ಲಿ ಗೆದ್ದು ಬರುವ ಉಮೇದಿ ಈ ಮಾಜಿಯದು. ಆದರೆ ಕಾಂಗ್ರೆಸ್ ಟಿಕೆಟ್‌ಗೆ ಈ ಬಾರಿ ರೇಸಿನಲ್ಲಿರುವುದು ಡಾಕ್ಟರ್ ರಾಂಪುರ. ಮೂಲತಃ ವೈದ್ಯರಾದ ಇವರು ನಿವೃತ್ತಿಯ ನಂತರ ರಾಜಕೀಯಕ್ಕೆ ಬಂದಿರುವವರು. ಇವರಿಗೆ 2004 ರಲ್ಲಿ ಟಿಕೆಟ್ ಸ್ವಲ್ಪದರಲ್ಲಿ ತಪ್ಪಿತ್ತು. ಅದನ್ನು ಬಳಸಿಕೊಂಡು ಜೆಡಿಎಸ್ ಇವರನ್ನು ಸೆಳೆಯಲು ಯತ್ನಿಸಿದರೂ ಇವರು ಒಪ್ಪಲಿಲ್ಲ. ಕ್ಷೇತ್ರ ಬಯಸುತ್ತಿರುವ ಹೊಸ ಮುಖಗಳಲ್ಲಿ ಕಾಂಗ್ರೆಸ್‌ನಿಂದ ಇವರು ಪ್ರಮುಖರು.

ಮುಂದಾದನಾದರೂ ಫಲಾನುಭವಿಗಳಲ್ಲಿ ಬಹಳಷ್ಟು ಜನ ಗಟ್ಟಿಮುಟ್ಟಾದವರೇ ಇದ್ದಾರೆ. ಅಂದರೆ ಇದನ್ನೂ ತನ್ನ ಓಟ್ ಬ್ಯಾಂಕ್‌ಗೆ ಬಳಸಿಕೊಳ್ಳುವ ದುರಾಲೋಚನೆ ಹಿಟ್ನಾಳನದ್ದು ಎನ್ನದೆ ವಿಧಿ ಇಲ್ಲ.



ಸಂಗಪ್ಪ


ಹಿಟ್ನಾಳನನ್ನು ಬೆಂಬಲಿಸಿದ್ದ ಮುಸ್ಲಿಮರ ರಂಜಾನ್ ಹಬ್ಬ ಇಫ್ತಾರ್ ಕೂಟದಲ್ಲಿ ಟೋಪಿ ಧರಿಸಿ ಪೋಸು ಕೊಡುವ ಈತ ಅವರಿಗೂ ದ್ರೋಹ ಬಗೆದ. ಆ ಪ್ರಕರಣ ಹೀಗಿದೆ: ಹಿಂದೊಮ್ಮೆ ಈತನೇ ಉರ್ದು ಶಾಲೆಗೆಂದು ಜಾಗ ಕೊಟ್ಟಿದ್ದ. ಆ ಜಾಗದಲ್ಲೇ ಡಿಗ್ರಿ ಕಾಲೇಜನ್ನು ಸ್ಥಾಪಿಸಲು ಒಬ್ಬರು ಮುಂದಾದರು. ಆಗ ಆ ಸ್ಥಳದಲ್ಲಿ ಡಿಗ್ರಿ ಕಾಲೇಜು ಕಟ್ಟಲು ಆಗುವುದಿಲ್ಲವೆಂದು ಜಿಲ್ಲಾಧಿಕಾರಿ ಪತ್ರ ಕೊಟ್ಟರು. ಆದರೆ ಐದು ಲಕ್ಷದ ಪರ್ಸೆಂಟೇಜ್ ಆಸೆಗೆ ಬಿದ್ದ ಹಿಟ್ನಾಳ್ ಜಿಲ್ಲಾಧಿಕಾರಿಗಳ ಪತ್ರವನ್ನೇ ಕಡೆಗಣಿಸಿ ಆ ಜಾಗವನ್ನೇ ಡಿಗ್ರಿ ಕಾಲೇಜಿಗೆ ನೀಡಿದ. ಹೀಗೆ ಮುಸ್ಲಿಮರಿಗೆ ತಾನು ಕೊಟ್ಟ ಮಾತನ್ನೇ ಉಳಿಸಿಕೊಳ್ಳದಿದ್ದ ಹಿಟ್ನಾಳ್‌ನದ್ದು ಎಂತಹ ಕಿತಾಪತಿ ಬುದ್ಧಿ ಎಂದರೆ ಡಿಗ್ರಿ ಕಾಲೇಜ್ ಕೆಲಸವನ್ನು ಗಣೇಶ ಹಬ್ಬಕ್ಕೆ ವಾರವಿರುವಾಗಲೇ ಚಾಲೂ ಮಾಡಿಸಿದ್ದ.



ಸಂಗಣ್ಣ ಕರಡಿ

ಬಸವರಾಜ ಹಿಟ್ನಾಳ್ ಲೋಕಾಯುಕ್ತರಿಗೆ ತನ್ನ ಆಸ್ತಿ ವಿವರ ಕುರಿತಂತೆ ಅದೇನು ಕೊಟ್ಟಿದ್ದಾನೋ ಗೊತ್ತಿಲ್ಲ. ಆದರೆ ನಿಜವಾಗಲೂ ಈತ ನಾಲ್ಕು ಕಾರು, ಒಂದು ಸ್ಕಾರ್ಪಿಯೋ, ನಾಲ್ಕು ಟಿಪ್ಪರ್ ಲಾರಿ, ದುಬಾರಿಯ ಆರು ಜೆಸಿಬಿಗಳ ಮಾಲೀಕ. ಇದಿಷ್ಟೇ ಅಲ್ಲದೆ, ಬೆಂಗಳೂರಿನ ಮಲ್ಲೇಶ್ವರಂನಲ್ಲಿ 40 ಲಕ್ಷ ಬೆಲೆಯ ಫ್ಲ್ಯಾಟ್ ಓನರ್ ಕೂಡ. ಇತ್ತೀಚೆಗೆ ಸಿಂಗಟಾಲೂರು ಡ್ಯಾಂ ಹತ್ತಿರ 300 ಎಕರೆ ಭೂಮಿ ಖರೀದಿಸಿರುವ ಸುದ್ದಿ ಕೂಡ ಇದೆ. ಇದೆಲ್ಲ ಆಸ್ತಿ ಸಾಧ್ಯವಾಗಿದ್ದು ಸ್ವಚ್ಛ ಗ್ರಾಮ, ಜಲ ನಿರ್ಮಲ, ಜಲಾನಯನದಲ್ಲಿ ಹೊಡೆದ ಕೊಳ್ಳೆ ಹಣದಿಂದಿರಬಹುದೇ ಎಂಬ ಕುತೂಹಲ ಕೊಪ್ಪಳ ಜನರದ್ದು.

ಇತ್ತೀಚೆಗೆ ಹಿಟ್ನಾಳ್ ಬೂದಗುಂಪಾ ಬಳಿಯ ಕೆರೆಹಳ್ಳಿ ಬಳಿ ನಾಲ್ಕು ಎಕರೆ ಗುಡ್ಡವನ್ನು ಲೀಸ್ ಮೇಲೆ ಪಡೆದಿದ್ದಾನೆ. ಅಲ್ಲಿ ಸದ್ಯದಲ್ಲೇ ಸ್ಟೋನ್ ಕ್ರಷರ್ ಚಾಲೂ ಆಗಲಿದೆ. ಪ್ರತ್ಯೇಕವಾದ ಮತ್ತೊಂದು ಐವತ್ತು ಎಕರೆ ಭೂಮಿಯಲ್ಲಿ ಸಾಗುವಾನಿ, ಮತ್ತಿಯಂತಹ ಬೆಲೆಬಾಳುವ ಮರಗಳನ್ನು ಬೆಳೆಸುವ ಪ್ಲಾನ್ ಕೂಡ ಹಾಕಿದ್ದಾನಂತೆ.




ಸರಕಾರಿ ಕಚೇರಿಗಳಿಂದ ತಿಂಗಳಿಗೆ ಕನಿಷ್ಠವೆಂದರೂ ಐದರಿಂದ ಎಂಟು ಲಕ್ಷ ಮಂತ್ಲಿ ಎತ್ತುವ ಹಿಟ್ನಾಳ್ [illegible] ಈ ಲೂಟಿಯ ಬಗ್ಗೆ ಏನು ಹೇಳುತ್ತಾನೆ ಗೊತ್ತಾ

ಈ ನಡುವೆ ಬಳ್ಳಾರಿಯ ಶ್ರೀರಾಮುಲು ಕೊಪ್ಪಳದ ಹಾಳಾಗಿರುವ ರಸ್ತೆಗಳಲ್ಲಿ ರಾಜಕೀಯ ಧೂಳು ಎಬ್ಬಿಸಿ ಹೋಗಿದ್ದಾನೆ. ಹೀಗಾಗಿ ಬಿಜೆಪಿಗೂ ಈಗ ಇಲ್ಲಿ ಸ್ವಲ್ಪ ಹುರುಪು ಬಂದಂತಾಗಿದೆ. ಆದರೆ ಬಿಜೆಪಿಯಲ್ಲಿದ್ದರೂ ಕೋಮುವಾದಿಯಲ್ಲದ ಸಂಗಪ್ಪ ಪಕ್ಕಳದ ಎಂಬ ನಿವೃತ್ತ ನೌಕರರೂ, ಅನಂತು ಗ್ಯಾಂಗಿನ ಸದಸ್ಯರೂ ಆಗಿರುವ ಇವರಿಗೆ ಈ ಬಾರಿಯ ಕಮಲದ ಟಿಕೆಟಂತೆ. ಇವರು ಕೂಡ ಹೊಸಬರು ಅನ್ನೋದು ಇಲ್ಲಿ ಮುಖ್ಯ. ಸಂಗಣ್ಣ ಕರಡಿ ಜೆಡಿಎಸ್‌ನಲ್ಲಿ ಇರ್ತಾನೋ ಬಿಡ್ತಾನೋ ಅದು ಬೇರೆ. ಆದರೆ ಆತ ಆಶ್ರಯ ನಿವೇಶನ ಹಗರಣದಿಂದ ಚೇತರಿಸಿಕೊಳ್ಳಲು ಇನ್ನೂ ಸಮಯ ಬೇಕಾಗುತ್ತದೆ. ಜೆಡಿಎಸ್‌ನಿಂದ ಎಂ.ವಿ. ಪಾಟೀಲ್ ಹೆಸರು ಇದೆ.

ಕಾಂಗ್ರೆಸ್‌ನ ರಾಂಪುರ, ಜೆಡಿಎಸ್‌ನ ಪಾಟೀಲ್, ಬಿಜೆಪಿಯ ಸಂಗಪ್ಪ ಮೂವರೂ ಸ್ವಭಾವತಃ ಸೌಮ್ಯಜೀವಿಗಳೇ. ಇದ್ದುವರಲ್ಲಿಯೇ ಉತ್ತಮ ಎನಿಸಿಕೊಂಡವರು. 2004 ರಲ್ಲಿ ಹಿಟ್ನಾಳ್ ಮೇಲೆ ಜನ ಇಟ್ಟ ಭರವಸೆಯನ್ನು ಆತ ಹುಸಿಗೊಳಿಸಿರುವುದರಿಂದ ಬೇರೆಯವರಿಗೆ ಬರುವ ಚುನಾವಣೆಯಲ್ಲಿ ಜಯ ಸಿಗಬಹುದೆನಿಸುತ್ತಿದೆ. ಇದು ಸ್ವತಃ ಹಿಟ್ನಾಳ್ [illegible]

-ವರದಿಗಾರ

ನಿಮ್ಮ ಶಾಸಕರು ಕಡಿದಿದ್ದೇನು?



ಬಾದಾಮಿಯನ್ನು ಗುಡಿಸಿ ಗುಂಡಾಂತರ ಮಾಡಿದ ಪಟ್ಟಣಶೆಟ್ಟಿ



ಶಾಂತಾದೇವಿ

ಚಾಲುಕ್ಯರಾಳಿದ ವಾತಾಪಿ ನಾಡಲ್ಲಿ ಅದೇನು ಕೆಟ್ಟ ಗಳಿಗೆ ಬಾಯಿತ್ತೋ ಗೊತ್ತಿಲ್ಲ. ಜನ ಮಹಾಗುಂಡಪ್ಪ ಕಲ್ಲಪ್ಪ ಪಟ್ಟಣಶೆಟ್ಟಿ ಎಂಬ ಅವಸ್ಮಾವನ್ನು ಗುಂಡನನ್ನು ಕಳೆದ ಚುನಾವಣೆಯಲ್ಲಿ ಗೆಲ್ಲಿಸಿ ಶಾಸಕನನ್ನಾಗಿ ಮಾಡಿಬಿಟ್ಟರು. ಮಾಡಿದ ತಪ್ಪಿಗೆ ಈತನಕ ಅದರ ಪ್ರತಿಫಲವನ್ನೂ ಅನುಭವಿಸಿಯಾಗಿದೆ. ಈಗ ರಾಜ್ಯದಲ್ಲಿ ಮತ್ತೆ ಚುನಾವಣೆ ಮೋಡ ಕವಿದಿರುವುದು ಯಾರಿಗೆ ಎಷ್ಟು ಸಂತೋಷ, ಎಷ್ಟು ದುಃಖ ತಂದಿದೆಯೋ ಗೊತ್ತಿಲ್ಲ. ಆದರೆ ಬಾದಾಮಿಯ ಜನಕ್ಕಂತೂ ಸಂತೋಷವನ್ನೇ ತಂದಿದೆ. ಪಟ್ಟಣ ಶೆಟ್ಟಿಯನ್ನು ಗಂಟುಮೂಟೆ ಕಟ್ಟಿ ಮನೆಗೆ ಕಳಿಸುವ ಅವಕಾಶ ಇಷ್ಟು ಬೇಗ ಬಂದುಬಿಟ್ಟಿತಲ್ಲ ಅಂತ!

'ಪಟ್ಟಣಶೆಟ್ಟಿ ಕೆಮ್ಮಲೂ ತನ್ನ ಹೆಂಡತಿ ಶಾಂತಾದೇವಿಯ ಪರ್ಮಿಶನ್ನು ಕೇಳ್ತಾನೆ' ಅನ್ನೋದು ಆತನ ಬಗ್ಗೆ ಕ್ಷೇತ್ರದ ಜನ ಆಡಿಕೊಳ್ಳೊ ಮಾತು. ಅದಕ್ಕಾಗಿಯೇ ಆವನಿಗೆ 'ಅಮ್ಮಾವ್ರ ಗಂಡ' ಎಂದೇ ಕರೆಯೋದು.

ಹಿಂದೊಮ್ಮೆ ಈತನಿಗೆ ವೀರೇಂದ್ರ ಪಾಟೀಲರ ಆಶೀರ್ವಾದದಿಂದ ಈತ ಶಾಸಕನಾಗಿದ್ದ. ಇವನ ತಂದೆ ಮತ್ತು ವೀರೇಂದ್ರ ಪಾಟೀಲ್ ಇಬ್ಬರೂ ಸ್ನೇಹಿತರು, ಇಬ್ಬರೂ ಬಣಜಿಗರು. ಈ ಕಾರಣಕ್ಕೆ ಈತನಿಗೆ ಶುಕ್ರದೆಸೆ ಬಂದುಬಿಟ್ಟಿತ್ತು. ಸ್ವಂತ ತಾಕತ್ತಿನಿಂದ ಗೆಲ್ಲಲಾಗದ ಪಟ್ಟಣಶೆಟ್ಟಿಯ ಸ್ಥಿತಿಯನ್ನು ಕಂಡು ಮರುಗಿದ ವೀರೇಂದ್ರ ಪಾಟೀಲರು ಇವನ ವಿರುದ್ಧ ಕಾಂಗ್ರೆಸ್ಸಿನಿಂದ ಕಾಡಯ್ಯ ಎಂಬ ಮುದುಕ ಮತ್ತು ಡಮ್ಮಿ ಕ್ಯಾಂಡಿಡೇಟ್‌ನ್ನು ನಿಲ್ಲಿಸಿ, ಜನತಾ ಪಕ್ಷದಿಂದ ಸ್ಪರ್ಧಿಸಿದ ಈತನನ್ನು ಗೆಲ್ಲಿಸಿದ್ದರು.




ಸಂಸದ ಗದ್ದಿಗೌಡ

ಅಂದಹಾಗೆ, ಕಳೆದ ಚುನಾವಣೆಯಲ್ಲೂ ಈತ ತನ್ನ ಸ್ವಂತ ಬಲದಿಂದ ಗೆಲ್ಲಲಿಲ್ಲ. ಇಡೀ ಕುರುಬ ಸಮುದಾಯದೊಳಗೆ ಅತೀ ಹೆಚ್ಚು ಹೆಸರು ಕೆಡಿಸಿಕೊಂಡಿದ್ದ ಬಿ.ಬಿ. ಚಿಮ್ಮನಕಟ್ಟಿಗೆ ಕಾಂಗ್ರೆಸ್ ತನ್ನ ಟಿಕೆಟ್ ಕೊಟ್ಟಿದ್ದರಿಂದ ಕುರುಬರ ಮತಗಳೂ ಪಟ್ಟಣಶೆಟ್ಟಿಯ ಪಾಲಾಗಿದ್ದವು. ಹೇಗೂ ತಾನೇ ಲಿಂಗಾಯತರ ಏಕೈಕ ಹೀರೋ ಎಂದು ಫೋಜು ಬೇರೆ ಕೊಟ್ಟಿದ್ದರಿಂದ ಲಿಂಗಾಯತರೂ ಇವನನ್ನು ನಂಬಿ ಓಟು ಹಾಕಿದ್ದರು. ಅಂತೂ ಇಂತೂ ಪಟ್ಟಣಶೆಟ್ಟಿ ಗೆದ್ದೇಬಿಟ್ಟ.

ನಿಜ ಹೇಳಬೇಕೆಂದರೆ ಪಟ್ಟಣಶೆಟ್ಟಿ ನಾಮಮಾತ್ರ ಶಾಸಕನಾಗಿದ್ದು ಅವನ ಹೆಂಡತಿ ಶಾಂತಾದೇವಿಯೇ ಶಾಸಕಗಿರಿಯನ್ನು ಪರೋಕ್ಷವಾಗಿ ನಿಭಾಯಿಸುತ್ತಾಳೆ. ಈ ಹಿಂದೆ ಪುರಸಭೆ ಅಧ್ಯಕ್ಷಳಾಗಿದ್ದ ಆಕೆಗೆ ಎಲ್ಲೆಲ್ಲಿ ಎಷ್ಟು ಮೀಟಬೇಕು, ಎಲ್ಲಿ ಹೇಗೆ ಕನ್ನಕೊರೆದು ಗುನ್ನ ತೂರಿಸಬೇಕು ಎಂಬುದು ಚೆನ್ನಾಗಿ ಗೊತ್ತಿದೆ. 'ತಾವು ಸಾಹುಕಾರ ಕುಟುಂಬದವರು, ತಮಗೆ ಯಾರ ಹತ್ತಿರವೂ ಹಣಕ್ಕಾಗಿ ಕೈಚಾಚುವ ಜರೂರತ್ತು ಇಲ್ಲ, ನಾವೇ ಬೇಕಾದರೆ ಇತರರಿಗೆ ಸಹಾಯ ಮಾಡುತ್ತೇವೆ.....' ಎಂದು ಹೇಳುವ ಈ ದಂಪತಿಯ ದೌಲತ್ತುಗಳು ಒಂದೇ ಎರಡೇ? ಆದರೆ ಇವರಿಬ್ಬರು ಮಾಡಿದ್ದು ಮಾತ್ರ ಕಂಡಕಂಡಲ್ಲಿ ಗೆಬರುವ ಕೆಲಸವನ್ನೇ. ಪಟ್ಟಣಶೆಟ್ಟಿ ಶಾಸಕನಾಗಿದ್ದೇ ತಡ ಅವನ ಹೆಂಡತಿಯೊಂದಿಗೆ ಸೇರಿ ಬಾದಾಮಿ ಕ್ಷೇತ್ರಕ್ಕೆ ಬರುವ ಎಲ್ಲಾ ಕೆಲಸಗಳ ಕಾಮಗಾರಿ ಗುತ್ತಿಗೆಯನ್ನು ತನ್ನ ಕುಲಬಾಂಧವರಿಗೆ ಕೊಡಿಸಿ ಕಮೀಷನ್ನು ನುಂಗಿಹಾಕಿದ. ಅಡ್ಡಬಂದ ಅಧಿಕಾರಿಗಳನ್ನು ಮಾರಿಮುತ್ತು ಥರ ದಬಾಯಿಸೋದು ಶಾಂತಾದೇವಿಯ ಕೆಲಸ.

ಇನ್ನು ತನ್ನ ಜಾತಿಬಾಂಧವರಿಗೆ ಸೇವೆ ಸಲ್ಲಿಸುವುದಕ್ಕಾಗಿ ಪ್ರತೀ ಕಚೇರಿಯಲ್ಲಿ ಬಣಜಿಗರನ್ನೇ ತಂದು ತುರುಕಿದ. ಅದರಲ್ಲೂ ವಿಶೇಷವಾಗಿ ಪಟ್ಟಣಶೆಟ್ಟಿಯ ಕೃಪಾಕಟಾಕ್ಷದಿಂದ ಜಿಲ್ಲಾ ಪಂಚಾಯತಿ ಮುಖ್ಯ ಎಂಜಿನಿಯರ್ ಹುದ್ದೆಗೇರಿದ ಇವನ ಚೇಲ ಖೋತ ಜಿಲ್ಲಾ ಪಂಚಾಯ್ತಿಯ ಕೋಟ್ಯಂತರ ರೂ.ಗಳನ್ನು ಗುಳುಂ ಮಾಡಿ ಹೋಗಿದ್ದಾನೆ. ಸದ್ಯಕ್ಕೆ ಅಯ್ಯಪ್ಪ ಸ್ವಾಮಿ ಮಾಲೆ ಹಾಕಿ ತನ್ನ ಪಾಪ ಪರಿಹಾರ ಮಾಡಿಕೊಳ್ಳಲು ಹೋಗಿದ್ದಾನೆ.



ಕಟ್ಟಿಮನಿ

ಪಟ್ಟಣಶೆಟ್ಟಿಯ ಆಶೀರ್ವಾದದಿಂದ ತಾಲ್ಲೂಕನ್ನು ಹಿಂಡುತ್ತಿರುವ ತಹಶೀಲ್ದಾರ್ ಮಹೇಶ್ ಕರ್ಜಗಿ ಬಾದಾಮಿ ನಗರವನ್ನೇ ಕೆಲವೇ ದಿನಗಳಲ್ಲಿ ಹರಾಜಿಗಿಟ್ಟರೂ ಇಡಬಹುದು. ಇವರ ನಡುವೆ ತಾಲ್ಲೂಕು ಪಂಚಾಯ್ತಿ ನಾಶಿ ಎಂಬ ಗೆಬರು ಎಂಜಿನಿಯರ್ "ಜಗದೀಶ್ ಶೆಟ್ಟರ್ ನಮ್ಮ ಮಾವ, ಪಟ್ಟಣಶೆಟ್ಟಿ ನನ್ನ ಚೆಡ್ಡಿ ದೋಸ್ತ್" ಎನ್ನುತ್ತಾ ಕಂಡಕಂಡಲ್ಲಿ ಬಕೆಟ್ ಇಟ್ಟು ಗೆಬರುತ್ತಿದ್ದಾನೆ.

ಬರುವ ಚುನಾವಣೆಯಲ್ಲಿ ಎಂ.ಕೆ. ಪಟ್ಟಣಶೆಟ್ಟಿಯ ಹಾದಿ ಅಷ್ಟು ಸುಲಭವಾಗಿಲ್ಲ. ಒಂದೆಡೆ ಈತ ಮಾಡಿದ ಮೋಸಗಳು, ಲೂಟಿಗಳು ಜನರನ್ನು ಇವನ ವಿರುದ್ಧವೇ ಎತ್ತಿಕಟ್ಟಿದ್ದರೆ ಇನ್ನೊಂದೆಡೆ ಈತನ ಪಕ್ಷದೊಳಗೇ ಇದನಿಗೆ ಟಾಂಗ್ ಕೊಡಲು ಜನ ಸಜ್ಜಾಗಿದ್ದಾರೆ. ಹಾಲಿ ಸಂಸದ ಗದ್ದಿಗೌಡನಿಗೂ ಎಂ.ಕೆಗೂ ಹಾವು-ಮುಂಗುಸಿ ಸಂಬಂಧ. ಆದರೂ ಕಳೆದ ಬಾರಿ ಗಾಣಿಗ ಸಮುದಾಯಕ್ಕೆ ಸೇರಿದ ಗದ್ದಿಗೌಡ ಎಂಪಿ ಸೀಟಿಗೂ, ಬಣಜಿಗ ಸಮುದಾಯಕ್ಕೆ ಸೇರಿದ ಎಂ.ಕೆ. ಎಮ್ಮೆಲ್ಲೆ ಸಿಟಿಗೂ ನಿಂತಿದ್ದಾಗ ಗದ್ದಿಗೌಡನಿಗೆ ಬಿದ್ದ ಬಹುಸಂಖ್ಯಾತ ಗಾಣಿಗ ಮತಗಳೆಲ್ಲವೂ ಶೆಟ್ಟಿಗೂ ಬಿದ್ದಿದ್ದರಿಂದ ಶೆಟ್ಟಿ ಗೆದ್ದುಬಿಟ್ಟಿದ್ದ. ಹೂವಿನ ಜೊತೆ ನಾರೂ ಸ್ವರ್ಗಕ್ಕೆ ಹೋಯಿತು ಅಂತಾರಲ್ಲ ಹಾಗೆ. ಈ ಬಾರಿ ಗದ್ದಿಗೌಡನಿಗೆ ಸಂಸದನಾಗುವುದಕ್ಕಿಂತ ಶಾಸಕನಾಗುವ ಮಹತ್ತರ ಆಸೆ ಇದೆ. ಅದು ಆಗದೇಹೋದರೆ ಕನಿಷ್ಠ ತನ್ನ ಶಿಷ್ಯ ಮಹಾಂತೇಶ್ ಮಮದಾಪುರನಿಗೆ ಟಿಕೆಟ್ ಕೊಡಿಸಬೇಕೆಂಬ ಇರಾದೆ ಇದೆ. ಮಹಂತೇಶ್‌ನ ಹಿಂದೆ ಹುಡುಗರ ಹಿಂಡಿರುವುದನ್ನು, ನಯವಾಗಿ ಮಾತನಾಡಿ ಜನರನ್ನು ಆಕರ್ಷಿಸುವ ಕಲೆಯಿರುವುದನ್ನು ರಾಜ್ಯ ನಾಯಕರಿಗೆ ತೋರಿಸಿ ಟಿಕೆಟ್ ಗಿಟ್ಟಿಸಿದರೂ ಆಶ್ಚರ್ಯವಿಲ್ಲ.




ಪಟ್ಟಣಶೆಟ್ಟಿ

ತನ್ನ ಬಗ್ಗೆ ಪಟ್ಟಣಶೆಟ್ಟಿಯ ಹೆಂಡತಿ ಶಾಂತಾದೇವಿ ಆಡಿದ ಕಿಡಿಮಾತುಗಳಿಂದ ಮತ್ತು ಹೀಯಾಳಿಕೆಗಳಿಂದ ಕೆರಳಿರುವ ಗದ್ದಿಗೌಡ ಪಟ್ಟಣಶೆಟ್ಟಿಗಿಂತಲೂ ಶಾಂತಾದೇವಿಯ ಮೇಲೆ ರೊಚ್ಚು ಹೆಚ್ಚಿಸಿಕೊಂಡಿದ್ದಾನೆ. ಜಿದ್ದಿಗೆ ಬಿದ್ದಿರುವ ಆತ ಈ ಬಾರಿ ಪಟ್ಟಣಶೆಟ್ಟಿಯನ್ನು ಹೆಂಡತಿ ಸಮೇತವಾಗಿ ಕಾಶಿಗೆ ತೀರ್ಥಯಾತ್ರೆಗೆ ಕಳಿಸುವ ಸ್ಕೆಚ್ ರೆಡಿ ಮಾಡಿದ್ದಾನೆ. ಹಾಗೇನಾದರೂ ಆದರೆ ಅವನನ್ನು ಯಾರು ಕಾಪಾಡುತ್ತಾರೋ ಗೊತ್ತಿಲ್ಲ.

ಇನ್ನು ಚಿಮ್ಮನಕಟ್ಟಿ ಕೈಗೆ ಕಾಂಗ್ರೆಸ್ ಚುಕ್ಕಾಣಿ ಸಿಕ್ಕ ಮೇಲೆ ಪಕ್ಷ ಸಮಾಧಿಯ ಅಂಚಿಗೆ ಹೋಗಿಬಿಟ್ಟಿದೆ. ಜಿಲ್ಲೆಯಲ್ಲಿ ಕಾಂಗ್ ಅಂತ ಒಂದು
ಪಕ್ಷ ಇದೆ ಎಂಬುದ
ಬಿಡುವ ಮಟ್ಟಕ್ಕೆ ಚಿ
ಬೆಳೆಸಿದ್ದಾರೆ. ಇವನ
ಕಾಂಗ್ರೆಸ್ ಸದಾ
ಗ್ಯಾರಂಟಿ.

ಚಿಮ್ಮನಕಟ್ಟಿಯ
ಸಲು ಸಕಾರಣಗಳಿ
ಮಂತ್ರಿಯಾಗಿದ್ದಾಗ
ಹಿಡಿದು ಹಿರಿಯ ಅ
ಯಾರನ್ನೂ ಬಿಡದೆ ದ
ಸಕ್ಕರೆ ಫ್ಯಾಕ್ಟರಿಯ
ಹೆಸರಿನಲ್ಲಿ ಕಂಡವರ
ಟ್ಟಿದ್ದ. ತನ್ನದೇ ಸಮುದ
ರನ್ನೂ ಬಿಡದೇ ಕ್ಷೇತ್ರ
ದಾಯಗಳ ಜನರನ್ನು ಗ
ಕೊಂಡು ಕೊಬ್ಬಿದ ಚಿ
ಜನ ಇಂದಿಗೂ ಕ್ಷಮಿಸ
ಗಲೇ ಜನ ಅವನನ್ನು
ಪಾಠ ಕಲಿಸಿದ್ದಾರೆ. ಆದ
ಏನಾದರೂ ಮಾಡಿ ಶಾ
ಹಠ ತೊಟ್ಟಿರುವ ಈತ
ನಿಂಬೆಹಣ್ಣು ಹಿಡಿದು ಮ
ಮೊರೆ ಹೋಗಿದ್ದಾನೆ.



ಚಿಮ್ಮನಕಟ್ಟಿ

ಇದನ್ನೆಲ್ಲಾ ಚೆನ್ನಾಗಿ
ಕಾಂಗ್ರೆಸ್ ನಾಯಕರ
ಚಿಮ್ಮನಕಟ್ಟಿಗೆ ಕೊಕ್
ರಿಸಿದ್ದಾರೆ. ಅವನ ಬ
ಪರಿಷತ್ ಸದಸ್ಯ ಕ
ತರಬೇಕೆಂದು ಅವರೆಲ್ಲ
ಇದ್ದುದರಲ್ಲಿ ಕಟ್ಟಿಮನಿ
ದಕ್ಷತೆಯಿಂದ ಕೆಲಸ
ಎಂಬುದು ಜನಾಭಿಪ್ರಾ
ಬಿಜೆಪಿಯ ಪಟ್ಟಣಶೆಟ್ಟಿ
ಪೈಪೋಟಿ ನೀಡಲು
ಮಾತ್ರವೇ ಸಾಧ್ಯ ಎಂಬ
ನಾಯಕರ ಗ್ರಹಿಕೆ.
ಕಟ್ಟೀಮನಿಗೆ ಕಾಂಗ್ರೆಸ್ ಟಿಕೆಟ್ ಕೊಟ್ಟು,
ಅವ್ಯವಹಾರಗಳನ್ನು, ಡೊನೇಷನ್ ರೂಪ
ಸುಲಿಯುತ್ತಿರುವ ಶೆಟ್ಟರ್‌ನ ಸುಲಿಗೆಯ
ಬಳಸಿಕೊಂಡು ಪ್ರಚಾರ ಮಾಡಿದರೆ ಬ
ಕಮಲ ಕೆಸರು ಸೇರುವುದು ಗ್ಯಾರಂಟಿ

ಇನ್ನು ಜೆಡಿಎಸ್‌ನಲ್ಲಿ ಟಿಕೆಟ್ ಸಿಗೋ
ಎಂಬ ವದಂತಿ ಶುರುವಾಗಿದೆ. ಈ
ಚುನಾವಣೆಯಲ್ಲಿ ಸ್ಪರ್ಧಿಸಿ ಸ್ವಲ್ಪದರಲ್ಲೇ ಸ
ಲಿಂಗಾಯತ ಬಣಜಿಗ ಪಂಗಡಕ್ಕೆ ಸೇರಿ
ಅವನ ಸಮುದಾಯದ ಮತಗಳೇ
ಪ್ರಮಾಣದಲ್ಲಿಲ್ಲ. ಹೀಗಾಗಿ ಜೆಡಿಎಸ್ ಇ
ಲೆಕ್ಕಕ್ಕಿಲ್ಲ ಎಂಬ ಸ್ಥಿತಿ.

ಇದನ್ನೆಲ್ಲಾ ಚೆನ್ನಾಗಿ ಬಳಸಿಕೊಳ್ಳುವ
ಯನ್ನು ಕಾಂಗ್ರೆಸ್ ತೋರಬೇಕಷ್ಟೆ.

- ಮೇ

ಹುಬ್ಬಳ್ಳಿ ಬಿಟ್ಸ್

ಹುಬ್ಬಳ್ಳಿ ಜನರಿಗೆ ಹೊಸ ವರ್ಷದ ಕೊಡುಗೆ!

ಹುಬ್ಬಳ್ಳಿಯ 27, 28, 29, 32ನೇ ವಾರ್ಡುಗಳಲ್ಲಿ ಹಾಗೂ ಧಾರವಾಡದ 8, 9, 10, 11ನೇ ವಾರ್ಡುಗಳಲ್ಲಿ ದಿನದ 24 ಗಂಟೆಯೂ ನೀರು ಸರಬರಾಜು ಇರುವ '24 X 7' ಎಂಬ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಕುಡಿಯುವ ನೀರಿಗಾಗಿ ಪರ ದಾಡುತ್ತಿರುವ ರಾಜ್ಯದ ನಗರವಾಸಿಗಳು ಇಂತಹದ್ದೊಂದು ಯೋಜನೆಯನ್ನು ಕಲ್ಪಿಸಿ ಕೊಂಡರೇನೇ ಪುಳಕಿತರಾಗುವುದು ಸಹಜ. ಆದರೆ ಈ ಯೋಜನೆಯ ಅಸಲೀಯತ್ತನ್ನು ಒಮ್ಮೆ ನೋಡಿ.

ಈ ಯೋಜನೆಯಲ್ಲಿ ಫ್ರಾನ್ಸ್‌ನ ತಂತ್ರಜ್ಞಾನವನ್ನು ಬಳಸಲಾಗಿದೆಯಂತೆ, ವಿಶ್ವಬ್ಯಾಂಕ್ ಹಣ ಕೊಟ್ಟಿದೆಯಂತೆ, ಇದರ ಕಾಮಗಾರಿ ಗುತ್ತಿಗೆಯನ್ನು ಜೈನ್ ಇರಿಗೇಷನ್ ನವರಿಗೆ ನೀಡಲಾಗಿದೆಯಂತೆ... ಹೀಗೆ ಈ ಯೋಜನೆಯ ಬಗ್ಗೆ ಮಹಾನಗರ ಪಾಲಿಕೆಯವರು ಭಾರಿ ಬೊಂಬಡ ಹೊಡೆಯುತ್ತಿದ್ದಾರೆ. ಆದರೆ ದಿನದ ಇಪ್ಪತ್ತನಾಲ್ಕು ತಾಸು ನೀರು ಬರುತ್ತೆ ಎಂಬುದು ಕೇವಲ ಕಾಗದದ ಮೇಲೆ. ವಾಸ್ತವವಾಗಿ ಜನರ ನಲ್ಲಿಗಳು ನೀರು ಕಾಣುವುದು ವಾರದಲ್ಲಿ ಎರಡೋ ಅಥವಾ ಮೂರು ದಿನ ಮಾತ್ರ.

ನಾಲ್ಕೈದು ಜನರ ಕುಟುಂಬವೊಂದು ಈತನಕ ತಿಂಗಳಿಗೆ ಸುಮಾರು 60 ರೂ.ಗಳನ್ನು ನೀರಿಗಾಗಿ ವ್ಯಯಿಸುತ್ತಿತ್ತು. ಈಗ ಈ ಯೋಜನೆಯನ್ನು ತಂದು, ನೀರಿನ ಶುಲ್ಕವನ್ನು ಜಾಸ್ತಿ ಮಾಡಿದ್ದರಿಂದ ಅಷ್ಟೇ ಜನರ ಕುಟುಂಬ ಸುಮಾರು 300 ರೂ.ಗಳನ್ನು ವ್ಯಯಿಸಬೇಕಾಗಿದೆ. ಅದೂ ಕೂಡ ವಾರದಲ್ಲಿ ಎರಡೋ ಮೂರೋ ದಿನ ಬರುವ ನೀರಿಗಾಗಿ! ಇದು ಹುಬ್ಬಳ್ಳಿ ಜನತೆಗೆ ಮಹಾನಗರ ಪಾಲಿಕೆ ಕೊಟ್ಟ ಹೊಸ ವರ್ಷದ ಉಡುಗೊರೆ.


ಹುಬ್ಬಳ್ಳಿಯ ಮಕ್ಮಲ್ ಟೋಪಿ ವೀರ!

ಹುಬ್ಬಳ್ಳಿಯ ರೇಲ್ವೇ ಕಾರ್ಯಾಗಾರದ ಚೇತನ ಕಾಲನಿಯ ರಾಜಶೇಖರ್ ಚೆನ್ನಯ್ಯ ಎಂಬ ರೇಲ್ವೇ ಉದ್ಯೋಗಿಯು ಇಲಾಖೆಗೆ ಕಂಪ್ಯೂಟರ್ ಒದಗಿಸುವ ಗುತ್ತಿಗೆಯನ್ನು ತನ್ನ ಸೋದರ ಸಂಬಂಧಿಯ ಹೆಸರಿನಲ್ಲೇ ಪಡೆದಿದ್ದ. ಈ ಗುತ್ತಿಗೆ ಪತ್ರವನ್ನು ಕೆಲವರಿಗೆ ತೋರಿಸುತ್ತಾ "ಇದರಲ್ಲಿ ಹಣ ಹೂಡಿ, ಬೇಕಾದಷ್ಟು ಲಾಭ ಬರುತ್ತೆ" ಎಂದು ಹೇಳುತ್ತಾ, ಇನ್ನೂ ಕೆಲವರಿಗೆ "ಕಂಪ್ಯೂಟರ್‌ಗಳನ್ನು ನಾನು ಇಲಾಖೆಗೆ ಒದಗಿಸುತ್ತಿದ್ದೇನೆ, ಅವುಗಳ ನಿರ್ವಹಣಾ ಗುತ್ತಿಗೆಯನ್ನು ನಿಮಗೆ ಕೊಡಿಸುತ್ತೇನೆ" ಎಂದು ಪೂಸಿ ಹೊಡೆದು ಹಣ ಎತ್ತಿದ್ದ.

ಯಾವಾಗ ಕೈತುಂಬಾ ಹಣ ಬಂತೋ ಎಲ್ಲರಿಗೂ ಮಕ್ಮಲ್ ಟೋಪಿ ಹಾಕಿ ನವೆಂಬರ್ 28ರಂದು ತನ್ನ ಮನೆಗೆ ಬೀಗ ಜಡಿದು ಮನೆಯವರನ್ನೆಲ್ಲಾ ಕರೆದುಕೊಂಡು ಪರಾರಿಯಾಗಿದ್ದಾನೆ. ಹುಬ್ಬಳ್ಳಿಯೊಂದರಲ್ಲೇ ಸುಮಾರು ಒಂದು ಕೋಟಿ ರೂಪಾಯಿಯಷ್ಟು ಹಣ ಎತ್ತಿದ್ದಾನೆಂಬುದು ಒಂದು ಅಂದಾಜು. ಶಹರ ಠಾಣೆಯ ಅಧಿಕಾರಿ ಅಂಗಡಿ ಈ ಮಕ್ಮಲ್ ಟೋಪಿ ವೀರನನ್ನು ಹಿಡಿದು ಕಂಬಿಯೊಳಗೆ ದಬ್ಬುತ್ತಾರೋ ಅಥವಾ ಕಮೀಷನ್ ಸ್ವಾಹ ಮಾಡಿ ತಣ್ಣಗಾಗುತ್ತಾರೋ ಗೊತ್ತಿಲ್ಲ.

ಪ್ರವೀಣ್ ತೊಗಾಡಿಯಾನ ಫ್ಲಾಪ್ ಷೋ...

ಈ ಚೆಡ್ಡಿಗಳು ಯಾತ್ರೆಗಳನ್ನು ಮಾಡೋದ್ರಲ್ಲಿ ಎತ್ತಿದ ಕೈ. ಕುಳಿತಿದ್ದಕ್ಕೂ ಯಾತ್ರೆ, ನಿಂತದ್ದಕ್ಕೂ ಯಾತ್ರೆ, ಸತ್ತದ್ದಕ್ಕೂ ಯಾತ್ರೆ, ಹುಟ್ಟಿದ್ದಕ್ಕೂ ಯಾತ್ರೆ, ಸೋತದ್ದಕ್ಕೂ ಯಾತ್ರೆ, ಗೆದ್ದದ್ದಕ್ಕೂ ಯಾತ್ರೆ. ಕೊನೆಗೆ ಯಾರಾದರೂ ಅಲ್ಪಸಂಖ್ಯಾತರು ಗಟ್ಟಿಯಾಗಿ ಹೂಸು ಬಿಟ್ಟರೆ ಎಂದು ಆರೋಪಿಸಿ ಅದಕ್ಕೂ ಒಂದು ಯಾತ್ರೆ ಮಾಡಿದರೂ ಆಶ್ಚರ್ಯವಿಲ್ಲ. ಅದಿರಲಿ, ಇವರು ಈಗ 'ರಾಮಸೇತು ಶಿಲಾ ಯಾತ್ರೆ' ಅಂತ ಮತ್ತೊಂದು ಯಾತ್ರೆಯನ್ನು ಶುರುಹಚ್ಚಿಕೊಂಡಿದ್ದಾರೆ. ಈ ಯಾತ್ರೆಯ ಉದ್ದೇಶ ಏನೆಂದರೆ, ಶ್ರೀರಾಮನೇ 17,50,000 ವರ್ಷಗಳ ಹಿಂದೆ (ನೆನಪಿರಲಿ ಆ ಮಾನವ ಎಂಬ ಜೀವಿಯೇ ಭೂಮಿಯ ಮೇಲೆ ಹುಟ್ಟಿರಲಿಲ್ಲ) ನಿರ್ಮಾಣ ಮಾಡಿದ ಭಾರತ ಮತ್ತು ಶ್ರೀಲಂಕಾಗಳ ನಡುವಿನ 'ಸೇತುವೆ'ಯನ್ನು ಸರ್ಕಾರ ನಾಶಗೊಳಿಸುತ್ತಿದೆ ಎಂಬ ಕಾಗಕ್ಕ-ಗುಬ್ಬಕ್ಕನ ಕಥೆಯನ್ನು ಹೇಳುತ್ತಿದ್ದಾರಲ್ಲ ಆ ಕಥೆಯನ್ನು ದೇಶದಾದ್ಯಂತವೂ ಜೋರಾಗಿ ಕಿರುಚಿ ಬೆಂಕಿ ಹಚ್ಚುವುದು.



ಮೊನ್ನೆ ಡಿಸೆಂಬರ್ 15ರಂದು ಈ ಯಾತ್ರೆ ಹುಬ್ಬಳ್ಳಿಗೆ ಬಂದಿತ್ತು, ಅದರ ನೇತೃತ್ವವನ್ನು ಗುಜರಾತ್‌ನ ನರಹಂತಕ ಪ್ರವೀಣ್ ತೊಗಾಡಿಯ ವಹಿಸಿದ್ದ. ಮೊದಲಿನಿಂದಲೂ
ಹುಬ್ಬಳ್ಳಿಯಲ್ಲಿ ಈದ್ಗಾ ಮೈದಾನ ವಿವಾದ
ಈ ವಿವಾದ ಅಂತ ಚೆಡ್ಡಿಗಳು ಭಾರಿ
ಮಾಡಿ ಅಲ್ಪಸಂಖ್ಯಾತರ ರಕ್ತ ಹರಿಸಿ
ಯಾತ್ರೆಗೆ ಭಾರಿ ಜನಸ್ತೋಮ ಸೇರುತ್ತದೆಂ
ತೊಗಾಡಿಯ ಎಣಿಸಿದ್ದ. ಆದರೆ, ಅವನ
ಉಲ್ಟಾಪಲ್ಟಾ ಆಗಿ ಕೇವಲ ಬೆರಳೆಣಿಕೆ
ಸೇರಿದ್ದರು. ಬಿಜೆಪಿ-ಸಂಘಪರಿವಾರದ
ಅಜೆಂಡಾಗಳ ಹಿಂದಿರುವ ನೈಜ ದುರ
ಹುಬ್ಬಳ್ಳಿಯ ಜನ ನಿಧಾನವಾಗಿಯಾ
ಮಾಡಿಕೊಂಡಿದ್ದು ಒಂದೆಡೆಯಾ
ಯೊಳಗೇನೇ ಅನಂತೂ- ಯ
ಇನ್ನೊಂದೆಡೆ. ಇದೆಲ್ಲದರ ಸ
ಪರಿವಾರದೊಳಗೇನೇ
ಮುತಾಲಿಕ್‌ನ ಬಂಡಾಯ
ಇವೆಲ್ಲ ಸೇರಿ ಯಾತ್ರೆಯ
ಮಾಡಿಬಿಟ್ಟಿದ್ದವು.

ಆದರೂ ಪ್ರವೀಣ್ ತ
ಸಪ್ಪೆ ಮೋರೆ ಹಾಕಿಕೊಂಡ
ಮರಗಳಿಗೆ, ಬಿಲ್ಡಿಂಗುಗಳಿಗೆ ತನ್ನ ಹರುಕು ಬ
ಭಾಷಣ ಕೊರೆದು ಬಾಯಿಚಪಲ ತೀ
"ರಾಮ ಅಸ್ತಿತ್ವದಲ್ಲೇ ಇರಲಿಲ್ಲ ಎಂದ
ಹೇಳುತ್ತಿದ್ದಾರೆ. ಹಾಗಿದ್ದರೆ, ಗಾಂಧಿ ಸಾಯ
ರಾಮ್ ಅಂತ ಯಾಕೆ ಹೇಳಿದರು?"
ಕೇಳಿದ. ಈ ಪ್ರಶ್ನೆಯನ್ನು ಗಾಂಧಿಗೆ ಕೆ
ಬಿಟ್ಟು ನಮಗೇಕೆ ಕೇಳುತ್ತಿದ್ದಾನೆಂಬುದು ವ
ಯಾರಿಗೂ ಅರ್ಥವಾಗಲಿಲ್ಲ!

ಗುಂಪಿನ ಶಕ್ತಿಯೇ ಅದರ ನಾಯಕನ ಶಕ್ತಿಯಾಗಿರುತ್ತದೆ -ರೆಡ್ ಬ್ಲೇಕ್

ಎಲ್ಲಣ್ಣ ಇನ್ನೂ ಬೆತ್ತಲಾಗಿಯೇ ಇದ್ದ. ನಿಜವಾಗಿ ನಿಸರ್ಗದ ಕೂಸಾಗಿದ್ದ. ಬೆತ್ತಲೆ ಎಲ್ಲಣ್ಣ ಆಟವಾಡೋ ಬೆಳಕು ಮುಸ್ಸಂಜೆಯೋ ಕತ್ತಲು. ಹರಿದ ಹೊದ್ದಿಕೆಯಲ್ಲಿನ ತೂತುಗಳ ತರಹ ನಕ್ಷತ್ರಗಳು. ಮರಳ ಗುಡ್ಡಗಳು. ಯಾವುದೂ ಒಂಟಿಯಲ್ಲ, ಎಲ್ಲಾ ಒಟ್ಟೊಟ್ಟಿಗೇ ಇವೆ. ಎಲ್ಲವೂ ಸೇರಿಯೇ ಪ್ರಕೃತಿ-ಚಲನ. ಈ ಚಲನೆಗೆ ಮೈಲಿಗೆ ಅನ್ನೋದಿಲ್ಲ, ಬೆರೆತುಹೋಗಿರುವ ಪ್ರಕೃತಿಯಲ್ಲಿ ಅಸ್ಪೃಶ್ಯತೆ ಅನ್ನೋದಿಲ್ಲ. ಈ ಚಲನೆಯಲ್ಲಿ ಜಾತಿ ಇಲ್ಲ. ಅವರೊಳಗಿನ ನಾಲಕ್ಕು ವಿಭಾಗಗಳು, ಹೊರಗೆ ಹಾಕಲ್ಪಟ್ಟಿರುವ ಪಂಚಮ ಇನ್ನಾವುದೂ ಇಲ್ಲ. ನೂರಾರು ಉಪಜಾತಿಗಳಿಲ್ಲ. ಆ ಜಾತಿಗಳಿಗಂಟಿಕೊಂಡಿರುವ ಗೌರವಗಳು, ಸ್ಥಾನ-ಮಾನಗಳು, ಅವಮಾನ, ನೀಚತನಗಳು ಯಾವುದೂ ಇಲ್ಲ. ಈ ಚಲನೆಯು ಹೇಯವಾದದ್ದೂ ಅಲ್ಲ. ಈ ಚಲನೆಯು ಅನ್ಯಾಯಯುತವಾದದ್ದೂ ಅಲ್ಲ.

ತನ್ನ ಸುತ್ತಲೂ ಕವಿದು ತನ್ನನ್ನು ಕಾಪಾಡುತ್ತಿರೋ ಕತ್ತಲು; ಸ್ವತಂತ್ರನಾದಂತೆ ಅನಿಸುತ್ತಿದೆ. ಹಸಿವು, ಅತ್ತೆ ಎರಡೂ ತನ್ನಿಂದ ದೂರ ಹೋಗ್ತಾ ಇದ್ದಂತಿದೆ. ತನ್ನ ಎದೆಯಾಳದಿಂದ ತನ್ನ ಸ್ವೇಚ್ಛೆಯನ್ನು ಬಹಿರಂಗಗೊಳಿಸುವ ಪ್ರಕಂಪನಗಳು ಉಮ್ಮಳಿಸಿಕೊಂಡು ಬರುವಂತೆ ಅನಿಸುತ್ತಿದೆ. ಆ ಪ್ರಕಂಪನ ಹಾಡಾಗಿರಬಹುದು. ಆ ಹಾಡು ಭಯವೂ ಆಗಿರಬಹುದು. ಹಸಿವಾಗಿರಬಹುದು... ಅತ್ತೆಯೂ ಆಗಿರಬಹುದು. ಎಲ್ಲಕ್ಕಿಂತ ಹೆಚ್ಚಾಗಿ ತನಗೆ ಈಗಷ್ಟೇ ಸಿಕ್ಕಿರುವ ಸ್ವಾತಂತ್ರ್ಯದ ಉದ್ಗಾರವೂ ಆಗಿರಬಹುದು. ಈಗ ಎಲ್ಲಣ್ಣ ಕತ್ತಲಿನ ಜೊತೆ ಮಾತ್ರ ಅಲ್ಲ, ಹಾಡಿನ ಜೊತೆಯಲ್ಲಿ ನಡೆಯುತ್ತಿದ್ದಾನೆ.

ಗಾಳಿಗೊಂದು ಸಹಜತೆ ಇದೆ. ತಾನು ಸುಳಿದ ಕಡೆ ಸೋಕಿದ ಕಡೆ ತನ್ನ ಭಾವವನ್ನು ಸ್ವಚ್ಛವಾಗಿ ಮತ್ತು ಅಚ್ಚು ಅದೇ ರೀತಿಯಲ್ಲಿ ಮುದ್ರಿಸುತ್ತದೆ. ಎಲ್ಲಣ್ಣನ ಹಾಡೂ ಅಷ್ಟೇ, ಸಹಜವಾಗಿ ಹುಟ್ಟುತ್ತೆ, ಬೆಳೆಯುತ್ತೆ. ಹಾಡು ಎಲ್ಲಣ್ಣನನ್ನು ನಡೆಸುತ್ತೋ, ಹಾಡಿನ ಜೊತೆ ಅವನು ನಡೀತಾನೋ ಹೇಳಕ್ಕೆ ಆಗಲ್ಲ, ತಿಳಿಯಲು ಇಷ್ಟ ಹಾಡು ನಿಲ್ಲಿಸಿದ ಎಲ್ಲಣ್ಣ.

ದೂರದ ಆ ಲಯಬದ್ಧ ಶಬ್ದ ಹತ್ತಿರವಾಗ್ತಾ ಇದೆ. ಇದುವರೆಗೂ ಕಾಣದಂತಿದ್ದ ಬೆಳಕು ಈಗ ಹರಡುತ್ತಾ ಹತ್ತಿರಕ್ಕೆ ಬರ್ತಿದೆ. ಈಗ ಬೆಳಕು ತಾಳೆಮರಗಳ ನಡುವೆ ಇಲ್ಲ, ಊರಿನಾಚೆ ಬೆಂಕಿಯ ಹಾಗೆ ಇದೆ. ಅದರ ಸುತ್ತಾ ಊರ ಜನ. ಎಲ್ಲಣ್ಣ ತನಗೇ ತಿಳಿಯದಂತೆ ಜೋರಾಗಿ ನಡೆಯತೊಡಗಿದ. ಅವರ ಮಾತು, ಹಾಡು, ಬೆಳಕು ಎಲ್ಲವೂ ಒಂದಕ್ಕೊಂದು ಹೆಣೆದುಕೊಂಡು ಹತ್ತಿರವಾಗುತ್ತಿವೆ. ಆ ಶಬ್ದಗಳ ನಡುವಿನ ಬೆಳಕಿನ ಜಾಲಗಳು ಘರ್ಜಿಸುತ್ತಿರುವ ಮೋಡಗಳ ನಡುವೆ ಬಿರುಕೊಡೆಯುತ್ತಿರುವ ಮಿಂಚುಗಳಂತಿವೆ. ಎಲ್ಲಣ್ಣನನ್ನು ಆವೇಶವೇ ನಡೆಸುತ್ತಿದೆ. ಅದು ನದಿಗೆಂತಲ್ಲ, ಅದು ಓಟ. ಬಿಡದಾಗಿ ಉಕ್ಕೇರುತ್ತಿರುವ ತಲೆ ತಲಾಂತರಗಳ ತಳಮಳ. ಕಲಾವಿದನೊಬ್ಬನ ಎದೆಯಾಳದ ಮಿಡಿತ.

ಆ ಜನಕ್ಕೆ, ತೀರಾ ಹತ್ತಿರವಾಗಿದ್ದ, ಅದೊಂದು ಅದ್ಭುತ ದೃಶ್ಯ. ಆ ಬೆಂಕಿಯ ಸುತ್ತಲೂ ಪ್ರಳಯವೇ ನರ್ತಿಸ್ತಾ ಇದೆ. ಉದ್ವೇಗ, ಗುಡುಗು, ಮಿಂಚು, ಮೋಡ, ಎಲ್ಲೋ ಬಡಿದು ಮತ್ತೆಲ್ಲೋ ಸಿಡಿಲು ಬಿದ್ದ ಹಾಗೆ ಭೀಭತ್ಸ ಸನ್ನಿವೇಶ. ಎಲ್ಲಣ್ಣನ ಎಳೆಯ ಗುಂಡಿಗೆಯಲ್ಲಿ ಅಲ್ಲೋಲಕಲ್ಲೋಲ. ಬೆಂಕಿಯ ಸುತ್ತಲೂ ಕೂತಿದ್ದ ಜನರ ನಡುವೆ ನುಗ್ಗಿದ. ಹಾಗೆ ನುಗ್ಗಿದವನು ಬೆಂಕಿಯ ಶಾಖ ಮೈಗೆ ತಗಲುವಷ್ಟು ದೂರದಲ್ಲಿ ಕೂತ. ಹತ್ತಿರದಲ್ಲಿಯೇ ಪ್ರಳಯ ಕಾಣಿಸ್ತಿದೆ. ಕೇಳಿಸ್ತಿದೆ.

ಎಲ್ಲಣ್ಣನ ಕಣ್ಣಿನಲ್ಲಿ ಆವೇಶ. ಆವೇಶ ತುಂಬಿದ ಕಣ್ಣುಗಳಿಂದಲೇ ಗುಡುಗುತ್ತಾ ಪ್ರಳಯ ಗರ್ಜನೆ ಮಾಡುತ್ತಾ ನರ್ತಿಸ್ತಿದ್ದ ಜನರನ್ನ ತುಂಬಿಕೊಂಡ. ಅವರ ವೇಷಗಳು, ತನ್ನ ಊರಿನ ನರಸಿಂಹ ಸ್ವಾಮಿಯ ವೇಷಕ್ಕಿಂತಲೂ ಚೆನ್ನಾಗಿದ್ದವು. ಚೆಂಚುಲಕ್ಷ್ಮಿಯ ವೇಷಕ್ಕಿಂತಲೂ ಚೆನ್ನಾಗಿದೆ. ತಲೆಗೆ ಸುತ್ತಿದ ಬಣ್ಣಬಣ್ಣದ ರುಮಾಲುಗಳು, ಕತ್ತಿನಲ್ಲಿ ಕಾಸಿನ ಸರಗಳು, ಹೊದ್ದಿರುವ ಶಾಲುಗಳು, ಕೆಂಪು ಹಸಿರು ಬಣ್ಣದ ನಿಲುವಂಗಿಗಳು, ತಮಟೆಗಳಿಗೆ ಸುತ್ತಿದ್ದ ಚರ್ಮದ ಮೇಲೆ ಒಂದು ಕಡೆ ಕಡ್ಡಿಯಿಂದ ಹೊಡೆತ, ಮತ್ತೊಂದು ಕಡೆ ಜರಾಜರಾ ಶಬ್ದ. ಒಟ್ಟಾರೆಯಾಗಿ ಪ್ರಚಂಡ ಘೋಷ. ವಲಯ ವಿನ್ಯಾಸ. ಅತಿಭಯಂಕರ ಶಬ್ದ. ಅತಿಗಂಭೀರ ನೃತ್ಯ. ಹೊಲೆಯರ ತಮಟೆಯ ಕುಣಿತ.

ನೋಡನೋಡುತ್ತಿದ್ದಂತೆಯೇ ಎಲ್ಲಣ್ಣನ ಪಾದಗಳ ಬೆರಳುಗಳು ಕದಲತೊಡಗಿದ್ದವು. ಆ ಕದಲುವಿಕೆ ಪಾದಗಳಿಗೆ ಹರಡಿತು. ಕಾಲುಗಳು ನೆಲದ ಮೇಲೆ ನಿಲ್ಲುತ್ತಿಲ್ಲ. ಏನೋ ಆವೇಶ. ಏನೋ ತಳಮಳ. ಇದ್ದಕ್ಕಿದ್ದಂತೆ ಶಬ್ದ ನಿಂತಿತು. ಎಲ್ಲಣ್ಣನ ಗುಂಡಿಗೆಯೂ ಒಂದೇ ಸಾರಿ ನಿಂತಂತಾಯಿತು.


ಹಾಡು ಶುರುವಾಯಿತು. ತಮಟೆಯವರು ಹಾಡತೊಡಗಿದರು. ಗೀತಗಂಗೆ ಹರಿಯಿತು. ಇದುವರೆಗೂ ನೀರನ್ನು ಕಾಣದ ಗಂಗೆ, ಪಸೆಯಾರಿರುವ ಗಂಗೆ, ನೀರಿಗಾಗಿ ಆರ್ತವಾಗಿರುವ ಗಂಗೆ, ಬತ್ತಿ ಹೋಗಿರುವ ಗಂಗೆಯಲ್ಲೂ ಹೊಸ ಗಂಗೆ ಹುಟ್ಟಬೇಕು. ಬಿರುಕು ಬಿಟ್ಟು ದುಃಖದಲ್ಲಿರುವ ಭೂಮಿ ಆ ನೀರನ್ನು ಗಟಗಟ ಕುಡಿಯಬೇಕು. ಗಂಗೆ ತುಂಬಬೇಕು. ಗಂಗೆ ತುಂಬಿ ಹರಿಯಬೇಕು. ಗಂಗೆ ಎಲ್ಲ ಲೋಕಗಳನ್ನ ಮುಟ್ಟಬೇಕು. ಅದುವರೆಗೂ ಗುಡುಗು ನಿಲ್ಲದು. ನೃತ್ಯ ನಿಲ್ಲದು, ಹಾಡು ನಿಲ್ಲದು. ಹಾಡು ಹರಿದುಹೋಗುತ್ತಲೇ ಇದೆ. ಯುಗವೊಂದು ಹುಟ್ಟಬೇಕು. ಜಗತ್ತೊಂದು ಹುಟ್ಟಬೇಕು. ಗಂಗೆ ಮಾತ್ರ ಹುಟ್ಟಿದ್ದಳು. ಆ ಮಾಯಾವಿ ಗಂಗೆ. ಸುಪಣಾತಿ ಗಂಗೆ. ಅದು ಹೆ... ತಿನ್ನುವ ಪಿಶಾಚಿ. ಬಯ್ಗುಳು, ಶಾಪ, ಕೋಪ, ಎಲ್ಲ ಗಂಗೆಯ ಮೇಲೆ, ಅದಳಿಗಾಗಿ. ತೊಟ್ಟು ನೀರಿಗಾಗಿ ಕುಡಿಯಲು, ಭೂಮಿ ತಣಿಯಲು. ಆದರೂ [illegible] ಮೊದಲೇ ಹುಟ್ಟಿದ ಗಂಗೆ, ಭೂಮಿ ಎಲ್ಲಾ ಆವರಿಸಿದ ಗಂಗೆ. ಒಂದು ಮಾತಂತೂ

ಕೊಟ್ಟಿದ್ದಳು. ಮನುಷ್ಯರಿಗೆ ಮಾತು ಕೊಟ್ಟಿದ್ದಳು ಹಿರಿಯರಿಗೆ ಕೊಟ್ಟ ಮಾತು. ಕಿರಿಯರಿಗೂ ಕೊಟ್ಟ ಮಾತೇ ಅಂದಳು. ಕಿರಿಯರಿಗೆ ಕೊಟ್ಟ ಮಾತೇ ಶಿಶು ಬಾಲರಿಗೂ ಕೊಟ್ಟ ಮಾತೆಂದಳು. ಹಾಡು ಹರಿಯುತ್ತಲೇ ಇದೆ. ಗಂಗೆಯ ಬಗ್ಗೆ, ಅವಳ ಮಾತಿನ ಬಗ್ಗೆ, ಅವಳ ಹುಟ್ಟಿನ ಬಗ್ಗೆ.

ಮಧ್ಯದಲ್ಲಿ ಸ್ವಲ್ಪ ವಿರಾಮ.

ಆ ವಿರಾಮದ ನಿಶ್ಶಬ್ದವನ್ನ ಒಡೆಯುತ್ತಾ ಮತ್ತೆ ಭಯಂಕರ ಶಬ್ದ, ಮುಗಿಯುವ ಹೊತ್ತಿಗೆ ಮುಗಿಬೀಳುವ ಶಬ್ದ. ಆ ಶಬ್ದವನ್ನ ಹೀರಿಕೊಳ್ಳುವ ಲಯಬದ್ಧ ನೃತ್ಯ. ವಲಯಾಕಾರದಲ್ಲಿ, ಕಾಲುಗಳನ್ನು ಹೆಣೆದುಕೊಳ್ಳುತ್ತಾ, ಇಡೀ ಶರೀರವನ್ನು ತೂರಾಡುತ್ತಾ, ಮೇಲಕ್ಕೆ ಹಾರುತ್ತಾ, ವೀರರಾಗಿ, ಗಂಗೆಯನ್ನು ಭೂಮಿಗೆ ತರುವ ಶ್ರಮಿಕರಾಗಿ. ಒಂದೊಂದು ಶಬ್ದಕ್ಕೆ ಒಂದೊಂದು ಹಾರಾಟ. ಒಂದೊಂದು ಹಾರಾಟಕ್ಕೆ ಒಂದೊಂದು ಕೂಗು. ಉಧೃತವಾದ, ವಿಜೃಂಭಿಸಿದ ಕುಣಿತ, ಎಲ್ಲಾ ಪ್ರಳಯ. ನಿಲ್ಲುತ್ತದೆ. ನಿಲ್ಲುತ್ತಲೇ ಶುರುವಾಗುತ್ತದೆ. ಎಲ್ಲಣ್ಣನಿಗೆ ತಡೆಯಲಾಗ್ತಿಲ್ಲ. ಎನ್ನೆಲದಿನ್ನೆ ಎಲ್ಲಿ

ಬಾಲಶಿವನ ಪ್ರಳಯ ನೃತ್ಯ



ವಿಜೃಂಭಿಸಿದ ನಾಟ್ಯದ ಹೊಡೆತಕ್ಕೆ ತಾಳಲಾರದ ಕೆಲವರು ದುರ್ಬಲರು ಆ ನೃತ್ಯವಲಯದಿಂದ ಹೊರನಡೆಯುತ್ತಿದ್ದಾರೆ. ಎಲ್ಲಣ್ಣ ಹಿಂದಕ್ಕೆ ಸರಿಯಲಿಲ್ಲ. ಮುಂದೆ ಬಂದ. ಕುಣಿಯುತ್ತಿದ್ದ ಆ ಗುಂಪಿನಲ್ಲಿ ನುಗ್ಗಿ ಬಹಳ ಮುಂದೆ ಬಂದಿದ್ದ. ಅವನಿಗೆ ದಣಿವಾಗಿರಲಿಲ್ಲ. ಹರೋಹರ, ಹರಹರಹರ ಅಂತ ಕೂಗುತ್ತಲೇ ಇದ್ದ. ಎದೆಯಾಳದಿಂದ ಬಂದ ಕೂಗು ಅದು-ಹರೋಹರ, ಹರಹರಹರ. ಕೂಗು ನಿಂತಿತು. ತಮಟೆಯ ನಾಗನ್ನ ಆ ಕೂಗು ಕೇಳಿ ನಿಂತ. ನಿಂತು ಕೂಗಿನ ಕಡೆಗೆ, ಕೂಗಿದ ಎಲ್ಲಣ್ಣನ ಕಡೆಗೆ ನೋಡಿದ. ಶಬ್ದಕ್ಕಿಂತಲೂ ನಿಶ್ಶಬ್ದ ಭಯಾನಕವಾಗಿತ್ತು. ಎಲ್ಲಣ್ಣ ಬೆತ್ತಲೆ ಶಿವನಾದಂತಿದ್ದ. ತೀಕ್ಷ್ಣವಾಗಿ ಸುತ್ತಲೂ ನೋಡುತ್ತಿದ್ದ. ತಲೆಯ ಮೇಲೆ ಬೇವಿನ ಸೊಪ್ಪಿನ ಹೊರೆ. ಮೈತುಂಬಾ ಜನ ಚೆಲ್ಲಾಡಿದ್ದ ಕುಂಕುಮದ ನೆತ್ತರು.

ಹೋಯಿತೊ! ಭೂದೇವಿ, ಬೆನ್ನ ಮೇಲೆ ಬಾಸುಂಡೆಗಳು ಯಾವೂ ನೆನಪಿಲ್ಲ, ಪ್ರಾಣಭಯ, ಓಟ, ಹೊಳೆಯಲ್ಲಿನ ರಕ್ತ ತುಂಬಿದ ನೀರು.... ಗುರುತಿಲ್ಲದ ಜಾಗದಲ್ಲಿ ಓಡಾಟ, ಕತ್ತಲು, ಹಸಿವು, ಅತ್ತೆ, ಅವಳು ಹೇಳಿದ ಕಥೆಗಳು, ಮೇಲಿನ ಚುಕ್ಕಿಗಳು... ಎಲ್ಲವನ್ನೂ ಮರೆತ. ತನ್ನ ಮುಂದೆ ತನ್ನದಾದ ಏನೋ ನಡೀತಿದೆ. ತನ್ನ ತಲೆಯ ಮೇಲೆ ಒಂದು ಬಣ್ಣದ ರುಮಾಲು, ಕತ್ತಲಿನಲ್ಲಿ ಇಳಿಬೀಳುವ ಶಾಲು, ನಿಲುವಂಗಿ, ಕಂಠದಲ್ಲಿ ಗುಡುಗು. ಒಂದು ಉತ್ಕಟವಾದ ಭಾವನೆ.

ಜಿ. ಕಲ್ಯಾಣರಾವ್‌ರವರ ಅಸ್ಪೃಶ್ಯ ವಸಂತ 5

ಅನುವಾದ: ಪ್ರೊ. ನಗರಗೆರೆ ರಮೇಶ್

ಮುಂದೆ ಕುಂಕುಮದಾಟ ಶುರುವಾಯಿತು. ಬಾವಿಯ ನೀರು ಸೇದಿ ತಲೆಯ ಮೇಲಿಂದ ಸುರಿದುಕೊಂಡವರು. ನವಿಲುಗರಿಗಳ ಕಟ್ಟು ಎರಡೂ ಕೈಯಲ್ಲಿ ಹಿಡಿದು ತಲೆಯ ಮೇಲೆ ಇಟ್ಟುಕೊಂಡವರು. ಕಣ್ಣು ಮುಚ್ಚಿ ತಮಟೆಯ ಅರ್ಭಟವನ್ನ ಕೇಳ್ತಾ ಇರೋರು. ಎದೆಯ ಮೇಲೆ ಅರಿಸಿನ, ಹಣೆಯ ಮೇಲೆ ಕುಂಕುಮ ತೀಡಿದವರು. ತೀಡಿ ತೂರಾಡುತ್ತಿರುವವರು. ಆ ಶಬ್ದ ತಮ್ಮಲ್ಲಿ ಹುಟ್ಟಿಸುವ ಆವೇಶವನ್ನ ಇದುವರೆಗೂ ತಡೆ

ಬಂದವರು.... ಮುಸ್ಸಂಜೆ ಜನ. ಶೂದ್ರ ಜನ, ಅಸ್ಪೃಶ್ಯ ಜನ, ಹೊಲೆಮಾದಿಗರು. ಕುಂಕುಮ ಎಲ್ಲ ಕಡೆ ಹರಡುತ್ತಿದ್ದರೆ ಹರೋ ಹರೋ, ಹರೋಹರ ಹರಹರಹರ ಅಂತ ಕೂಗುತ್ತಾ ಮೈಮೇಲೆ ಬಂದ ಶಿವನೇ ಆಡಿದಂತೆ ಆಡುತ್ತಾ, ಹಾರಾಡುತ್ತಾ... ಕುಂಕುಮದಾಟ. ಅದೊಂದು ರುದ್ರಭಯಂಕರ ದೃಶ್ಯ. ರಕ್ತಸಿಕ್ತವಾದ ನಾಟ್ಯ. ಯುದ್ಧವೇ ನಡೆಯುತ್ತಿದ್ದಂತೆ. ಪ್ರಪಂಚವೆಂಬುದು ರಣರಂಗವಲ್ಲದೆ ಮತ್ತೇನೂ ಅಲ್ಲವೆಂಬಂತೆ. ಕಠಾರಿಗಳಿಂದ ಎದೆಗಳಿಗೆ ಹೊಡೆದುಕೊಳ್ಳುತ್ತಾ... ಗಂಗೆಗಾಗಿ, ಒಂದು ಗುಟುಕಿಗಾಗಿ, ಭಾವನೆಗಳು, ಆವೇದನೆಗಳು, ವಿವಿಧ ಭಂಗಿಗಳು. ಅವೆಷ್ಟೋ ಶಿವನು ರುದ್ರತಾಂಡವ ಮಾಡುತ್ತಿರುವಂತೆ. ಭ್ರಮೆ, ವಾಸ್ತವ, ನೃತ್ಯ ಯುದ್ಧ ಭೀಭತ್ಸ, ಜೀವನ. ಒಂದು ನಾಟ್ಯವಾಗಿ, ಒಂದು ಗೀತೆಯಾಗಿ.... ತಮಟೆ ಕುಣಿತ.

ಅಸ್ಪೃಶ್ಯ ಜನರ ಮಹೋನ್ನತ ವಸಂತವದು. ಎಲ್ಲವೂ ಕಳುವಾದಂತೆ. ತಮ್ಮ ಭೂಮಿ, ತಮ್ಮ ಬದುಕು, ಎಲ್ಲವೂ ಕಳುವಾದಂತೆ. ಕದಿಯಲ್ಪಟ್ಟು ದೇವಾಲಯದಲ್ಲಿ ನೃತ್ಯವಾಗಿ ಮೇಲ್ಜಾತಿಗಳು ಬಚ್ಚಿಟ್ಟುಕೊಂಡ ತಮಟೆಯ ಲಯವಿನ್ಯಾಸ.... ಅಟ್ಟಹಾಸ, ಅಸ್ಪೃಶ್ಯ ವಸಂತ.

ವಿಜೃಂಭಿಸಿದ ನಾಟ್ಯದ ಹೊಡೆತಕ್ಕೆ ತಾಳಲಾರದ ಕೆಲವರು ದುರ್ಬಲರು ಆ ನೃತ್ಯವಲಯದಿಂದ ಹೊರನಡೆಯುತ್ತಿದ್ದಾರೆ. ಎಲ್ಲಣ್ಣ ಹಿಂದಕ್ಕೆ ಸರಿಯಲಿಲ್ಲ, ಮುಂದೆ ಬಂದ. ಕುಣಿಯುತ್ತಿದ್ದ ಆ ಗುಂಪಿನಲ್ಲಿ ನುಗ್ಗಿ ಬಹಳ ಮುಂದೆ ಬಂದಿದ್ದ. ಅವನಿಗೆ ದಣಿವಾಗಿರಲಿಲ್ಲ. ಹರೋಹರ, ಹರಹರಹರ ಅಂತ ಕೂಗುತ್ತಲೇ ಇದ್ದ. ಎದೆಯಾಳದಿಂದ ಬಂದ ಕೂಗು ಅದು-ಹರೋಹರ, ಹರಹರಹರ. ಕೂಗು ನಿಂತಿತು. ತಮಟೆಯ ನಾಗನ್ನ ಆ ಕೂಗು ಕೇಳಿ ನಿಂತ. ನಿಂತು ಕೂಗಿನ ಕಡೆಗೆ, ಕೂಗಿದ ಎಲ್ಲಣ್ಣನ ಕಡೆಗೆ ನೋಡಿದ. ಶಬ್ದಕ್ಕಿಂತಲೂ ನಿಶ್ಶಬ್ದ ಭಯಾನಕವಾಗಿತ್ತು. ಎಲ್ಲಣ್ಣ ಬೆತ್ತಲೆ ಶಿವನಾದಂತಿದ್ದ. ತೀಕ್ಷ್ಣವಾಗಿ ಸುತ್ತಲೂ ನೋಡುತ್ತಿದ್ದ. ತಲೆಯ ಮೇಲೆ ಬೇವಿನಸೊಪ್ಪಿನ ಹೊರೆ. ಮೈತುಂಬಾ ಜನ ಚೆಲ್ಲಾಡಿದ್ದ ಕುಂಕುಮದ ನೆತ್ತರು.

ತಮಟೆ ನಾಗನ್ನ ಹಾಗೆ ನೋಡುತ್ತಲೇ ಇದ್ದ. ತನ್ನ ಮುಂದೆ ನಿಂತಿದ್ದ ಬಾಲ ಶಿವನತ್ತ ದಿಟ್ಟಿಸಿ ನೋಡಿದ. ಶಿವನ ಮೂರನೇ ಕಣ್ಣನ್ನ ಆ ಬಾಲ ಶಿವನ ಎರಡು ಕಣ್ಣುಗಳಲ್ಲಿ ನೋಡಿದ. ಬಾಲ ಶಿವನ ಪಾದಗಳ ಕಡೆ ನೋಡಿದ. ತೀಡಿ ತಿದ್ದಿದಂತೆ ಸುಂದರವಾಗಿ, ಅದ್ಭುತವಾಗಿ, ನಾಟ್ಯಕ್ಕಾಗಿಯೇ ಹೇಳಿ ಮಾಡಿಸಿದ ಪಾದಗಳಂಥಾ ಪಾದಗಳು. ನೋಡುತ್ತಾ ನೋಡುತ್ತಾ ತಮಟೆ ಬಾರಿಸುವವರ ಕಡೆಗೆ ಕೈಸನ್ನೆ ಮಾಡಿದ. ಮತ್ತೆ ಶಬ್ದ ಲಯಬದ್ಧವಾಯಿತು. ನಾಟ್ಯ ಬಾಲ ಶಿವನ ರೂಪು ತಳೆಯಿತು. ನೆಲವನ್ನು ಮುಟ್ಟುತ್ತಾ ಎತ್ತರಕ್ಕೆ ಜಿಗಿಯುತ್ತಾ ಸುಂದರವಾದ ಆ ಪಾದಗಳು, ತೂರಾಡುವ ನಡುವು. ತನ್ನ ಸ್ಪಂದನೆಯನ್ನ ಸುತ್ತಲೂ ಪಸರಿಸುತ್ತಿರೋ ಆ ದೊಡ್ಡ ಕಣ್ಣುಗಳು, ನೆಟ್ಟಗೆ, ಗೆರೆ ಹಾಕಿದಂತಿದ್ದ ಮೂಗು. ಶಿವ.... ಬಾಲಶಿವ. ಶಿವನ ಬಣ್ಣ ಕಪ್ಪು, ಶಿವನೇ ಎಲ್ಲಣ್ಣ, ಎಲ್ಲಣ್ಣನೇ ಶಿವ.

ತಮಟೆಯ ನಾಗನ್ನ ಹಾಗೆ ನೋಡುತ್ತಲೇ ಇದ್ದ.

'ಯಾರು ನೀನು ಮಗಾ?' ಕೇಳಿದ. 'ಎನ್ನೆಲದಿನ್ನೆಯ ಹೊಲೆಯ ನಾನು.' ಹೇಳಿದ ಬಾಲಶಿವ.

'ಹೆಸರು?'

'ಎಲ್ಲಣ್ಣ.'

ಮತ್ತೆ ಶಬ್ದದ ಆರ್ಭಟ. ಬಾಲ ಶಿವನು ಆಡಿ ಆಡಿ ಆಯಾಸಗೊಳ್ಳುವವರೆಗೂ ಶಬ್ದ. ತಮಟೆಯ ಶಬ್ದ ಕೇಳಿಸುತ್ತಲೇ ಇತ್ತು. ಮಂಗಳ ಹಾಡಿದ ನಂತರ, ಗಂಗೆಗೆ ಅಂತಿಮ ನಮಸ್ಕಾರ ಮಾಡಿದ ಮೇಲೆ ಶಬ್ದ ಪೂರ್ತಿಯಾಗಿ ನಿಂತಿತು. ಪ್ರಳಯದ ನಂತರ ಎಲ್ಲವೂ ಪ್ರಶಾಂತ. ಈಗ ಎಲ್ಲಣ್ಣ ತಮಟೆಯ ನಾಗನ್ನನ ಎದೆಯ ಮೇಲೆ ಮಲಗಿ ಅವನ ಭುಜಗಳ ಮೇಲೆ ತಲೆಯೂರಿದ.

ನಾಗನ್ನನ ಒರಟು ಕೈಗಳು ಎಲ್ಲಣ್ಣನ ಬೆನ್ನನ್ನು ಅಪ್ಯಾಯಮಾನವಾಗಿ ಸವರುತ್ತಾ ಇದ್ದವು. ಕಣ್ಣು ಮುಚ್ಚಿಕೊಂಡೇ ಇದ್ದ ಎಲ್ಲಣ್ಣ ಕೇಳಿದ 'ಇದು ಯಾವೂರು?'

'ಪಕ್ಕಲದಿನ್ನೆಯ ಹೊಲಗೇರಿ.' ನಾಗನ್ನ ನಡೆಯೋದನ್ನೂ ನಿಲ್ಲಿಸದೆ ಹೇಳಿದ.

ಎನ್ನೆಲದಿನ್ನೆಯಲ್ಲಿನ ಭೂದೇವಿಗೆ ಇದು ಯಾರಿಗೂ ಗೊತ್ತಿಲ್ಲ.

(ಮುಂದುವರಿಯುವುದು)

ನೋಯಿಸುವ ವಿಚಾರಗಳೇ ಕಲಿಸುವ ವಿಚಾರಗಳೂ ಆಗಿರುತ್ತವೆ - ಬೆಂಜಮಿನ್ ಫ್ರಾಂಕ್ಲಿನ್

ಪ್ರಪಂಚದ ಭೂಮಿ, ನೀರು, ಮನ್ಸ ಒಂದೆಯ ಅಂತ ಪೇಜಾವರನಿಗೇನು ಗೊ

"ಇದ್ದಕ್ಕಿದ್ದಂತೆ ಹಳೆಯ ಸ್ವೆಟರ್ ಹುಡುಕಿ ಇಕ್ಕಿಕೊಂಡು. ಮಾಸಲು ಶಾಲೂ ಹೊದ್ಕಂಡು ತಲೆಗೆ ಟವಲ್ ಬಿಗಿದು ಕೊಂಡು ಬಿಗಿಯಾಗಿ ಕೂರುವಂತಹ ವಾತಾವರಣ ನಿರ್ಮಾಣವಾಗಿಬಿಟ್ಟಿತು. ದಟ್ಟವಾಗಿ ಮುಚ್ಚಿದ ಮೋಡ, ತುಂತುರು ಮಳೆ, ಮುಂಗಾರಿನಲ್ಲಾಗಿದ್ದರೆ ಹರ್ಷಗೊಂಡು ಕುಣಿದಾಡಬಹುದಿತ್ತು. ಆದರೆ ಯಾರಿಗೂ ಬೇಕಿಲ್ಲದ ಈ ಮೋಡ ಮತ್ತು ಮಳೆ ರೇಜಿಗೆಯೊಂದಿಗೆ ಅಸಹ್ಯ ಹುಟ್ಟಿಸಿಬಿಟ್ಟಿತು. ಇಷ್ಟೇ ಅಸಹ್ಯಕರವಾದ ಇನ್ನೊಂದು ಸುದ್ದಿ ಎಂದರೆ ಪ್ರಸ್ತುತ ರಾಜಕಾರಣ. ಆದ್ದರಿಂದ ಅದೇನನ್ನೂ ಮಾತನಾಡದ ಕಾಳಮಾವ,

"ಅದೇನ್ಲ ಉಡುಪಿ ಗಲಾಟ?" ಎಂದ.

"ಅಲ್ಲಿ ಸಾಹಿತ್ಯ ಸಮ್ಮೇಳನ ನ್ಯಡಿತು ಕಣ ಮಾವ. ಅದೊಂತರ ಬಡಗುಡಮ್ಮನ ಜಾತ್ರೆಯಂಗೆ. ಯಾರಿಗೆ ಬೇಕಾಗ್ಲಿ ಬ್ಯಾಡವಾಗ್ಲಿ ನ್ಯಡಕೊಂಡೋಯ್ತಾ ಅದೆ" ಎಂದ ಉಗ್ರಿ.

ಬಯಲುಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಅದಲ್ಲ ಕಂಪ್ಯ, ಅದಕಟಗಂಡು ನಮಿಗೇನು? ಸ್ವಾಮಿಗಳೇನೋ ಜಗಳ ಕಿತ್ತಿಗಂಡು ಹರಿಯ ಮುರಿಯ ಜಗಳಾಡ್ತಯಿದ್ದರಂತೇ ಅದೇಳ್ಳ?"

"ಅಯ್ಯೋ ಅವುರ ಜಗಳ ಯಾರಾರ ಬಗ್ಗೆಹರಸಕ್ಕಾದತೆ ಮಾವ? ಮದ್ಲೆ ಮಾತಗಾರ ಜನ. ಅವುನೊಂದೇಳಿದ್ರೆ ಇವುನೊಂದೇಳತನೆ, ಅವುನಂಗುಂದ್ರೆ ಇವುನಿಂಗಂತನೆ, ಬ್ಯಾಡ ಅವುರ ಕತೆ. ಇದೀ ಕರ್ನಾಟಗಕ್ಕೆ ಮಳೆ ಬ್ಯಳೆ ಕೊಡೋರಂಗೆ ಜಗಳ ಆಡ್ತ ಕುಂತವುರೆ."

"ಇಸಿಸಿ ಅದ್ನೆ ಕಂಪ್ಯ ಕೇಳಿದ್ದು ನಾನು."

"ಅವುನ್ಯಾರೊ ಸ್ವಾಮಿ ಪಾರಿನ್ನಿಗೋಗಿ ಬಂದನಂತೆ. ಅದ್ಕೆ ಅವುನು ಕಿಸ್ಟನ ಪೂಜೆ ಮಾಡಕೂಡದೂ ಅಂತ ಪೇಜಾವರ ಸ್ವಾಮಿ ರಚ್ಚೆ ಹಿಡಿದು ಕುಂತವುನೆ."

"ಅದ್ಯಾಕ್ ಮಾಡಬಾರದಂತೇ?"

"ಅದ ನಾನೇಲ್ಳಿನಿ ದ್ವಡಪ್ಪ" ಎಂದ ವಾಟಿಸ್ಸೆ.

"ಹೇಳ್ರ ಅದೇನು?"

"ಈ ಉಡುಪಿ ಮಠವ ಒಂದಿದ್ದುದ್ನ ಎಂಟು ಮಾಡ್ಯವುರೆ."

"ಯಾರೂ?"

"ಯಾರೊ ನಿನ್ನಂಥ ಹಿರಿಯ ಮಾಡಿಹೋದ. ಪರಗ್ ಜಾಂಪಲ್ ದ್ಯಾವೇಗೌಡ್ರಿಗೆ ನಾಕು ಗಂಡು ಮಕ್ಕಳವೆ. ಬೆಂಗಳೂರಿನ ನಾಲ್ಕು ದಿಕ್ಕಲ್ಲಿರೊ ಅವುನಾಸ್ತಿಯ ಭಾಗ ಮಾಡಿಕೊಟ್ಟು ನೀವ್ಯಲ್ಲ ಅಲ್ಲೇ ಇದ್ರು ಸರದಿ ಮೇಲೆ ನನ್ನ ಮನಿಗೆ ಬಂದು ನನ್ನ ಪೂಜೆ ಮಾಡಿ ಅಂದಂಗೆ."

"ಅವುನ ಪೂಜೆ ಎಲ್ಲಿ ಮಾಡ ಕ್ಯಾಯ್ತದೆ? ಯಡೆ ಹಿಕ್ಕಬವುದಷ್ಟೆ."

"ಅದ್ನೆ ಕಣೊ ಉಗ್ರಿ ನಾನೇಳಿದ್ದು, ದ್ಯಾವೇಗೌಡ್ರ ಮೂಲಸ್ಥಾನಕ್ಕೆ ಬಂದು ಪೂಜೆ ಮಾಡಿಕಂಡೋಗೊ ಹಕ್ಕು ನಾಕು ಮಕ್ಕಳಿಗೂ ಸಮನಾಗಿ ಬಂದಿರುವಾಗ ಬಾಲಕೃಷ್ಣೇಗೌಡನೊ ಅಥವಾ ಅವುನ ತಮ್ಮನೊ ಚಾಮುಂಡೇಶ್ವರಿ ಕ್ಷೇತ್ರಕೋಗಿದ್ದ. ಆದ್ರಿಂದ ಅವುನು ಅಪವಿತ್ರ ಆಗ್ಯವುನೆ. ಆ ಕಾರಣಕ್ಕೆ ದ್ಯಾವೇಗೌಡನ ಪೂಜೆ ಮಾಡದು ಬ್ಯಾಡ ಅನ್ನದು ಎಷ್ಟು ಸರಿ ದ್ವಡಪ್ಪ ನೀನೇ ಹೇಳು?" ಎಂದು ವಾಟಿಸ್ಸೆ ಕತ್ತು ಹೊಗೆದ.

"ಲೇ ಉಗ್ರಿ, ಈ ತಲಿಕೆಟ್ಟ ನನ್ನ ಮಗ ಹೇಳದು ಒಂದೂ ಅರ್ಥವಾಯ್ತಯಿಲ್ಲ, ನೀನೆ ಹೇಳ್ರ" ಎಂದ ಕಾಳಮಾವ.

"ಉಡುಪಿ ಸುತ್ತಮುತ್ತ ಎಂಟು ಮಠವೆ ಕಣಮಾವ. ಆ ಮಠದೋರ್ಕಲ್ಲ ಯರಡೊರ್ಷದಂಗೆ ಕಿಷ್ಟನ್ನ ಸರದಿಮ್ಯಾಲೆ ಪೂಜೆ ಮಾಡಿಕಂಡು ಊಟ ಮಾಡ್ತರೆ. ಈ ಸತಿಯ ವಬ್ಬ ಮಾಡಕ್ಕೆ ಅಂತ ಬಂದ. ನೀನು ಮಾಡದು ಬ್ಯಾಡ, ಬೇರೆ ದೇಶಕ್ಕೋಗಿ ಬಂದಿದ್ದಿ, ಅದೂ ಸಮುದ್ರದ ಮ್ಯಾಲೋಗಿದ್ದೆ ಅಂತ ಈ ಪೇಜಾವರ ಹಟ್ಟ ಬರಕಂಡು ನ್ಯಾಯ ತಗದವುನೆ."

"ಅಂಗರೆ ಬ್ಯಾರೆ ದೇಸಕೆ ಉಡುಪಿ ಸ್ವಾಮಿ ಹೋಗಂಗಿಲವೆ?" ಎಂದಳು ಜುಮ್ಮಿ.

"ಅಂಗಂತ ಪೇಜಾವರ ಅಂತನೆ ಕಣಕ್ಕ. ಮನುಷ್ಯ ಎಲ್ಲೇ ಹೋಗ್ಲಿ ಮನುಷ್ಯ ಈ ಭೂಮಿ ಎಲ್ಲೇ ಹೋದ್ರು ಭೂಮಿನೆ. ಬೇರೆ ದೇಶದ ಸಮುದ್ರದ ಅಲೆ ಉಡುಪಿಗೆ ಬಂದು ಅಪ್ಪಳ ಸದಿಲವೆ? ಇಂತ ಪ್ಯೆಮರಿ ಪಾಠನ್ನಲ್ಲ ಆ ಪೇಜಾವರ ಸ್ವಾಮಿಗೆ ಹೇಳಿಕೊಡಬೇಕಾಗ್ಯದೆ" ಎಂದ ವಾಟಿಸ್ಸೆ.



"ಇವುರ ಜಗಳ ನೋಡಿದ್ರೆ ಈ ಬದ್ದಿಮಕ್ಕಳು ಕನಕದಾಸನ್ನ ಕಂಬಕ್ಕಟ್ಟಿ ಹ್ವಡದವುರೆ ಅನ್ನದು ಸುಳ್ಳೇ?" ಎಂದ ಸೀರ.

"ಹ್ವಡಿಯದೇನು ಚಿಗಪ್ಪ, ಕನಕದಾಸ ಅಲ್ಲಿಂದ ಹೋದನು ಅದೇ ಕ್ವರಗಿನಲ್ಲಿ ಸತ್ತೆ ಹೋಗಿರಬವುದು. ಈ ಜಾತಿ ಅವುಮಾನದಲ್ಲಾ ಅದು ಭಾಳ ದಿನ ಕಾಡುಸ್ತು."

"ಬುಡ್ಡ ಅತ್ತಗೆ, ಆ ತಲಿಕೆಟ್ಟೋರ ಸುದ್ದಿ ಯಾ' ಈ ತಂಪೊತ್ತಿನಲ್ಲಿ ಮಾತಾಡ್ತಿ?"

"ಅವುರ್ಯಾಕ್ ಮಾತಾಡೊ ಅಂತ ಕ್ಯಲ
ದ್ವಡಪ್ಪ?"

"ಪಾರಿನ್‌ಗೋಗಿ ಬಂದ ಸ್ವಾಮಿ ಅಪ
ಪೇಜಾವರನ ದೃಷ್ಟಿಲಿ ಅವುನೇನ
ಬಂದಿರಬೇಕಲವೆ?" ಎಂದು ಉಗ್ರಿ ಒಂದು
ಪ್ರಶ್ನೆ ಎಸೆದ.

"ಏನಪ್ಪ ಅದು ಪೇಜಾವರನಿಗೇ ಗ
ಪೂಜೆ ಮಾಡೀ ಮಾಡಿ ತಲಿಕೆಟ್ಟು ಪಾರಿನ್
ಮಾಡಿಕಂಡೇ ಬಂದಿರಬವುದು ಅಂತ ಪೇಜಾ
ತಗದಿರಬವ
ಹೇಳಕ್ಕೆ ಬರ
ಪೂಜೆ ಮಾ
ಅಂಗಿರಬೇಕ
ನಂಬನ ಹೇ
ವಾಟಿಸ್ಸೆ.

"ಇದೇ
ಹರಿಜನ್ರ ಕೆ
ಅಪವಿತ್ರ
ಅಂಥೋನ್ನ
ಪೂಜೆ ಮಾ
ಅವುಕಾಶ
ನಾವು, ಅಂ
ಬ್ರಾಂಬ್ರು ಕಿ
ಇದ್ದರಂತೆ"
ಉಗ್ರಿ.

"ಅಂಗ
ಪೇಜಾವರ
ಮನಿಗೋಗಿದ್ನೇನ್ಲ?" ಎಂದಳು ಜುಮ್ಮಿ.

"ಮನಿಗಲ್ಲ ಕಣೆ, ಕೇರಿಗೋಗಿದ್ದ.
ಸಾಬರಾದ್ರೆ ಗತಿಯೇನು? ಈಗಿರೊ ಸಾಬ
ತಡಿಯಕ್ಕಾಗದಿಲ್ಲ, ಇನ್ನ ನಮ್ಮ ಕಂಡ್ರಾಗ
ಸಾಬರಾದ್ರೆ ಬ್ರಾಂಬ್ರು ಹುಡುಗ್ರ ಅಟ್ಟಾಡಿಸಿಗ
ಅಂತ ಹೆದ್ರಿಕಂಡು ಹರಿಜನ್ರ ಕೇರಿಗೆ ಓಡ

"ಓಹೋಹೊ ಅಂಗೆ ಅನ್ನು?"

"ಊ, ಅಲ್ಲಿಂದ ಬಂದು ಪುಣ್ಯ ಮ
ತೀರ್ಥ ಹಾಕಿಸಿಗಂಡು, ಜನಿವಾರ ಬದ

ಪರ್ಯಾಯ ಪರದಾಟ

ಪರ್ಯಾಯ.... ಪರ್ಯಾಯ... ಎಲ್ಲೆಲ್ಲಿಯೂ ಪರ್ಯಾಯದ್ದೇ ಸುದ್ದಿ.

ಉಡುಪಿಯ ಶ್ರೀಕೃಷ್ಣ ಪರಮಾತ್ಮನ ಸಂದಿಗ್ಧ ನೋಡಿ. ಈ ಭರತ ಖಂಡದಲ್ಲಿಯೇ ಕೂಪಮಂಡೂಕಗಳಂತಿರುವ ಯತಿಗಳಿಂದ ಪೂಜಾ ಕೈಂಕರ್ಯ ಪಡೆಯಬೇಕೋ ಅಥವಾ ತಾನು ಸೃಷ್ಟಿಸಿರುವ ಭೂಮಂಡಲವನ್ನು ಸುತ್ತಿಬಂದಿರುವ ಯತೀಶ್ವರರಿಂದ ಇದನ್ನು ಪಡೆದುಕೊಳ್ಳಬೇಕೋ ಎಂಬ ತಾಕಲಾಟ. ಒಂದು ಕಡೆ ಓಲಿದರೆ ಅಷ್ಟಮಠಾಧೀಶರುಗಳಲ್ಲಿ ಸಪ್ತ ಮಠಾಧೀಶರುಗಳ ಕೆಂಗಣ್ಣಿಗೆ ಗುರಿಯಾಗ ಬೇಕು. ಇನ್ನೊಂದು ಕಡೆ ಓಲಿದರೆ ವರ್ತಮಾನ ಕಾಲದ ಬದಲಾವಣೆಗಳನ್ನೇ ಅರಿಯದ ಮುಠ್ಠಾಳ ಎಂಬ ಮೂದಲಿಕೆಯ ಬಾಯಿಗಳಿಗೆ ಚ್ಯೂಯಿಂಗಮ್ ಆಗಬೇಕು. ಈ ಪರಿಯ ತೊಳಲಾಟದಲ್ಲಿ ಬಿದ್ದಿರುವ ಪರಮಾತ್ಮ ನಾದರೂ ಎಂತಹವನು? ಭಕ್ತಪರಾಧೀನ, ಹದಿನಾರು ಸಾವಿರ ಪ್ಲಸ್ ಈರ್ವರು ಸ್ತ್ರೀಯರಲೋಲ, ಎಟ್ಸೆಟ್ರಾ, ಎಟ್ಸೆಟ್ರಾ ಹಾಗೆ ಇರಲಿ. ಸಾಕ್ಷಾತ್ ಸಂವತ್ಸರಗಳ ಸೃಷ್ಟಿಕರ್ತನವ! ಎಲಿ ಎಲಾ ಇದು ಹೇಗೆಂಬುದಕೆ ಪುರಾಣ ಕತೆ ಇಹುದು. ಏನು ಅದು ಎಂದರೆ......

ಒಮ್ಮೆ ಹೀಗಾಯಿತು. ಬ್ರಹ್ಮರ್ಷಿ ನಾರದರಿಗೆ ಕಾಮದ ಇಚ್ಛೆ ಯದ್ವಾತದ್ವಾ ಆಯಿತು. ಈ ವೇದನೆಯನ್ನು ತಾಳಲಾರದೆ ಆ ಮುನಿಪುಂಗವರು, ಇದನ್ನು ಶಮನಗೊಳಿಸಲು ಮಾರ್ಗ ಸಿಗ್ಗಿ ತಹತಹಿಸಿದರು ದೇವಲೋಕದಲ್ಲಿಯೇ ಈ ತರಹದ ಚಿಕಿತ್ಸೆಗಾಗಿ ಅಪ್ಸರೆಯರಿದ್ದರು ನಿಜ. ಆದರೆ ಬ್ರಹ್ಮಚಾರಿಗೆ ತಗುಲಿಕೊಂಡಿರುವ ಇಂತಹ ವೇದನೆ ಪ್ರಚುರಪಡಿಸಬಾರದು, ಗುಟ್ಟಾಗಿಯೇ ಇದನ್ನು ತೀರಿಸಿಕೊಳ್ಳಬೇಕು ಎಂದು ಯೋಚಿಸಿರಬಹುದು. ಅಪ್ಸರೆಯರ ತಂಟೆಗೆ ಹೋಗಲಿಲ್ಲ, ಬೇರೆ ಮಾರ್ಗಕ್ಕಾಗಿ ಚಿಂತಿಸಿದರು. ಸಾವಿರಾರು ಗೋಪಿಕಾಸ್ತ್ರೀಯರನ್ನು ಅನುಭವಿಸುತ್ತಿರುವ ಧೀರನ ನೆನಪಾಯಿತು. ಅವರಲ್ಲಿ ಒಬ್ಬಳನ್ನು ಚಿಕಿತ್ಸೆಗಾಗಿ ನೀಡಲು ಏನೂ ತೊಂದರೆಯಾಗಲಾರದು ಎಂದು ಭಾವಿಸಿದರು. ನೇರವಾಗಿ ಅವನ ಬಳಿಗೆ ಸಾಗಿದ ಮುನಿವರ್ಯರು ತಮ್ಮ ಕಾಮವೇದನೆಯನ್ನು ಅವನಿಗೆ ವಿವರಿಸಿದರು. 'ಹೇ ಕೃಷ್ಣ ಪರಮಾತ್ಮ ನಿನಗಾದರೋ ಹದಿನಾರು ಸಾವಿರ ಪ್ಲಸ್ ಈರ್ವರು ಸ್ತ್ರೀಯರು ಅನುಭವಿಸಲು ಇರುವರು.



ಈರ್ವರು ಬೇಡ. ಅವರು ನಿನಗೆ ಭಾರ್ಯೆಯರು. ಇನ್ನುಳಿದ ಹದಿನಾರು ಸಾವಿರಗೋಪಿಕಾಸ್ತ್ರೀಯರಲ್ಲಿ ನನಗೆ ಒಬ್ಬಳನ್ನು ದಯಪಾಲಿಸು. ಕಾಮವೇದನೆಯನ್ನು ನೀಗಿಸಿಕೊಳ್ಳಲು ಅವಕಾಶ ಕಲ್ಪಿಸಿಕೊಡು' ಎಂಬುದಾಗಿ ತನ್ನ ಬೇಡಿಕೆಯನ್ನು ಮುಂದಿಟ್ಟರು.

ಆಧುನಿಕ ಮಾನವನ ಮುಂದೆ ಇಂತಹ ಬೇಡಿಕೆಯನ್ನು ಮುಂದಿಟ್ಟಿದ್ದರೆ ಪರಿಣಾಮ ಏನಾಗುತಿತ್ತೋ ತಿಳಿಯದು.

ಆದರೆ ಭಕ್ತಪರಾಧೀನ ಕೃಷ್ಣ ಪರಮಾತ್ಮ ಇದ್ಕೆ ಸ್ಪಂದಿಸಿದ. 'ಎಲೈ ಮುನಿವರ್ಯರೆ, ನಿಮ್ಮ ನೋವು ನನಗೆ ಅರ್ಥವಾಗುತ್ತದೆ. ನಾನು ನಿಮ್ಮ ಬೇಡಿಕೆಗೆ ಸಮ್ಮತಿಸಿದ್ದೇನೆ. ಹದಿನಾರು ಸಾವಿರ ಗೋಪಿಕಾಸ್ತ್ರೀಯರನ್ನೂ ಭೋಗಿಸಲು ನಿಮಗೆ ಅವಕಾಶ ಕೊಡುತ್ತಿದ್ದೇನೆ ನಾನು ಯಾವ ಗೋಪಿಕೆಯ ಮನೆಯಲ್ಲಿರುವುದಿಲ್ಲವೋ ಆಕೆಯಿಂದ ನೀವು ನಿಮ್ಮ ವೇದನೆಗೆ ಪರಿಹಾರ ಕಂಡುಕೊಳ್ಳುವುದು. ನಾನು ನಿಮಗೆ ಈ ಹಕ್ಕನ್ನು ಈಗಲೇ ಕೊಟ್ಟಿರುತ್ತೇನೆ' ಎಂದನು.

ನಾರದಮುನಿಗಳಿಗೆ ಆ ಪರಮಾತ್ಮನಿಂದ ಸ್ತ್ರೀಯರ ಮೇಲೆ ಹಕ್ಕು ಮಾತು ದೊರೆಯಿತು. ದ್ವಾಪರಯುಗದಲ್ಲಿ ಮಾತೇ ಪ್ರಮಾಣಪತ್ರ ತಾನೆ. ಅರ್ರೇ ಕೃಷ್ಣ ಹೀಗೆ ಮಾಡಿದ. ಗೋಪಿಕಾಸ್ತ್ರೀಯರನ್ನು ಈ ಕುರಿತು ಏನೂ ಕೇಳಬೇಕಾಗಿರಲಿಲ್ಲ, ಏಕೆಂದರೆ ಆ ಯುಗ ದಲ್ಲಿಯೂ ಈಗಿನಂತೆಯೇ ಕೋಳಿ ಕೇಳಿ ಮಸಾಲೆ ಅರೆಯಬೇಕಾಗಿರಲಿಲ್ಲವೆಂಬುದು ಸರ್ವವೇದ್ಯವೇ ಆಗಿದೆ.

ಕಾಮವೇದನೆಯಿಂದ ಬೇಯುತ್ತಿದ್ದ ಮುನಿವರ್ಯರಿಗೆ ಅದರಿಂದ ಬಿಡುಗಡೆ ಹೊಂದುವ ತೀವ್ರತೆ ಇತ್ತಲ್ಲ, ಕೃಷ್ಣನಿಗೆ ಕೈಮುಗಿದು ಸರಸರನೆ ಅವನು ಭೋಗಿಸುತ್ತಿದ್ದ ಗೋಪಿಕೆಯರ ಮನೆ ತಲಾಷಿಗೆ ಹೊರಟರು. ಅಯ್ಯೋ ನಾರದ ಮುನಿಗಳ ದುರ್ದೈವ ಕ್ಯೇನೆಂಬೆನು. ಆ ಮನೆಯಲ್ಲೂ ಕೃಷ್ಣನಿದ್ದಾನೆ.... ಈ ಮನೆಯಲ್ಲೂ ಕೃಷ್ಣನಿದ್ದಾನೆ... ಎಲ್ಲ ಸ್ತ್ರೀಯರ ಮನೆಯಲ್ಲೂ ಕೃಷ್ಣನಿದ್ದಾನೆ... ಎಲ್ಲ ಸ್ತ್ರೀಯರ ಮನೆಯಲ್ಲೂ ಕೃಷ್ಣಾವತಾರ! ನಡೆದು ನಡೆದು ಮುನಿವರ್ಯರ ಕಾಲು ಬಾತಿತು. ಕಾಮವೇದನೆ ತಾರಕಕ್ಕೇರಿತು. ಹುಡುಕಾಟ ನಿಲ್ಲಿಸಿದರು. ಮತ್ತೆ ಕೃಷ್ಣನ ಬಳಿಗೆ ಬಂದರು.

'ಹೇ ಕೃಷ್ಣ ನಾನು ಕಾಮವೇದನೆ ಸಹಿಸಲಾರೆನು. ಎಲ್ಲ ಸ್ತ್ರೀಯರ ಮನೆಗಳಲ್ಲೂ ನೀನೇ ಸರಸವಾಡುತ್ತಿದ್ದೆ. ಈ ವೇದನೆ ಪರಿಹಾರಕ್ಕೆ ಮಾರ್ಗ ತೋರಿಸು' ಎಂಬುದಾಗಿ ಮುನಿವರ್ಯರು ತಮ್ಮ ಕಾಮವೇದನೆಗೆ ನಿವಾರಣೋಪಾಯವನ್ನು ತಿಳಿಸಲು ಕೃಷ್ಣನ ಹೆಗಲಿಗೆ ಹಾಕಿದರು.

ದಯಾಮಯನಾದ ಕೃಷ್ಣ ಪರಮಾತ್ಮ
ಸಂಕಟವನ್ನು ಅರ್ಥ ಮಾಡಿಕೊಂಡನು.
ಭಕ್ತ ಪರಾಧೀನ ಅಲ್ಲವೆ ಅವನು. ಮ
ಕಾಮವೇದನೆ ತೀರಿಸಲು.... ಏನು ಮಾಡಿದನ
'ನನ್ನನ್ನೇ ಅನುಭವಿಸಿ ಸುಖಪಡು' ಎಂದ!

ನಾರದ ಮುನಿಗಳು ತಮ್ಮನ್ನು ಕ
ಮಾಡುತ್ತಿರುವ ವೇದನೆಯ ನಿವಾರಣೆಗೆ ಆ
ಮಾರ್ಗೋಪಾಯ ತೋರಿದ್ದನಾದರೂ ಅ
ಅವರಿಗೆ ಸರಿ ಕಂಡುಬರಲಿಲ್ಲ, ಆ ದಯಾ
ಭಗವಂತನನ್ನೇ ತಾನು ಭೋಗಿಸುವುದು
ತಳಮಳಗೊಂಡರು ಮುನಿವರ್ಯರು. ಆದ
ಪರಿಹರಿಸಿಕೊಳ್ಳಬೇಕಿತ್ತಲ್ಲ ಅದಕ್ಕಾಗಿ
'ಕೃಷ್ಣಪರಮಾತ್ಮ ನಾನು ನಿನ್ನನ್ನು ಸುಖಿಸುವ
ನೀನೇ ನನ್ನನ್ನು ಅನುಭವಿಸಿ ವೇದನೆಯನ್ನು

ಸಲಿಂಗಕಾಮಿಗಳ ಸಂತತಿ ಅನಾದಿಕಾ
ಇತ್ತೆಂದು ಇದರಿಂದಾಗಿ ತಕ್ಷಣದ ನಿರ್ಧಾರಕ್ಕೆ
ಪುರುಷ ಪುರುಷ ಸಂಭೋಗವೇನೂ ನಡೆಯ
ಮಹಾಮಹಿಮರುಗಳಲ್ಲವೆ. ನಾರದ ಮುನಿಗ
ತರುಣಿಯ ರೂಪ ತಾಳಿದರು. ಹದಿನಾರು

ಅಣಕ

ಎಚ್.ಎಲ್. ಕೇಶವಮೂ

ಎರಡು ಸ್ತ್ರೀಯರಿಗಿಂತ ಭಿನ್ನವಾಗಿದ್ದ ತ
ಅಲ್ಲವಾ... ಕೃಷ್ಣ ಪರಮಾತ್ಮ ಅವಳೊಡನೆ

ಕಾಮವೇದನೆ ಇದ್ದದ್ದು ನಾರದ ಮುನಿ
ಅದು ಸಂಪೂರ್ಣ ತೃಪ್ತಿ ಪಡೆಯಲು ಬ
ಹಿಡಿಯಿತು. ಈ ನಡುವೆ ನಾರದ ನಾರೀವ
ಧರಿಸುತ್ತಿದ್ದಳು. ಮಕ್ಕಳನ್ನು ಹೆರುತ್ತಿದ್ದಳು.
ಮಕ್ಕಳಾಗುವವರೆಗೂ ಸಡಗರ ಸಂಭ್ರಮ
ಸುಖಿಸುತ್ತಿದ್ದರು. ಕಾಮವೇದನೆ ಸಂಪೂರ್ಣ
ಆಯಿತು. ಆನಂತರ ಈ ಕ್ರಿಯೆಯೇ ಬೇಸರ

...ನಾಟಬಾರ್ದ ಶಾಸ್ತ್ರ ಮಾಡಿ ಸ್ವಚ್ಛಗಾದೋನು ಈ ...ಜಾವರ."

"ಯಂಗೊ ಅವ್ರುನು ಕಾಲಹಾಕ್ತ ಅವ್ರುನಲ್ಲ ಬುದ್ಧ್ರ" ಎಂದ ಸೀರ ಆಕಳಿಸುತ್ತ ಪೇಜಾವರನನ್ನು ಕ್ಷಮಿಸಿದವನಂತೆ. ...ಡಿಗಾಗಿ ತಡಕಿ, ಅದು ಜೇಬಲ್ಲಿ ಸಿಕ್ಕಿದ್ದನ್ನು ಕಣ್ಣಿನಲ್ಲೇ ತೋರುತ್ತ ಹಚ್ಚಿಕೊಂಡು ಒಂದು ದಂ ಎಳೆದ. ಆನಂತರ ಕೆಮ್ಮಿಗೆ ತುತ್ತಾಗಿ ಹೀಗೆ ಕೆಮ್ಮುತ್ತಲೇ,

"ಕುಮಾರ್, ಕುಮಾರ್‌ಸ್ವಾಮಿಗೇನೊ ಆರ್‌ಟಾಕ್ ಅಂತೆ?" ಎಂದ.

"ಅವ್ರುನಾರ್‌ಟಾಕ್ ಇರ್ಲಿ. ನೀನು ಕೆಮ್ಮು ಸರಿ ಮಾಡಿಕಳೊ. ಕೆಮ್ಮುತಯಿರುವಾಗ್ಲೆ ಹೋದಿಯಾ" ಎಂದ ಉಗ್ರಿ.

"ಹೋಗ್ಲಿ ಬುಡ್ರ. ಇನ್ನೇನು ಮಾಡಬೇಕಿಲ್ಲ, ಯಲ್ಲ ಆಯ್ತಲ್ಲ" ಎಂದು ಸೀರ ನಿರಾಳದ ಕಣ್ಣುಬಿಟ್ಟ.

"ಕುಮಾರಸ್ವಾಮಿನು ಅಂಗೆ ಅಂದನಂತೆ ಕಣೊ. ಇನ್ನೇನಾಗ ಬೇಕು, ನಾನು ಚಿಕ್ಕವಯಿಸಿಗೇ ಮುಖ್ಯಮಂತ್ರಿಯಾದೆ ಅಂದನಂತೆ"

"ಅವ್ನಂದ್ಯಾವ ಚಿಕ್ಕವಯಿಸ್ನ? ಬುಂಡೆ ಕೂದ್ಲಾಗಲೆ ಮುಯಿಕಂಡವೆ, ಇನ್ನು ಚಿಕ್ಕವಯಿಸಂತೆ, ಚಿಕ್ಕ ವಯಿಸು" ಎಂದು ವ್ಯಂಗ್ಯವಾಡಿದ ಸೀರ.

"ಅವುನಿಗೆ ಆರಟ್ ಸಮಸ್ಯೆ ಯಿರದು ಮದ್ಲೆ ಗೊತ್ತಿತ್ತಂತೆ ಚಿಗಪ್ಪ, ಅದ್ಕೆ ಮುಂದೆ ಯಂಗೊ ಏನೊ ಅಂತ ಯಲ್ಲಾರ್ನು ಓವರ್‌ಟೇಕ್ ಮಾಡಿ ಮುಖ್ಯಮಂತ್ರಿಯಾಗಿಬುಟ್ನಂತೆ" ಎಂದ ವಾಟಿಸ್ನೆ.

"ಅದ್ನು ಹೇಳಕ್ಕೆ ಬರದಿಲ್ಲ ಬುಡು" ಎಂದ ಉಗ್ರಿ.

"ಯಲ್ಲಾ ಪಾರ್ಟಿ ಬುಟ್ಟು ಹೋಯ್ತಾಯಿರದರಿಂದ ಹೆದ್ರಿಕಂಡು ಅಂಗಾಗಿರಬೇಕು ಕಂಡ್ಯ" ಎಂದಳು ಜುಮ್ಮಿ.

"ಅದ್ನು ಹೇಳಕ್ಕೆ ಬರದಿಲ್ಲ, ನೋಡು ಆ ಜೆ.ಟಿ. ದ್ಯಾವೇಗೌಡುನ್ನ ನಂಬಿಕಸ್ಥ ನಾಯಿ ಅನ್ನಕಂಡಿದ್ರು. ಅವುನಾಗ್ಲೆ ಎಡೂರಪ್ಪನತ್ರಕೋಗಿ ಇತ್ತಮುಂದಾಗಿ ತಿರಿಕಂಡು ಬಗಳ್ತ ಕುಂತವ್ನೆ. ಇನ್ನ ಏಟು ಜನ ಕೈಕೊಟ್ಟರೊ ಏನೊ. ಅಂತು ಕುಮಾರಸ್ವಾಮಿಗೆ ಆರಟ ಸಮಸ್ಯೆ ಅಂದ್ರೆ ಇನ್ನ ಮುಂಕೆಯ ಬುಡು" ಎಂದ ಉಗ್ರಿ.

"ಇನ್ನೇನಾಗಬೇಕೊ? ಏಟು ತಲಿಗಡದ್ರು ಕರಗದಂತ ಆಸ್ತಿ ಮಾಡಿಕಂಡ್ರು. ಇನ್ನೇನಿದ್ರು ಆಟ ಆಡಿದಂಗೆ ರಾಜಕಾರಣ ಮಾಡಿಕಂಡು ಕಾಲ ಹಾಕ್ತರೆ. ನಂದು ನಿಂದು ಕೇಳೊ ಉಗ್ರೀ."

"ಸಂದಿರ್ಲಿ, ನೀನ್ಯಾವುದಾರ ಪಾರ್ಟಿಗೆ ಟ್ರೈ ಮಾಡೊ."

"ಇನ್ನು ಟ್ರೈಮಡೆ ಇರು." ■

...ರದ ನಾರೀಮಣಿ ಮತ್ತೆ ನಾರದ ಮುನಿವರ್ಯರಾದರು!

ಅವರೇನೋ ವೇದನೆ ಶಮನ ಮಾಡಿಕೊಳ್ಳಲು ಮಾರ್ಗ ಕಂಡುಕೊಂಡಿದ್ದರು. ಅವರಿಂದ ಹುಟ್ಟಿದ ಮಕ್ಕಳ ಗತಿಯೇನು? ಅವರು ಪ್ರಶ್ನಿಸಿದರು- 'ಮುಂದೆ ನಮ್ಮ ...ಡೇನು?'

ಶ್ರೀಕೃಷ್ಣ ಪರಮಾತ್ಮ ನಸುನಗುತ್ತಾ ನುಡಿದ- ನೀವೆಲ್ಲರೂ ಭೂಲೋಕಕ್ಕೆ ಹೋಗಿ. ನಿಮ್ಮ ಹೆಸರಿನ ಸಂವತ್ಸರಗಳಿಂದ ಈ ಪ್ರಪಂಚ ಉಳಿದಿರುವವರೆಗೂ ಸುಖವಾಗಿರಿ.'

ಅತ್ತ ಸಂವತ್ಸರಗಳ ಸೃಷ್ಟಿಕರ್ತ ಆರಾಧನೆಗೇ ಒಂದು ರೀತಿಯ ಗೋಜಲು ಉಂಟಾಗಿರಲಾಗಿ ಇತ್ತ ಚುನಾವಣೆಗಳು ಹತ್ತಿರ ಬರುತ್ತಿದ್ದಂತೆಯೇ ಹಲವರಿಗೆ ಹಲವು ರೀತಿಯ ಪರ್ಯಾಯ ವೇದನೆ ಪ್ರಾರಂಭವಾಗಿದೆ. ನಾಯಿ ಕೊಡೆ ...ಗಳಂತೆ ಹುಟ್ಟಿಕೊಂಡಿರುವ ಪಕ್ಷಗಳಿಗೆ ತಾನೇ ಪರ್ಯಾಯ ...ಎಂಬ ಸಂವೇದನೆ ಗುದ್ದುತ್ತಿರುವಂತಿದೆ. ಬುದ್ಧಿಜೀವಿಗಳು, ಪ್ರಗತಿಪರರು, ವಿಚಾರವಂತರು ಅನ್ನಿಸಿಕೊಳ್ಳುವವರಿಗೆ ಎಲ್ಲ ಪಕ್ಷಗಳೂ ಕೊಳೆತು ನಾರುತ್ತಿವೆ, ಅವುಗಳಿಗೆ ಪರ್ಯಾಯ ...ವಾಗಿ ರಾಜಕಾರಣ ಇಂದಿನ ಅವಶ್ಯಕತೆ ಎನ್ನಿಸುತ್ತಿದೆ. ...ಹಜಾರಾಮಿ ಕೊಠಡಿಗಳಲ್ಲಿ ಈ ಕುರಿತು ಗಂಟಲು ...ಶೋಷಣೆ ಸಾಂಗವಾಗಿ ನೆರವೇರುತ್ತಿದೆ. ಚುನಾವಣೆ ಮುಗಿದ ...ನಂತರ? ಕುಂಭಕರ್ಣ ನಿದ್ದೆ. ಮತ್ತೆ ಚುನಾವಣೆ ಬಂದಾಗ ...ಘೋಷಣೆಯ ಅರಿವು!

ಇದೇ ಗುಂಗಿನಲ್ಲಿ ಹೋಗುತ್ತಿರುವಾಗ ದಢೂತಿ ...ಸ್ವಾಮಿಯೊಬ್ಬರು ಎದುರಾದರು.

'ನಮಸ್ಕಾರ ಸಾರ್'

'ನಮಸ್ಕಾರರೀ'

'ಪರ್ಯಾಯ ವ್ಯವಸ್ಥೆ'


'ಆಗಬೇಕೂರಿ, ಆಗಬೇಕು. ಮನುಷ್ಯನ ಆರೋಗ್ಯಕ್ಕೆ ...ಒಳ್ಳೇದು'

'ಅದು ಸರಿ, ಆದರೆ ಹ್ಯಾಗೆ?'

'ಹ್ಯಾಗೆ ಅಂದರೆ ನನಗೆ ಎರಡು ಮನೆ ಇದಾವ್ರಿ. ...ಉತ್ತರದಲ್ಲೊಂದು ದಕ್ಷಿಣದಲ್ಲೊಂದು. ಒಂದರಲ್ಲಿ ...ಹೆಂಡತಿಯು ಇನ್ನೊಂದರಲ್ಲಿ ಪರ್ಯಾಯ' ಅನ್ನೋದೆ ...ಕೆಯರು! ■

ಆಳುವ ಸ್ವಾಮಿಗಳು

ಅಧಿಕಾರಿಗಳ, ಪೊಲೀಸ್ ರಾಕ್ಷಸರ ಲೋಕ ಅನೇಕರಿಗೆ ಗೊತ್ತಿಲ್ಲ. 'ಎಸ್ ಪ್ರೈಮ್ ಮಿನಿಸ್ಟರ್' ಪುಸ್ತಕದಲ್ಲಿ ಒಂದು ಘಟನೆ ಬರುತ್ತದೆ. ಇಂಗ್ಲೆಂಡಿನ ಅತ್ಯುನ್ನತ ಅಧಿಕಾರಿ ಮತ್ತು ಅವನ ಸಹಾಯಕರು ಏನೇನು ಮಾಡಲು ಸಾಧ್ಯ ಎನ್ನುವುದನ್ನು ಇದು ತೋರುತ್ತದೆ. ಇದ್ದಕ್ಕಿದ್ದಂತೆ ಇಂಗ್ಲೆಂಡಿನ ಪ್ರಧಾನಿ ರಾಜೀನಾಮೆ ಕೊಡುತ್ತಾನೆ. ಮುಂದಿನ ಪ್ರಧಾನಿಯನ್ನು ಆರಿಸಬೇಕಾಗಿದೆ. ಅಷ್ಟರಲ್ಲಿ ಅತ್ಯುನ್ನತ ಅಧಿಕಾರಿ ತನ್ನ ಸಹಾಯಕರೊಂದಿಗೆ ಚರ್ಚಿಸುತ್ತಾನೆ. ಈ ದೇಶದ ಸೌಖ್ಯಕ್ಕೆ ಎಂಥ ಪ್ರಧಾನಿ ಬೇಕು? ಇಲ್ಲಿ 'ದೇಶದ ಸೌಖ್ಯ' ಎಂದರೆ ಅರ್ಥ ಅಧಿಕಾರಿಗಳ ಸೌಖ್ಯ. ಅತ್ಯುನ್ನತ ಅಧಿಕಾರಿ ತನ್ನ ಗೆಳೆಯರೊಂದಿಗೆ ತೀರ್ಮಾನಿಸುತ್ತಾನೆ-ಇಂಗ್ಲೆಂಡಿಗೆ ಬೇಕಾಗಿರುವುದು ಯಾವುದೇ ಸಿದ್ಧಾಂತವಿಲ್ಲದ, ಗೊಂದಲದ, ದುರ್ಬಲನಾದ, ಏನೇನೂ ಮಾಡಲಾರದ ಪ್ರಧಾನಿ; ಅಂದರೆ, ಅಧಿಕಾರಿಗಳ ಮಾತು ಕೇಳುವವನು, ಅವರ ಮಾರ್ಗದರ್ಶನ ಮೀರದವನು.



ಪ್ರಧಾನಿಯನ್ನು ಆರಿಸಬೇಕಾದ ಪಕ್ಷದಲ್ಲಿ ಪ್ರಧಾನಿ ಪಟ್ಟಕ್ಕಾಗಿ ಇಬ್ಬರು ಪ್ರತಿಸ್ಪರ್ಧಿಗಳಿದ್ದಾರೆ: ಎರಿಕ್ ಎಂಬ ಒಬ್ಬ, ಡಂಕನ್ ಎಂಬ ಇನ್ನೊಬ್ಬ, ಇಬ್ಬರೂ ಜೋರಿನ ಆಸಾಮಿಗಳು, ಈಗಾಗಲೇ ಪ್ರಬಲ ಮಂತ್ರಿಗಳಾಗಿದ್ದು ಪ್ರಚಂಡರೆಂಬ ಹೆಸರು ಪಡೆದಿದ್ದಾರೆ. ಅತ್ಯುನ್ನತ ಅಧಿಕಾರಿ ಆರ್ನಾಲ್ಡ್‌ಗೆ ಇವರಿಬ್ಬರೂ ಇಷ್ಟವಿಲ್ಲ. ಆದ್ದರಿಂದ ಇವರಿಬ್ಬರ ಮೇಲೆ ಗುಪ್ತ ಬೇಹುಗಾರರು ಸಂಗ್ರಹಿಸಿದ ಅತ್ಯಂತ ಗೋಪ್ಯ ದಾಖಲೆಗಳನ್ನು ತೆಗೆದು ಬೆಪ್ಪನಾದ ಹ್ಯಾಕರ್ ಎಂಬ ಮಂತ್ರಿಗೆ ತೋರಿಸುತ್ತಾನೆ. ಎರಿಕ್‌ನ ವ್ಯಭಿಚಾರದ ಪ್ರಕರಣಗಳು, ಡಂಕನ್‌ನ ಭ್ರಷ್ಟತೆಯ ಹಗರಣಗಳು ಹ್ಯಾಕರ್‌ನನ್ನು ಬೆಚ್ಚಿ ಬೀಳಿಸುತ್ತವೆ. ಈ ದಾಖಲೆಗಳ ಸಹಾಯದಿಂದ ಹ್ಯಾಕರ್ ಪ್ರಧಾನಿ ಪಟ್ಟಕ್ಕೆ ಅಭ್ಯರ್ಥಿಗಳಾದ ಇಬ್ಬರನ್ನೂ ತೆಪ್ಪಗಾಗಿಸಲು ಹೇಳುತ್ತಾರೆ. ಹ್ಯಾಕರ್ ಒಪ್ಪುವುದಿಲ್ಲ, ಅದಕ್ಕೆ ಅಧಿಕಾರಿ ಆರ್ನಾಲ್ಡ್ "ವಿಷಯ ಗೊತ್ತಿದ್ದೂ ಸುಮ್ಮನಾದ ಆರೋಪ ನಿಮ್ಮ ಮೇಲೆ ಬರುತ್ತದೆ" ಎಂದು ಬೆದರಿಸುತ್ತಾನೆ.

"ಹಾಗಾದರೆ ಯಾರು ಪ್ರಧಾನಿಯಾಗಬೇಕು?"

ಆರ್ನಾಲ್ಡ್ ಹೇಳುತ್ತಾನೆ, "ತಾವು."

ಈ ಬೆಪ್ಪ ಹ್ಯಾಕರ್ ಪ್ರಧಾನಿಯಾಗುತ್ತಾನೆ. ಅಧಿಕಾರಿಗಳು ಬಯಸುವ ಎಲ್ಲ ಕಲ್ಯಾಣಗುಣಗಳೂ ಈತನಲ್ಲಿವೆ-ದಡ್ಡತನ, ಹೇಡಿತನ, ಗೊಂದಲ, ಸಜ್ಜನಿಕೆ, ಹೇಳಿದಂತೆ ಕೇಳುವ ವಿಧೇಯತೆ.

ಇದೇ ಆರ್ನಾಲ್ಡ್ ಇದ್ದಕ್ಕಿದ್ದಂತೆ "ನಾನು ರಾಜೀನಾಮೆ ಕೊಟ್ಟುಬಿಡುತ್ತೇನೆ" ಎಂದು ಒಂದು ದಿನ ಪ್ರಕಟಿಸುತ್ತಾನೆ. ಸರ್ವೀಸ್ ಇನ್ನೂ ಆರು ತಿಂಗಳಿರುವಾಗಲೇ ರಾಜೀನಾಮೆ ಕೊಡಲು ಈತ ತೀರ್ಮಾನಿಸಿದ್ದನ್ನು ಕಂಡು ಈತನ ಸಹೋದ್ಯೋಗಿಗಳು ಅಚ್ಚರಿಗೊಳ್ಳುತ್ತಾರೆ. ಆರ್ನಾಲ್ಡ್ ಕೂಡ ಹೇಳುತ್ತಾನೆ, "ಎಂದಾದರೊಮ್ಮೆ ನಿವೃತ್ತನಾಗಲೇಬೇಕಲ್ಲ, ನನಗೂ ಎಲ್ಲ ಸಾಕಾಗಿದೆ, ಪ್ರಶಾಂತ ಜೀವನ ನಡೆಸಬೇಕೆಂದು ಆಶೆಯಾಗಿದೆ."

ಆದರೆ ಈ ಅಧಿಕಾರಿಗಳ ವರಸೆ ಬಲ್ಲವರಿಗೆ ಯಾರಿಗೂ ಆಶ್ಚರ್ಯವಾಗುವುದಿಲ್ಲ, ಯಾಕೆಂದರೆ ಆರ್ನಾಲ್ಡ್ ನಿವೃತ್ತನಾಗುತ್ತಿರುವುದು ಈಗಿರುವುದಕ್ಕಿಂತ ಉನ್ನತ ಹುದ್ದೆಗಾಗಿ. ಇಡೀ ಯೂರೋಪನ್ನು ಹಿಡಿತದಲ್ಲಿಡಬಹುದಾದ ಸ್ಥಾನಕ್ಕಾಗಿ. ನೀವು ಕರ್ನಾಟಕದಲ್ಲಿ ಕೂಡ ನೋಡಿರಬಹುದು. ಇಲ್ಲಿ ನಿವೃತ್ತರಾದ ಅಧಿಕಾರಿ ಮನೆಗೆ ಹೋಗುವುದಿಲ್ಲ, ಆತನಿಗಾಗಿ ಥಿಂಕ್ ಟ್ಯಾಂಕ್‌ಗಳು, ಕಮಿಷನ್‌ಗಳ ಅಧ್ಯಕ್ಷಗಿರಿಗಳು, ಪ್ಲಾನಿಂಗ್ ಕಮಿಷನ್‌ಗಳು.... ಎಲ್ಲ ಕಾಯುತ್ತಿರುತ್ತವೆ. ಮುಖ್ಯಮಂತ್ರಿಯ ಮೂರರಷ್ಟು ಸಂಬಳ ಪಡೆವ ಈ ಜನ ಜಿಗಣೆಗಳಂತೆ ಅಂಟಿಕೊಂಡು ರಾಕ್ಷಸರಂತೆ ಮುಂದುವರಿಯುತ್ತಲೇ ಹೋಗುತ್ತಾರೆ.

ಮರೆಯುವ ಮುನ್ನ



■ ಪಿ. ಲಂಕೇಶ್ -ಜುಲೈ 30, 1989

"ಒಲುಮೆ"

ಮನುಷ್ಯನ ನೀಚತನ-ಇದನ್ನು ನಾನು ರಾಕ್ಷಸತ್ವ ಅನ್ನುವುದಿಲ್ಲ, ಏಕೆಂದರೆ ಅದಕ್ಕಿಂತ ಕೆಟ್ಟದ್ದು, ಸಣ್ಣತನದ್ದು ಈ ನೀಚತನ ಅಥವಾ ಈವಿಲ್. ಶೇಕ್ಸ್‌ಪಿಯರ್‌ಗೆ ಈ ನೀಚತನ, ಮೂಲಭೂತ ಕೇಡಿಗತನ ಗೊತ್ತಿದ್ದಷ್ಟು ಬೇರೆ ಯಾರಿಗೂ ಗೊತ್ತಿರಲಿಲ್ಲವೆಂದು ಕಾಣುತ್ತದೆ. ಈತನ 'ಮೂರನೆ ರಿಚರ್ಡ್' ಎಂಬ ನಾಟಕದ ನಾಯಕ ಕುರೂಪಿ, ಗೂನು ಬೆನ್ನಿನವನು, ಹೆಳವ; ಈತನ ಆಶೆ ದೊರೆಯಾಗುವುದು, ದೊರೆಯ ಹೆಂಡತಿಯನ್ನು ವರಿಸುವುದು. ಇದಕ್ಕಾಗಿ ಇವನ ಸಿದ್ಧತೆ ಕೂಡ ಅದ್ಭುತವಾಗಿದೆ. ಬಾಯಿಬಿಟ್ಟರೆ ಕಾವ್ಯವೇ ಅವನ ನಾಲಗೆಯಿಂದ ಹೊಮ್ಮುತ್ತದೆ. ಇಂಗ್ಲಿಷ್ ಭಾಷೆಯ ಚೇತೋಹಾರಿ ಸಾಲುಗಳನ್ನು ಈ ಮೂರನೇ ರಿಚರ್ಡ್ ನಾಟಕದ ಆರಂಭದಲ್ಲೇ ಹೇಳುತ್ತಾನೆ: **Now is the winter of our discontent/made glorious summer by this sun of york....**




ಈತ ದೊರೆಯನ್ನು ಕೊಲ್ಲುತ್ತಾನೆ. ದೊರೆಯ ಪತ್ನಿ ಮಹಾ ಸುಂದರಿ. ದೊರೆಯ ಶವವನ್ನು ಈಕೆ ಸ್ಮಶಾನಕ್ಕೆ ಸಾಗಿಸುತ್ತಿದ್ದಾಗ ಈ ಕುರೂಪಿ, ಗೂನ ಮೂರನೆ ರಿಚರ್ಡ್ (ಈಗ ಇವನ ಹೆಸರು ಗ್ಲಾಸ್ಟರ್) ಅವಳನ್ನು ನಿಲ್ಲಿಸುತ್ತಾನೆ. ಕೊಲೆಗಡುಕ ಇವನೇ ಎಂದು ಗೊತ್ತಿರುವ ಈಕೆ ಬೈಯುತ್ತಾಳೆ, ಹೊಡೆಯಲು ಹೋಗುತ್ತಾಳೆ. ಆದರೆ ಕುರೂಪಿ ನಿರುತ್ಸಾಹಗೊಳ್ಳುವುದಿಲ್ಲ, ಅವಳನ್ನು ಹೊಗಳತೊಡಗುತ್ತಾನೆ. ಅವಳ ಸ್ಪರ್ಶಸುಖಕ್ಕಾಗಿ ತಾನು ದೊರೆಯನ್ನು ಕೊಂದುದಾಗಿ ಒಪ್ಪಿಕೊಳ್ಳುತ್ತಾನೆ. ಹೇಗೆ ಹೊಗಳುತ್ತಾನೆ, ಅವಳನ್ನು ಹೇಗೆ ವರ್ಣಿಸುತ್ತಾನೆ, ಹೇಗೆ ತನ್ನ ಆತ್ಮ ಅವಳಿಗಾಗಿ ಚೀರಿಕೊಳ್ಳುವಂತೆ ಮಾಡುತ್ತಾನೆ ಎಂದರೆ, ಆಕೆ ಅವನ ಮಾತನ್ನು ಆಲಿಸತೊಡಗುತ್ತಾಳೆ. ಅವನಿಗೆ ಭೇಟಿಯ ಅವಕಾಶ ನೀಡುವುದಾಗಿ ಹೇಳಿ ಗಂಡನ ಶವದೊಂದಿಗೆ ಮುಂದುವರಿಯುತ್ತಾಳೆ. ಕೊನೆಗೆ ಒಪ್ಪಿ ಅವನನ್ನು ಮದುವೆಯೂ ಆಗುತ್ತಾಳೆ.

ಯಾರ ನೀಚತನ? ಆತನ ಅಥವಾ ಆಕೆಯ? ಮನುಷ್ಯನ ಆಳದ ಮೃಗವನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ■

ಧ್ಯಾನ

ಮಾತು ಸತ್ತ ಸ್ಥಿತಿಯೇ
ಮನುಷ್ಯನ
ಪರಮೋಚ್ಚ ಧ್ಯಾನ!




ಪತನ

ತೃಣ ಮಾತ್ರದ ಹುಲ್ಲು
ನೆಲದಿಂದ
ಕಣ್ಮರೆಯಾದ ದಿನ
ಜೀವ ಸಂಕುಲದ
ಪತನ ಆರಂಭ?!

ರುಜು

ಯಾವುದೂ ಶಾಶ್ವತವಲ್ಲ
ಎಂದ ಮಹಾನುಭಾವರೆಲ್ಲಾ
ಅವರ ಸಮಾಧಿಗಳ ಮೇಲೆ
ರುಜು ಮಾಡಿ ಹೋಗಿದ್ದಾರೆ!



ಒಂದೇ ಮುಖ

ಜೀವ ಸಂವಾದದ
ಅರಿವಿಲ್ಲದವನು
ಎರಡಾಗಬಲ್ಲ!
ಭಯೋತ್ಪಾದಕ
ಇಲ್ಲಾ
ಧರ್ಮಬೋಧಕ!!



■ ಟಿ.ಎಸ್. ವಿವೇಕಾನಂದ

ಒಬ್ಬ ನಿಷ್ಠಾವಂತ ಸ್ನೇಹಿತ ಹತ್ತು ಸಾವಿರ ಬಂಧುಗಳಿಗೆ ಸಮ - ಯೂರಿಪೈಡ್ಸ್

ಮೊಸಳೆ ಮಾಂಸ ಕೇಳಿದ್ದ ರಿಕಿ ಪಾಂಟಿಂಗ್

ಬೆಂಗಳೂರಿನ ತುಂಬಾ ಈಗ ಸ್ನೇಕ್ ಡ್ರಿಂಕಿನದ್ದೇ ಸುದ್ದಿ. ವಿಸ್ಕಿ ಬಾಟಲಿನಲ್ಲಿ ಸತ್ತ ಹಾವನ್ನಿಟ್ಟು ಆಮೇಲೆ ವಿಸ್ಕಿ ಕುಡಿದರೆ ಸಖತ್ ಕಿಕ್ ಕೊಡುತ್ತದೆ ಎಂದು ಕಿಲಾಡಿ ವ್ಯಾಪಾರಿಗಳು ಕುಡುಕರನ್ನು ನಂಬಿಸಿ ಹಣ ಸುಲಿಯುತ್ತಿದ್ದಾರೆ. ಸತ್ತ ಹಾವು ಕೊಳೆಯುತ್ತದೆಯೇ ವಿನಾ ಅಮಲು ತರುತ್ತಾ ಅಂತ ನಮಗೆ ಡೌಟು ಬರುತ್ತೆ, ನಿಜ. ಆದರೆ ದೇಹ-ಮನಸ್ಸುಗಳಿಗೆ ಅಸಹಜ ಅಮಲು ಬೇಕೆನ್ನುವ ಗಾಂಪರಿಗೆ ಯಾರೂ ಬುದ್ಧಿ ಹೇಳಲು ಸಾಧ್ಯವಿಲ್ಲ ಬಿಡಿ. ಈ ಸ್ನೇಕ್ ಡ್ರಿಂಕ್ ವಿವಾದವಿರುವಾಗಲೇ ಚಿತ್ರ-ವಿಚಿತ್ರ ಮಾಂಸ ತಿನ್ನುವವರ ಬಗ್ಗೆಯೂ ಮಾತುಗಳೇಳುತ್ತಿವೆ.

ಮೊಸಳೆ ಮಾಂಸ ಅದರಲ್ಲೊಂದು. ಇತ್ತೀಚೆಗೆ ಆಸ್ಟ್ರೇಲಿಯಾ ಕ್ರಿಕೆಟ್ ಟೀಂ ಬೆಂಗಳೂರಿಗೆ ಬಂದಿದ್ದಾಗ ಲೀಲಾ ಪ್ಯಾಲೇಸ್ ಹೋಟೆಲ್‌ನಲ್ಲಿ ಉಳಿದಿದ್ದರು. ಬಂದ ದಿನವೇ ಕ್ಯಾಪ್ಟನ್ ರಿಕಿ ಪಾಂಟಿಂಗ್ ರೆಸ್ಟೋರೆಂಟ್‌ಗೆ ಹೋಗಿ ಮೆನು ಓದುತ್ತಾ,

"ಮೊಸಳೆ ಮಾಂಸ ಬೇಕು, ಇದೆಯಾ?" ಅಂದನಂತೆ. ವೈಟರ್ "ಅದೆಲ್ಲಾ ನಮ್ಮಲ್ಲಿಲ್ಲ" ಎಂದು ಬೆರಗಾಗಿ ಹೇಳಿದ್ದಾನೆ.

ಆ ಚೀನೀಯರು ಹಾವು, ಹಲ್ಲಿ, ಜಿರಳೆ ತಿನ್ನುವ ಸಂಗತಿ ನಮಗೆ ಗೊತ್ತು. ಈಗ ಅವರು ಹುಲಿ ಮಾಂಸವನ್ನೂ ತಿನ್ನಲು ಶುರು ಮಾಡಿದ್ದಾರೆ. ಮಾಂಸಕ್ಕೆಂದೇ ಅಲ್ಲಿ ಹುಲಿ ಸಾಕುವ ಉದ್ಯಮವೂ ಶುರುವಾಗಿದೆ. ಇನ್ನು ರಿಕಿ ಪಾಂಟಿಂಗ್ ವಿಚಾರಕ್ಕೆ ಬಂದರೆ ಆಸ್ಟ್ರೇಲಿಯಾದಲ್ಲೂ ಮಾಂಸಕ್ಕೆಂದೇ ಮೊಸಳೆ ಸಾಕುವ ಕ್ರೊಕೊಡೈಲ್ ಫಾರಂಗಳೂ ಇವೆ. ಮೊಸಳೆ ಮಾಂಸ ನಮ್ಮಲ್ಲಿ ಚಿಕನ್-ಮಟನ್ ಇದ್ದಂತೆ ಅಲ್ಲಿ ಕಾಮನ್ ಆಗುತ್ತಿದೆ.

ಇವರು ಮನುಷ್ಯರನ್ನು ತಿನ್ನುವ ಕಾಲ ಬಾರದಿರಲಿ ಅಂತ ಹಾರೈಸಬೇಕಷ್ಟೇ.

ಚೇ ಇಂಡಿಯಾಗೆ ಬಂದಿದ್ದಾಗ

ಚೇ ಗವೇರಾ ಹತ್ಯೆಯಾಗಿ 40 ವರ್ಷ ಆಯಿತು. ಇನ್ನಾರು ತಿಂಗಳು ಕಳೆದರೆ ಚೇ ಭಾರತಕ್ಕೆ ಬಂದು 10 ದಿನ ಇದ್ದು ಹೋದ ಘಟನೆಗೂ 50 ವರ್ಷ ಆಗುತ್ತದೆ. ಚೇ ಕುರಿತ ಪುಸ್ತಕಗಳಲ್ಲಿ ಅವನ ಭಾರತ ಭೇಟಿಯ ಬಗ್ಗೆ ವಿಶೇಷ ಉಲ್ಲೇಖಗಳೇನಿಲ್ಲ.

ಇದು ನಡೆದದ್ದು 1959 ರ ಜುಲೈ ಮೊದಲಾರ್ಧದಲ್ಲಿ. ಅಲ್ಲಿಗೆ ಕ್ಯೂಬಾ ಕ್ರಾಂತಿಯಾಗಿ ಕೇವಲ 6 ತಿಂಗಳಷ್ಟೇ ಆಗಿತ್ತು. ನೆರೆಯ ಚೀನೀಯರು ಅದಕ್ಕೂ 10 ವರ್ಷ ಮೊದಲೇ ಅದನ್ನು ಸಾಧಿಸಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಮಂಜೂರಾಗಿ ಕೇವಲ 12 ವರ್ಷಗಳಾಗಿತ್ತು. ಆಗ



ಪಿಲಾದ ಹಳ್ಳಿಗೆ ಭೇಟಿ ಕೊಟ್ಟ ಸಂದರ್ಭ

ಕ್ಯೂಬಾ ಸರ್ಕಾರದ ಅಧಿಕೃತ ನಿಯೋಗದ ಮುಖಂಡನಾಗಿ ಭಾರತಕ್ಕೆ ಬಂದ ಚೇ 10 ದಿನ ಇಲ್ಲಿದ್ದ. ಅಷ್ಟರಲ್ಲಾಗಲೇ ಭಾರತಕ್ಕೂ ಬ್ರಿಟಿಷರು ರೂಢಿ ಮಾಡಿಸಿದ್ದ protocol ಸಂಪ್ರದಾಯದ ಗರ ಬಡಿದುಕೊಂಡಿತ್ತು. ಇಡೀ ಜಗತ್ತೇ ಬೆರಗಾಗಿ ನೋಡುತ್ತಿದ್ದ ಚೇ ಭಾರತದ ಪಾಲಂ ವಿಮಾನ ನಿಲ್ದಾಣದಲ್ಲಿ ಬಂದಿಳಿದಾಗ ಹೋಗಿ ಅವನನ್ನು ಸ್ವಾಗತಿಸಿದ್ದು ಒಬ್ಬ ಸಾಧಾರಣ ಅಧಿಕಾರಿ ಮಾತ್ರ. ಚೇಗೆ ಕ್ಯೂಬಾ ಸರ್ಕಾರದಲ್ಲಿ ಯಾವುದೇ ಅಧಿಕೃತ ಸ್ಥಾನಮಾನ ಇರಲಿಲ್ಲ ಎಂದು ಪ್ರಧಾನಿ ನೆಹರು ಏರ್‌ಪೋರ್ಟಿಗೆ ಹೋಗದಂತೆ ಅಧಿಕಾರಿಗಳು ನೋಡಿಕೊಂಡಿದ್ದರು. ಇನ್ನೂ ಅಸಹ್ಯ ಅಂದರೆ ಅದೇ ದಿನ ಚೇಗೆ ಔತಣ ಕೊಟ್ಟು ನೆಹರು ಪೂರ್ತಿ ಎರಡು ಗಂಟೆಗಳನ್ನು ಅಲ್ಲಿದ್ದ ತಿಂಡಿ ತೀರ್ಥಗಳ ವಿವರಣೆ ನೀಡುತ್ತಾ ವ್ಯಯ ಮಾಡಿದರಂತೆ.

'ಚೀನಾ ಬೆಳವಣಿಗೆ ಬಗ್ಗೆ ಏನೆನಿಸುತ್ತೆ?' ಅಂತ ಚೇ ಕೇಳಿದರೆ ಈ ನೆಹರು ಸೇಬು ಹಣ್ಣಿನ ಖಾದ್ಯರ ವಿವರಣೆ ಕೊಡುವುದು. 'ಮಾವೋ ಬರವಣಿಗೆ ಓದಿದ್ದೀರಾ?' ಅಂದರೆ ಬಂಗಾಳಿ ಸ್ವೀಟ್ಸ್ ತಿನ್ನು ಚೆನ್ನಾಗಿದೆ ಅಂತ ನೆಹರು ಪ್ರತಿಕ್ರಿಯಿಸುವುದೆಲ್ಲಾ ಆಗಿ ಚೇಗೆ ಬೋರ್ ಹೊಡೆಸಿಬಿಟ್ಟರಂತೆ. ಚೇಯಂಥ ಅಪರೂಪದ ಧೈರ್ಯಶಾಲಿ, ಪ್ರಾಮಾಣಿಕ ವ್ಯಕ್ತಿಯೂ ನೆಹರೂನಲ್ಲಿ ಕುತೂಹಲ ಮೂಡಿಸಲಿಲ್ಲವೆಂದರೆ....! ಆಮೇಲೆ ಪರಸ್ಪರ ರಾಯಭಾರ ಸಂಬಂಧ ಸ್ಥಾಪಿಸುವ ಬಗ್ಗೆ ನೆಹರು ಜೊತೆ ಚರ್ಚಿಸಿದ ನಂತರ ಭಾರತದಲ್ಲಿದ್ದಷ್ಟೂ ದಿನ ಚೇ ಮತ್ತೆ ನೆಹರು ಬಳಿ ಸುಳಿಯಲಿಲ್ಲ.

ಬಿಡಿ ಚಿತ್ರಗಳು

● ಪಾರ್ವತೀಶ ●

ಅವನು ಪಿಲಾದ ಎಂಬ ಹಳ್ಳಿಗೆ ಹೋಗಿ ರೈತರೊಂದಿಗೆ ಮಾತಾಡಿದ, ಆ ಗ್ರಾಮದ ಶಾಲೆಗೆ ಭೇಟಿ ಕೊಟ್ಟ. ಲಕ್ನೋ ಸಕ್ಕರೆ ಸಂಶೋಧನಾ ಕೇಂದ್ರಕ್ಕೆ ಹೋದ. ಭಾರತದ ವಿವಿಧ ಕರಕುಶಲ ವಸ್ತುಗಳ ಬಗ್ಗೆ ವಿಚಾರಿಸಿ ಕೊಲ್ಕತ್ತಾಗೂ ಒಂದು ದಿನ ಹೋಗಿ ಬಂದ. ಇನ್ನೊಂದು ಆಶ್ಚರ್ಯ ಏನು ಗೊತ್ತೆ?

ಬಂಗಾಳದ ಕಮ್ಯುನಿಸ್ಟರೂ ಚೇ ಕೊಲ್ಕತ್ತಾ ಭೇಟಿಯನ್ನು ನಿರ್ಲಕ್ಷಿಸಿದ್ದು. ನೆಹರು ಅಷ್ಟರಲ್ಲಿ ಜಡನಾಯಕನಾಗಿದ್ದರೆ ಅದರಲ್ಲಿ ಆಶ್ಚರ್ಯವಿಲ್ಲ. ಆದರೆ ಈ ಕಮ್ಯುನಿಸ್ಟರಿಗೇನಾಗಿತ್ತೋ?

ಪಿಲಾದ ಗ್ರಾಮದ ಶಾಲೆ ನೋಡಿ ಬಂದ ಚೇ ಆಮೇಲೆ ಕ್ಯೂಬಾ ಸರ್ಕಾರಕ್ಕೆ ಕೊಟ್ಟ ವರದಿಯಲ್ಲಿ "ಭಾರತದ ಗ್ರಾಮೀಣ ಮಕ್ಕಳು ದುರ್ಬಲ ದೇಹ ಪ್ರಕೃತಿ ಹೊಂದಿದ್ದಾರೆ. ಶಿಕ್ಷಕರ ಸಂಖ್ಯೆ ಸಾಕಷ್ಟಿಲ್ಲ. ಮಕ್ಕಳು ನೆಲದ ಮೇಲೆ ಕುಳಿತು ಪಾಠ ಕೇಳುತ್ತಾ




ನೆಹರೂರವರನ್ನು ಭೇಟಿ ಮಾಡಿದ ಕ್ಷಣ

ಬರೆದುಕೊಳ್ಳುತ್ತಾರೆ" ಎಂದು ದಾಖಲಿಸಿದ್ದಾನೆ.

ಚೇ ಈ ಚಿತ್ರಣ ನೀಡಿ ಇನ್ನೇನು 50 ವರ್ಷಗಳಾಗಿವೆ. ನಮ್ಮ ಹ… ಬದಲಾಗಿದೆಯಾ?

ಇಂಡಿಯಾ… ಅರ್ಜೆಂಟೀನಾದಲ್ಲಿ… ತಾಯಿಗೆ ಚೇ ಒ… ಬರೆಯುತ್ತಾ,

"ನನಗೆ ನನ್ನದ… ಮನೆಯಿಲ್ಲ, ಹೆಣ್ಣ… ಅಣ್ಣ-ತಂಗಿ ಇಲ್ಲ… ಸ್ನೇಹಿತರೆನಿಸಿಕೊಂ… ನಿಲುವನ್ನು ಒಪ್ಪು… ಮಾತ್ರ ನನ್ನ ಸ್ನೇಹಿತರಾಗಿರಬಹುದು. ನನಗೆ ನನ್ನ … ಇದೆ, ಅದೇ ಮುಖ್ಯ" ಎಂದಿದ್ದ. ಆ … ಸಾಧಿಸುವ ಹಠ ತೊಟ್ಟೇ ಬೊಲಿವಿಯಾಗೆ ಹೋಗಿ ಮತ್ತೆ ಗೆರಿಲ್ಲಾ ಯೋಧನಾದ. ಅಮೆರಿಕದಿಂದ ಹತ್ಯೆಗೀಡಾದ.



ಪ್ರತಿ ದಮನಿತ ಮನುಷ್ಯನೂ ಹೋರಾಟಗಾರನಾಗಿ ಬದಲಾಗಬೇಕು ಎಂದು ಚೇ ಆಶಿಸುತ್ತಿದ್ದ. ಆಲ್ ಇಂಡಿಯ… ಅಂದು ಚೇ ಸಂದರ್ಶನ ಮಾಡಿದ್ದ… ಎಂಬುವರು ಈಗಲೂ ದೆಹಲಿಯಲ್ಲಿದ…

"ಮಿಲಿಟರಿ ಯೂನಿಫಾರಂ, ಹ… ಬಾಯಲ್ಲಿರುತ್ತಿದ್ದ ಮಾಂಟೆ ಕಾರ್ಲೆ ಸಿ… ನೋಡಿದರೆ ಚೇ ಗವೇರಾ ನನಗೆ ಒ… ಕಂಡ" ಎನ್ನುತ್ತಾರೆ ಆಕೆ.

ಪ್ರಖ್ಯಾತ ಕಲಾವಿದ ಅಬು ಅಬ್ರಾಹ… ಚೇ ರೇಖಾಚಿತ್ರವೂ ಇಲ್ಲಿದೆ.

ಬಿಎಸ್‌ಪಿಯಿಂದ ದಲಿತರ ವಿಮೋಚನೆ ಸಾಧ್ಯವಿಲ್ಲ


ನಿಮ್ಮ ಪತ್ರಿಕೆ ನಾಡಿನ ಪತ್ರಿಕೆಗಳಲ್ಲಿ ಬಹಳ ಮುಖ್ಯವಾದುದು. ನಿಮ್ಮ ಪತ್ರಿಕೆಯ ಮೂಲಕ ಸರಿಯಾದ ಸಾಮಾಜಿಕ ಜಾಗೃತಿ ಮೂಡಿಸುತ್ತಿದ್ದೀರಿ. ಆದರೆ ನಿಮ್ಮ ಪತ್ರಿಕೆ ಕೋಮುವಾದಕ್ಕೆ ಹೆಚ್ಚು ಆದ್ಯತೆ ಕೊಟ್ಟಿದೆ. ಅದೂ ಬೇಕು. ಬೇಡವೆಂದು ಅಲ್ಲ. ಆದರೆ ಈ ಸಲ ನಿಮ್ಮ ಪತ್ರಿಕೆ ಬಿಎಸ್‌ಪಿ ಪಕ್ಷದ ಬಣ್ಣವನ್ನು ಬಯಲು ಮಾಡುವಂತಹ ವರದಿ ಮತ್ತು ಲೇಖನಗಳನ್ನು ಒಳಗೊಂಡಿದ್ದು ಸಮಯೋಚಿತವಾಗಿತ್ತು. ಇತ್ತೀಚೆಗೆ ಎಲ್ಲೂ ಸಲ್ಲದವರು ಬಿಎಸ್‌ಪಿಗೆ ಹಾರುತ್ತಿದ್ದಾರೆ. ಬಿಎಸ್‌ಪಿ ದಲಿತರಿಗೆ ಅನುಕೂಲ ಮಾಡುವ ಪಕ್ಷ ಎಂದು ನಾನು ತಿಳಿದಿದ್ದೆ. ಆದರೆ ಬಿ.ಎಂ. ಪುಟ್ಟಯ್ಯನವರ ಲೇಖನ ಓದಿದ ಮೇಲೆ ಅದು ಸುಳ್ಳು ಎಂಬುದು ಗೊತ್ತಾಯಿತು. ಬಿಎಸ್‌ಪಿಯು ದಲಿತರ ಭೂಮಿ, ಆಸ್ತಿಗಳ ಬಗ್ಗೆ ಏನೂ ಮಾಡಿಲ್ಲ; ಮಾಡುವುದೂ ಇಲ್ಲ ಎಂಬುದನ್ನು ಬಿ.ಎಂ. ಪುಟ್ಟಯ್ಯನವರು ಸರಿಯಾಗಿ ಗುರುತಿಸಿದ್ದಾರೆ. ಈ ವಿಷಯದಲ್ಲಿ ನನ್ನ ಕಣ್ಣು ತೆರೆಸಿದ್ದಕ್ಕಾಗಿ ತಮಗೆ ಮತ್ತು ಲೇಖನ ಬರೆದ ಬಿ.ಎಂ. ಪುಟ್ಟಯ್ಯನವರಿಗೆ ಅನಂತ ಧನ್ಯವಾದಗಳು.

-ಮಾಲತೇಶ. ಶಿರುಗುಪ್ಪ

ಆನೆ ಬಂತೊಂದಾನೆ
ಯಾವೂರಾನೆ
ಉತ್ತರದೇಶದಾನೆ
ಇಲ್ಲಿಗ್ಯಾಕೆ ಬಂತು
ಓಟು ಕೇಳಾಕ ಬಂತು
ಯಾರ್‍ಯಾರ ಓಟು
ದಿಕ್ಕಿಲ್ಲದವರ ಓಟು
ಓಟಿಗೇನು ಕೊಡ್ತು
ಹೆಂಡ-ಸೀರೆ ಕೊಡ್ತು
ಆಮೇಲೇನಾಯ್ತು
ನೆಲೆಕಾಣದಾಯ್ತು
ಮುಂದಕ್ಕೇನಾಯ್ತು
ಕುಂಡೆ ಸುಟ್ಟ ಬೆಕ್ಕಿನಂಗೆ
ಮಂಡೆಮೇಲೆ ಕೈಯಿಟ್ಕೊಂಡು
ಯುಪಿಗೋಡೋಯ್ತು.

-ಡಾ.ಭೂಮಿಗೌಡ, ಮಂಗಳೂರು

ನಿಮ್ಮ ಪತ್ರಿಕೆಯ ಡಿಸೆಂಬರ್ 26ರ ಸಂಚಿಕೆಯಲ್ಲಿ ಪ್ರಕಟವಾದ ಬಿ.ಎಂ. ಪುಟ್ಟಯ್ಯನವರ ಆನೆ ಬಂತೊಂದಾನೆ ಲೇಖನಕ್ಕೆ ಪೂರಕವಾಗಿ ಪುಟ್ಟ ಪ್ರತಿಕ್ರಿಯೆ.



ಜುಲೈ 4ರ ಸಂಚಿಕೆಯಲ್ಲಿ 'ಆನೆ ಬಂತೊಂದಾನೆ ಯಾವುರಾನೆ?' ಶೀರ್ಷಿಕೆಯ ಹೊತ್ತು ಬಂದ ಲೇಖನ ಸರಿಯಾದ ಸಮಯದಲ್ಲಿ ಹಾಗು ಸರಿಯಾದ ರಾಜಕೀಯ ವಿಶ್ಲೇಷಣೆ ಹಾಗು ಬಹುಜನ ಸಮಾಜ ಪಕ್ಷದ ಅಸಲಿ ಬಣ್ಣವನ್ನು ಬಯಲು ಮಾಡಿದ ಲೇಖನವಾಗಿದೆ. ಕಾರಣ ಸಾಮ್ರಾಜ್ಯಶಾಹಿ ದಾಳಿಗೆ ಈ ದೇಶದ ಇಡೀ ಸಂಪತ್ತು ಹಾಗು ಸಂಸ್ಕೃತಿ ಒಳಗಾಗಿರುವಾಗ, ಬಹುರಾಷ್ಟ್ರೀಯ ಕಂಪೆನಿಗಳ ಬಗ್ಗೆ ಉದಾರವಾದವನ್ನು ಹೊಂದಿರುವುದಲ್ಲದೆ ದಲಿತರ ವಿಮೋಚನೆಗೆ ಕೇವಲ ರಾಜಕಾರಣವನ್ನು ತೋರಿಸುವ ಬಿಎಸ್‌ಪಿಯ ಬಗ್ಗೆ ಈ ಲೇಖನ ಬೆಳಕು ಚೆಲ್ಲುತ್ತದೆ ಹಾಗು ರಾಜ್ಯಾಧಿಕಾರದ ಬಗ್ಗೆ ತಪ್ಪು ಮಾಹಿತಿಯನ್ನು ಹೊಂದಿದ ಬಿಎಸ್‌ಪಿಗೆ ಈ ಲೇಖನ ಸರಿಯಾದ ದಿಕ್ಕು ತೋರಿಸಿದೆ.



ಅಮಾಯಕ ದಲಿತರ ತಲೆಯಲ್ಲಿ ಭ್ರಮೆಯನ್ನು ತುಂಬುವ ಬಿಎಸ್‌ಪಿಯ ಬದಲಿಗೆ ಸರಿಯಾದ ಹೋರಾಟದ ದಿಕ್ಕನ್ನು ಈ ಲೇಖನ ತೋರಿಸುತ್ತದೆ. ಆಳುವವರ ಮನೆಯಲ್ಲಿ ಆಳುಮಕ್ಕಳಾಗಿ ದಿಕ್ಕೆಟ್ಟು ನಿಂತಿರುವ ದಲಿತರ ವಿಮೋಚನೆ ಈ ಜನರ ಸಂಘಟಿತ ಹೋರಾಟದಿಂದ ಮಾತ್ರ ಸಾಧ್ಯ. ಅದು ಪ್ರಮುಖವಾಗಿ ಭೂ ಹೋರಾಟದ ಮೂಲಕ ಸಾಧಿಸಬಹುದಾಗಿದೆ ಎಂಬ ಅಭಿಪ್ರಾಯ ಸತ್ಯವಾದುದಾಗಿದೆ. ಇದಕ್ಕೆ ಪೂರಕವೆಂಬಂತೆ ಅಂಬೇಡ್ಕರರ ಮಾತಿನಲ್ಲೇ ಹೇಳುವುದಾದಲ್ಲಿ "ಒಂದು ರಾಜಕೀಯ ಪಕ್ಷ ಹಾಗು ಒಬ್ಬ ಮಹಾತ್ಮನಿಂದ ದಲಿತರ ವಿಮೋಚನೆ ಸಾಧ್ಯವಿಲ್ಲ" ಎಂಬುದು ಸತ್ಯ. ಒಟ್ಟಾರೆ ಬಿಎಸ್‌ಪಿ ಎಂಬುದು ಸಾಮ್ರಾಜ್ಯಶಾಹಿ ನೀತಿಗಳನ್ನು ಜಾರಿ ಮಾಡಲು ಇರುವ ಒಂದು ವೇದಿಕೆ, ಇದನ್ನು ಬರುವ ದಿನಗಳು ಸಾಬೀತುಪಡಿಸುತ್ತವೆ. ಲೇಖನ ಪ್ರಕಟಿಸಿದ ಪತ್ರಿಕೆಗೂ ಹಾಗು ಲೇಖಕರಾದ ಬಿ.ಎಂ. ಪುಟ್ಟಯ್ಯನವರಿಗೂ ಕ್ರಾಂತಿಕಾರಿ ಧನ್ಯವಾದಗಳು.

-ಬಿ. ರುದ್ರಯ್ಯ. ಬೆಂಗಳೂರು

ಕೆಲವರು ದಲಿತ ಬುದ್ಧಿಜೀವಿಗಳು ದಲಿತರು ಬೌದ್ಧಧರ್ಮಕ್ಕೆ ಮತಾಂತರ ಆಗಬೇಕು ಎನ್ನುತ್ತಿದ್ದಾರೆ. ಮತ್ತೆ ಕೆಲವರು ಜಾಗತೀಕರಣ ದಲಿತರನ್ನು ಉದ್ಧಾರ ಮಾಡುತ್ತದೆ ಎಂದು ತಪ್ಪು ಮಾರ್ಗದರ್ಶನ ಮಾಡುತ್ತಿದ್ದಾರೆ. ದಲಿತ ಸಂಘಟನೆಗಳು ಸಂಪೂರ್ಣ ನಾಶವಾಗಿವೆ. ಇಂತಹ ಸಂದರ್ಭದಲ್ಲಿ ಶೋಷಿತ ದಲಿತರು ಯಾವ ರಾಜಕೀಯ ಪಕ್ಷ ಸೇರಬೇಕು? ಹಳ್ಳಿಗಳಲ್ಲಿ ಕೂಲಿ ಮಾಡಲು ಕೂಲಿ ಸಿಗುತ್ತಿಲ್ಲ. ಪಡಿತರ ಚೀಟಿಗೆ ಪರದಾಡಿ ಪರದಾಡಿ ಸೋತಿದ್ದೇವೆ. ಇಂತಹ ಗೋಳನ್ನು ಯಾರು ಕೇಳಬೇಕು. ಬೌದ್ಧಧರ್ಮ ಇದನ್ನು ಕೊಡುತ್ತದೆಯೇ? ದಲಿತರನ್ನು ದಾರಿ ತಪ್ಪಿಸಿ ಓಟು ಹಾಕಿಸಿಕೊಂಡು ವಿಧಾನ ಸೌಧದಲ್ಲಿ ಮಜಾ ಮಾಡುತ್ತಾರೆ. ಈ ಕೆಲಸವನ್ನು ಕಾಂಗ್ರೆಸ್ ಮಾಡಿದೆ. ಜೆಡಿಎಸ್ ಮತ್ತು ಬಜೆಪಿ ಮಾಡಿವೆ. ಮುಂದೆ ಬಿಎಸ್‌ಪಿ ಅದನ್ನೇ ಮಾಡುತ್ತದೆ. ಬಹುಜನರನ್ನು ಸುಲಿಗೆ ಮಾಡಲು ಬಿಎಸ್‌ಪಿ ಆದರೇನು? ಬಜೆಪಿ ಆದರೇನು? ನಮ್ಮ ಪಾಲಿಗೆ ಎರಡೂ ಒಂದೇ.

-ಸೋಮಣ್ಣ. ಕೊಪ್ಪಳ


ತೆಗಳಿಕೆ ಹೊಗಳಿಕೆ

ದ್ರೋಹ, ವಿಶ್ವಾಸಘಾತುಕತನ… ಬಗೆಗಳಿವೆಯಾದರೂ ಅವುಗಳಲ್ಲಿ ಉ… ಕನ್ನ ಹಾಕುವುದು ಹಾಗೂ 95 ಉಪಕ… ತಪ್ಪನ್ನೇ ದೊಡ್ಡದಾಗಿ ನೆನಪಿಸಿಕೊಂಡು ಎ… ಮುಖ್ಯವಾಗಿ ಪರಿಗಣಿಸಬಹುದು. ಇವು… ಅತ್ಯಂತ ಹೀನಗುಣಗಳಲ್ಲಿ ಒಂದು.

ಡಿ. 12 ರ ಕಂಡಹಾಗೆಯಲ್ಲಿ ತಾ… ಕಲ್ಕುಳಿಯವರ ಬಗ್ಗೆ ಬರೆದ 'ಅಡಿಕೆಗೆ… ನೋವು' ಓದಿ… ವಿಶ್ವಾಸಘಾತುಕ… ಮನಸ್ಸುಗಳ ಕ… ಬೇಸರವಾಯಿತ… ಇಂತಹವಕ್ಕಾಗ… ರಣಹದ್ದುಗಳಂ… ಕಾಯುತ್ತಿರುವ… ದುರುದ್ದೇಶಪೂ… ಮನಸ್ಸುಗಳು… ದ್ರೋಹಿಗಳಿಗೆ… ನಾಟಕವಾದಿ… ದುರ್ಲಾಭ ಪಡೆಯುತ್ತಿರುವುದು ನೋ… ಸಂಗತಿಯಾಗಿವೆ.

ಕ್ಷುಲ್ಲಕ ಕಾರಣಗಳಿಗಾಗಿ ದಲಿತರ… ಬಹಿಷ್ಕಾರ ಹಾಕಿದಾಗಲಾಗಲೀ, ದ… ದೌರ್ಜನ್ಯ ನಡೆದಾಗಲಾಗಲೀ ಚಕಾರವ… ಗಳು ಕಲ್ಕುಳಿಯವರ ಪ್ರಕರಣ ಬಂ… ವಿರೋಧಿ ಕಲ್ಕುಳಿಗೆ ಧಿಕ್ಕಾರ'ವೆಂಬ ಬೊ… ಸೋಗಿನ ದಲಿತ ಪ್ರೇಮ ಮೆರೆದವು. ಮ… ರಕ್ಷಣೆ ನೀಡಿ ಎಂದು ಬೊಬ್ಬಿರಿದ ಬಿಜೆಪಿ… ನಾನು ಆಶ್ರಯ ನೀಡುತ್ತೇನೆಂದ ಮೋದಿ… ಕಳಕಳಿಯಲ್ಲ, ಬದಲಿಗೆ ಅವಘಡಗಳ… ಹೊಂಚಿ ಅಡ್ಡಹಾದಿಯ ಮೂಲಕ… ತಂತ್ರವಷ್ಟೆ. ಇಂತಹ ಹುಸಿ ಕಾಳಜಿ… ಸ್ವಾರ್ಥ ಪರ ರಾಜಕಾರಣ ನಡೆಸುವ ಹಾ… ಮೇಲೆ ಅವರ ಜನರನ್ನೇ ಎತ್ತಿಕಟ್ಟಿ ವಿ… ಪಡುವ ವಿಘ್ನ ಸಂತೋಷಿಗಳ ಮೇಲೆ…

-ರವಿ ಪುತ್ತೂರ.



ಕಳೆದ ಎರಡು ವರ್ಷಗಳಲ್ಲಿ ಒಂದೇ ಸಮನೆ ಸರಿ ಸುಮಾರು ಒಂದು ಡಜನ್ ಫ್ಲಾಪ್ ಚಿತ್ರಗಳನ್ನು ನೀಡಿರುವ ಸಾಯಿಪ್ರಕಾಶ್‌ರ ಬಹು ನಿರೀಕ್ಷಿತ ಚಿತ್ರ 'ಲವ-ಕುಶ' ಕೂಡ ನಿರೀಕ್ಷೆಯಂತೆಯೇ ಫ್ಲಾಪ್ ಆಗುವ ಎಲ್ಲಾ ಸೂಚನೆಗಳನ್ನು ನೀಡಿದೆ. ಆದರೆ ಯಾವ ಮುಲಾಜೂ ಇಲ್ಲದೆ ಈಗಾಗಲೇ ಕನಿಷ್ಠ ಒಂದು ಡಜನ್ ನಿರ್ಮಾಪಕರನ್ನು 'ಸಾಯಿ'ಸಿರುವ ಈ 'ಸಾಯ್ತು'ಪ್ರಕಾಶ್‌ಗೆ ಅದು ಹೇಗೆ ಒಂದರ ಮೇಲೊಂದು 'ಹತ್ಯಾ'ವಕಾಶಗಳು ಸಿಗುತ್ತವೆ ಎಂಬುದೇ ವಿಚಿತ್ರ!

ಯಾವುದೇ ಒಬ್ಬ ನಿರ್ದೇಶಕನಿಗೆ ಸಿನಿಮಾ ಒಂದನ್ನು ಮುಗಿಸಲು ಏನಿಲ್ಲವೆಂದರೂ ಐದು ತಿಂಗಳ ಕಾಲಾವಕಾಶ ಬೇಕು. ಚಿತ್ರೀಕರಣಕ್ಕೆ ಮುನ್ನ ತಯಾರಿ ನಡೆಸಲು ಕನಿಷ್ಠ ಎರಡು ತಿಂಗಳು, ಆಮೇಲೆ ಶೂಟಿಂಗಿಗೆ ಸುಮಾರು ಐವತ್ತು ದಿನ, ಆನಂತರದ ಡಬ್ಬಿಂಗು, ಎಡಿಟಿಂಗು, ರೀರೆಕಾರ್ಡಿಂಗು, ಗ್ರೇಡಿಯೇಷನ್ನು, ಇತ್ಯಾದಿಗಳಿಗೆ ಒಂದು ತಿಂಗಳು. ಇದೆಲ್ಲವಾದ ಮೇಲೆ ಸೆನ್ಸಾರ್ ಮಾಡಿಸುವ ಪ್ರಕ್ರಿಯೆ. ಅದಕ್ಕೆ ಅಂದದ್ದು ಒಂದು ಚಿತ್ರಕ್ಕೆ ಐದು ತಿಂಗಳು ಬೇಕೇಬೇಕು ಅಂತ.

ಆದರೆ ಈ ಸಾಯಿಪ್ರಕಾಶ್ ತನ್ನ ಸಿನಿಮಾವನ್ನೂ ಮತ್ತದರ ನಿರ್ಮಾಪಕನನ್ನೂ 'ಸಾಯಿ'ಸುವ ಪ್ರಕ್ರಿಯೆ ಎಂತಹದ್ದೆಂದರೆ, ತನಗಿರುವ ಸೆಂಟಿಮೆಂಟಿನ ಕ್ವಾಲಿಫಿಕೇಷನ್‌ನೊಂದಿಗೆ ರೀಮೇಕ್ ಎಂಬ ಕಲೆಯನ್ನು ಪ್ರಯೋಗಿಸುತ್ತಾರೆ. ಹಾಗಾಗಿ ಈತನ ಕೈಗೆ ಸಿನಿಮಾವೊಂದನ್ನು ಅರ್ಪಿಸಿದರೆ, ಇಪ್ಪತ್ತೈದು ದಿನಗಳಲ್ಲೇ ಎರ್‍ರಾಬಿರ್‍ರಿ ರೀಲು ಸುತ್ತುತ್ತಾರೆ. ಅಷ್ಟೇ ಅಲ್ಲ, ಹಾಡು ಮತ್ತು ಫೈಟಿಂಗ್ ದೃಷ್ಯಗಳು ಚಿತ್ರೀಕರಣಗೊಳ್ಳುವಾಗ ಈತ ಆ ದಿಕ್ಕಿನಲ್ಲಿ ತಲೆಹಾಕಿಯೂ ಮಲಗುವುದಿಲ್ಲ. ಇನ್ನು ಈ ಮಹಾಶಯುಡು ಎಡಿಟಿಂಗಿಗಾಗಲಿ, ರೀರೆಕಾರ್ಡಿಂಗಿಗಾಗಲಿ ಬರುವ ಮಾತೇ ಇಲ್ಲ. ಇಂತಹ ಕಲಾ ಸಾಮರ್ಥ್ಯದಿಂದಲೇ 'ಸಾಯ್ತು'ಪ್ರಕಾಶ್ ಎರಡು ತಿಂಗಳಲ್ಲಿ ಚಿತ್ರವನ್ನು ಸಂಪೂರ್ಣಗೊಳಿಸುತ್ತಾರೆ.

'ಸಾಯ್ತು'ಪ್ರಕಾಶರ ಮರ್ಮ

ಈತನ ಚಿತ್ರ ನಿರ್ದೇಶನದ ಮರ್ಮವನ್ನು ಅರಿಯದ ನಿರ್ಮಾಪಕರು "ಸಾಯಿಪ್ರಕಾಶ್ ಯಾವುದೇ ಕಿರಿಕಿರಿ ಮಾಡದೇ ಬೇಗ ಸಿನಿಮಾ ಮುಗಿಸಿಕೊಡುತ್ತಾರೆ" ಎಂಬ ಏಕೈಕ ಆಶೆಗೆ ಬಿದ್ದು ಸಿಕ್ಕಸಿಕ್ಕಲ್ಲಿ ಮೀಟರ್ ಬಡ್ಡಿ ಮೇಲೆ ಹಣ ತಂದು ಈತನ ಒಡಲಿಗೆ ಸುರಿಯುತ್ತಾರೆ!

ಹಿಂದೊಮ್ಮೆ ಗಾಂಧಿನಗರದಲ್ಲಿ ಮಾಲಾಶ್ರೀಗೆ ಯಾವುದೇ ಪೈಪೋಟಿ ಇಲ್ಲದೆ ಆಕೆ ಮೆರೆಯುತ್ತಿದ್ದಾಗ ಇದೇ ಸಾಯಿ ಆಕೆಯಿಂದ ಸುಮಾರು ಆರು ತಿಂಗಳ ಕಾಂಟ್ರಾಕ್ಟ್ ತೆಗೆದುಕೊಂಡು ಹದಿನೈದು ದಿನಕ್ಕೊಂದು ಸಿನಿಮಾ ಎಂಬಂತೆ ಹತ್ತಾರು ಚಿತ್ರಗಳನ್ನು ತೆಗೆದು ಬಿಸಾಡಿದ್ದರು.

ಹೀಗೆ ಟಾಯ್ಲೆಟ್ಟಿಗೆ ಹೋಗಿ ಬಂದಂತೆ ಸಿನಿಮಾ ತೆಗೆದರೆ ಅದನ್ನು ನೋಡಲು ಓಡೋಡಿ ಬರಲು ಕನ್ನಡ ಪ್ರೇಕ್ಷಕನೇನು ಬಿಖರಾನಾ? ಸಾಯಿಪ್ರಕಾಶ್ ಹೀಗೆ 'ಸಾಯಿ'ಸಿದ ಸಿನಿಮಾಗಳು ತೋಪಾಗಲಾರಂಭಿಸಿದವು.

ಆದರೆ ಇದ್ಯಾವುದರ ಬಗ್ಗೆಯೂ ತಲೆ ಕೆಡಿಸಿಕೊಳ್ಳದ ಪ್ರಕಾಶುಡು ಹಲವಾರು ನಿರ್ಮಾಪಕರನ್ನು 'ಸಾಯಿ'ಸುತ್ತಲೇ ಬಂದಿದ್ದಾರೆ. ಈ ವರ್ಷವನ್ನೇ ಉದಾಹರಣೆಯಾಗಿ ತಗೆದುಕೊಳ್ಳಿ: 2007ರಲ್ಲಿ ಬಿಡುಗಡೆಗೊಂಡ ಸಾಯಿ ನಿರ್ದೇಶನದ 'ಒಡಹುಟ್ಟಿದವಳು', 'ಪರೋಡಿ', 'ಯುಗಾದಿ', 'ರೋಡ್ ರೋಮಿಯೋ', 'ಹೆತ್ತರೆ ಹೆಣ್ಣನ್ನೇ ಹೆರಬೇಕು' ಈಗ 'ಲವಕುಶ' ಇವೆಲ್ಲವೂ ಸಾಯಿಪ್ರಕಾಶರ 'ಹತ್ಯಾಕಾಂಡ'ಕ್ಕೆ ಬಲಿಯಾಗಿರುವ ಸಿನಿಮಾಗಳೇ!

ಇದಿಷ್ಟು ಸಾಲದೆಂಬಂತೆ ಸದ್ಯದಲ್ಲೇ ಅವರ ನಿರ್ದೇ'ಶವ'ದ ಮತ್ತೊಂದು ಸಿನಿಮಾ ಬಿಡುಗಡೆಯಾಗಲಿದೆ. ಅದು ಬಹುತೇಕ ರಿಟೈರ್ಡ್ ನಟಿಯರೇ ನಟಿಸಿರುವ 'ನವಶಕ್ತಿ ವೈಭವ'. ಐದು ವರ್ಷಗಳ ಹಿಂದೆ ಶುರುವಾದ ಈ ಚಿತ್ರ ಇನ್ನೂ ಸಂಪೂರ್ಣಗೊಳ್ಳದಿರುವುದಕ್ಕೆ ಕಾರಣ ಅದನ್ನು ನಿರ್ಮಾಪಕಿ ಜಯಶ್ರೀದೇವಿ ಅರ್ಧಕ್ಕೇ ನಿಲ್ಲಿಸಿ ಆಂಧ್ರಕ್ಕೆ ಪಲಾಯನಗೈದದ್ದು. ಈಗ ಅವರು ವಾಪಸ್ಸು ಬಂದು ಈ ಚಿತ್ರವನ್ನು ಪೂರ್ಣಗೊಳಿಸಿ ತಮ್ಮ ಅ(ದುರಾ)ದೃಷ್ಟವನ್ನು ಮತ್ತೊಮ್ಮೆ ಪರೀಕ್ಷಿಸಲು ಮುಂದಾಗಿದ್ದಾರೆ.

ಈ 'ನವಶಕ್ತಿ'ಗಳಾದರೂ 'ಸಾಯ್ತು'ಪ್ರಕಾಶರನ್ನು ಸೋಲಿನಿಂದ ಮತ್ತು ಜಯಶ್ರೀದೇವಿಯನ್ನು ಸಾಲದಿಂದ ಮುಕ್ತಗೊಳಿಸುತ್ತಾರೆಯೇ? ಆ ಬ್ರಹ್ಮನಿಗೂ ಉತ್ತರ ಗೊತ್ತಿರುವಂತಿಲ್ಲ!

■ ಜಿ. ಅರುಣ್

'ಜೋಡಿ' ಬಂದ ದಾರಿ

ಈಗಾಗಲೇ ಇಂತಹದ್ದೇ ಕಥಾವಸ್ತುವನ್ನು ಹೊಂದಿರುವ ಹಲವಾರು ಚಿತ್ರಗಳು, ಹಲವಾರು ಭಾಷೆಗಳಲ್ಲಿ ಬಂದಿವೆ. ಹಾಲಿವುಡ್ಡಿನ 'ಫ್ರೆಂಚ್ ಕಿಸ್', ತೆಲುಗಿನಲ್ಲಿ 'ಭಾವನಾಗಾರು ಭಾಗುನ್ನಾರಾ', ಹಿಂದಿಯಲ್ಲಿ 'ಜಬ್ ವಿ ಮೆಟ್' ಎಂಬ ಸಿನಿಮಾಗಳಲ್ಲಿ ಮೊದಮೊದಲು ನಾಯಕ ಮತ್ತು ನಾಯಕಿಗೆ ಒಬ್ಬರನ್ನೊಬ್ಬರು ಕಂಡರಾಗುವುದಿಲ್ಲ. ಅದಕ್ಕೆ ಕಾರಣ ಆಕೆ ಬೇರೆಯವನನ್ನು ಪ್ರೀತಿಸುತ್ತಿರುವುದು ಮತ್ತು ಆತ ಇನ್ಯಾವುದೋ ಗುರಿಯನ್ನು ಹೊಂದಿರುವುದೇ ಆಗಿರುತ್ತವೆ. ಆದರೆ ಅನಿವಾರ್ಯವಾಗಿ ಅವರಿಬ್ಬರೂ ಒಂದು ಪ್ರಯಾಣದಲ್ಲಿ ತೊಡಗಬೇಕಾಗುತ್ತದೆ ಮತ್ತು ಬಹಳ ದಿನಗಳ ಕಾಲ ಜೊತೆಗಿರಬೇಕಾಗುತ್ತದೆ. ಹೀಗೆ ಜೊತೆಗಿರುವಾಗಲೇ ಅವರಿಬ್ಬರ ನಡುವೆ ಪ್ರೇಮಾಂಕುರವಾಗಿ ಅವರು ಜೊತೆಯಾಗುವುದರೊಂದಿಗೆ ಚಿತ್ರ ಅಂತ್ಯಗೊಳ್ಳುತ್ತದೆ.



ನಂಜುಂಡೇಗೌಡರು ಇಂತಹ ಹಲವು ಸಿನಿಮಾಗಳಿಂದ 'ಸ್ಫೂರ್ತಿ' ಪಡೆದು 'ನಾನು ನೀನು ಜೋಡಿ' ಎಂಬ 'ಅಸಲಿ' ಕನ್ನಡ ಚಿತ್ರವನ್ನು ನಿರ್ದೇಶಿಸಿದ್ದಾರೆ. ಇದರಲ್ಲೂ ಮೇಲೆ ಹೇಳಿರುವಂತೆ, ಹೀರೋ-ಹೀರೋಯಿನ್‌ಗೆ ಮೊದಮೊದಲು ಆಗಿಬರುವುದಿಲ್ಲ. ಅನಿವಾರ್ಯವಾಗಿ ಒಟ್ಟಿಗೆ ಪ್ರಯಾಣ ಮಾಡುತ್ತಾರೆ, ಜೊತೆಗೆ ಇರುತ್ತಾರೆ ಮತ್ತು ಕೊನೆಗೆ ಒಂದಾಗುತ್ತಾರೆ. ಬೇರೆಯವರು ಈಗಾಗಲೇ ಹೇಳಿರುವುದನ್ನು, ತೋರಿಸಿರುವುದನ್ನು ಅಚ್ಚುಕಟ್ಟಾಗಿ ಕನ್ನಡಕ್ಕೆ ಭಟ್ಟಿ ಇಳಿಸುವುದು ಕಷ್ಟದ ಕೆಲಸವಲ್ಲವಾದ್ದರಿಂದ ನಂಜುಂಡೇಗೌಡ ಅದನ್ನು ಸುಲಭವಾಗಿ ಮಾಡಿದ್ದಾರೆ ಎಂದಷ್ಟೇ ಹೇಳಬಹುದು!



ಗೌಡರ ಗೆಳೆಯ ಹಂಸಲೇಖಾ ಸಂಗೀತದ ಮುಖಾಂತರ ಒಳ್ಳೆಯ 'ಸಾಥ್' ನೀಡಿದ್ದಾರೆ. ವಿಜಯರಾಘವೇಂದ್ರ, ನಿಖಿತಾ, ಶಶಿಕುಮಾರ್ ನಟಿಸಿದ್ದಾರೆ. ಲಾಂಗು, ಮಚ್ಚುಗಳನ್ನು ನೋಡಿ, ನೋಡಿ ಬೇಸತ್ತಿರುವವರಿಗೆ ಇದು ರಿಲೀಫ್ ನೀಡಬಹುದು.

'ಹೂಗುಚ್ಚ'ಗಳೊಂದಿಗೆ ಹೊಸ ವರ್ಷಕ್ಕೆ ಸ್ವಾಗತ

'ಮುಂಗಾರು ಮಳೆ'ಯ ಆರ್ಭಟದಿಂದ ಪ್ರಾರಂಭವಾದ 2007 ಹಲವಾರು ವಿಸ್ಮಯ ಮತ್ತು ಅಚ್ಚರಿಗಳಿಂದ ಕೂಡಿತ್ತು ಮಾತ್ರವಲ್ಲ ಚಿತ್ರರಂಗದ ಪಾಲಿಗೆ ನಿಜವಾಗಲೂ 'ಸುವರ್ಣ' ವರ್ಷವಾಗಿತ್ತೆಂದರೆ ತಪ್ಪಾಗಲಾರದು.

ಮೊದಲನೆಯದಾಗಿ, ಎಂದೂ ನೂರು ಚಿತ್ರಗಳ ಗಡಿ ದಾಟದ ಕನ್ನಡ ಚಿತ್ರರಂಗದಲ್ಲಿ ಈ ವರ್ಷ ಇನ್ನೂರು ಚಿತ್ರಗಳು ಸೆಟ್ಟೇರಿದವು. ಈ ಎಲ್ಲಾ ಚಿತ್ರಗಳು







ಬಿಡುಗಡೆಯಾಗಲಾರವು. ಆದರೆ ಅವುಗಳಿಂದ ಬಹಳಷ್ಟು ಜನರಿಗೆ ಉದ್ಯೋಗ ಸಿಕ್ಕಿದ್ದು, ಹಲವು ಹೊಸ ನಟನಟಿಯರಿಗೆ ಅವಕಾಶ ಸಿಕ್ಕಿದ್ದು ಮಾತ್ರ ನಿಜ. ಇದೆಲ್ಲ ಸಾಧ್ಯವಾಗಿದ್ದು ಬೆಂಗಳೂರಿನಲ್ಲಿ ರಿಯಲ್ ಎಸ್ಟೇಟ್ ಭೂಮಿಯ ಬೆಲೆ ಗಗನಕ್ಕೇರಿದ್ದರಿಂದ ಎಂಬುದೂ ಅಷ್ಟೇ ನಿಜ ಕೂಡ!

ಕಳೆದ ವರ್ಷ ಡಿಸೆಂಬರ್ 29ರಂದು ಬಿಡುಗಡೆಯಾದ 'ಮುಂಗಾರು ಮಳೆ' ಮತ್ತು ಅದಾದ ನಂತರ ಬಂದ 'ದುನಿಯಾ' ಹಾಗು 'ಚೆಲುವಿನ ಚಿತ್ತಾರ' ಎಂಬ ಮೂರು ಚಿತ್ರಗಳ ಬಾಕ್ಸ್ ಆಫೀಸ್ ಯಶಸ್ಸು ಕಂಡು ಕನ್ನಡ ಚಿತ್ರರಂಗದತ್ತ ಪರಭಾಷೆಯ ನಿರ್ಮಾಪಕರು ಹಣದ ಥೈಲಿ ಹಿಡಿದುಕೊಂಡು ಬರುವಂತಾಗಿದೆ. ಈ ಮೂರು ಚಿತ್ರಗಳ ಬಾಕ್ಸ್ ಆಫೀಸ್ ಗಳಿಕೆಯನ್ನೇ ಆಧಾರವಾಗಿಟ್ಟು ಹೇಳುವುದಾದರೆ ಇವುಗಳ ಒಟ್ಟು ಲಾಭ ನೂರು ಕೋಟಿರೂಪಾಯಿಗೂ ಮೀರಿದೆ. ಇದು ಕನ್ನಡ ಚಿತ್ರರಂಗದಲ್ಲಿ ಹಿಂದೆಂದೂ ಕೇಳರಿಯದಂತಹ ಮ್ಯಾಜಿಕ್ ಫಿಗರ್! ('ಮುಂಗಾರು ಮಳೆ' –50 ಕೋಟಿ, 'ದುನಿಯಾ'-35 ಕೋಟಿ, 'ಚೆಲುವಿನ ಚಿತ್ತಾರ' - 25 ಕೋಟಿ) ವಾಸ್ತವವಾಗಿ ಈ ಮ್ಯಾಜಿಕ್ ಫಿಗರ್ರೇ ಇನ್ನೂರು ಚಿತ್ರಗಳ ನಿರ್ಮಾಣಕ್ಕೆ ಸ್ಫೂರ್ತಿ.



ಈ ವರ್ಷದ ಇನ್ನೊಂದು ವಿಶೇಷತೆ ಹಳಬರ ಚಿತ್ರಗಳೆಲ್ಲಾ ಅಡ್ಡಡ್ಡ ಮಲಗಿಬಿಟ್ಟದ್ದು ಮತ್ತು ಎಲ್ಲೆಲ್ಲೂ ಹೊಸಬರೇ ಮಿಂಚಿದ್ದು. ಮೊನ್ನೆಮೊನ್ನಿನ ತನಕ ಹಿಟ್ ಹೀರೋಗಳೆನಿಸಿಕೊಂಡಿದ್ದ ವಿಷ್ಣುವರ್ಧನ್, ಉಪೇಂದ್ರ, ಶಿವರಾಜ್ ಕುಮಾರ್ ಮತ್ತು ರವಿಚಂದ್ರನ್ ಚಿತ್ರಗಳೆಲ್ಲವೂ ಮುಗ್ಗರಿಸಿದವು. ಅಷ್ಟೇ ಅಲ್ಲ, ಇವರೆಲ್ಲರ ಚಿತ್ರಗಳನ್ನು ನಿರ್ಮಿಸುತ್ತಿದ್ದ ನಿರ್ಮಾಪಕರೆಲ್ಲ ಇವರನ್ನು ಬಿಟ್ಟು ಹೊಸ ಹುಡುಗರ ಹಿಂದೆ ಓಡಾಡಿದ್ದು! ವಿಜಯ್ ಮತ್ತು ಗಣೇಶ್ ಕಾಲ್ ಶೀಟ್ ಪಡೆದು ಹಣ ಮಾಡಿದ ನಿರ್ದೇಶಕ ಎಸ್. ನಾರಾಯಣ್ ಹೀಗೆ ಪಕ್ಷಾಂತರ ಮಾಡಿದ ನಿರ್ದೇಶಕರಲ್ಲಿ ಮೊದಲಿಗರು.



ಇಂತಹ ಸ್ಥಿತಿಯಲ್ಲಿ ವಿಷ್ಣು ನಟಿಸಿರುವ 'ಈ ಬಂಧನ' ಬಾಕ್ಸಾಫೀಸಿನಲ್ಲಿ ಗೆದ್ದರೆ ಮಾತ್ರ ವಿಷ್ಣು ಮತ್ತೊಮ್ಮೆ ಎದ್ದು ನಿಂತಂತಾಗುತ್ತದೆ. ಹಾಗೆಯೇ ಶಿವರಾಜ್‌ಕುಮಾರ್ ನಟಿಸಿರುವ 'ಸತ್ಯ ಇನ್ ಲವ್' ಅವರ ಪಾಲಿಗೆ ನಿರ್ಣಾಯಕವಾಗಲಿದೆ. ಇದನ್ನು ಅರಿತೇ ರವಿಚಂದ್ರನ್ ಈಗ ಸಂಪೂರ್ಣವಾಗಿ 'ಮಂಜಿನ ಹನಿ'ಯಲ್ಲಿ ತೊಯ್ದು ಮಿಂದು ಯಶಸ್ಸಿಗಾಗಿ ಭಗೀರಥ ಪ್ರಯತ್ನ ಮಾಡುತ್ತಿದ್ದಾರೆ. 'ಲವ ಕುಶ' ಚಿತ್ರದಿಂದ ಮತ್ತೆ ಲೈಮ್ ಲೈಟಿಗೆ ಬರಬಹುದೆಂಬ ನಿರೀಕ್ಷೆಯಲ್ಲಿದ್ದ ಉಪೇಂದ್ರ ಈಗ ದಿಕ್ಕು ತೋಚದಂತಾಗಿದ್ದಾರೆ. 2006ರಲ್ಲಿ 'ಮೈ ಆಟೋಗ್ರಾಫ್' ಮೂಲಕ ಮಿಂಚಿದ್ದ ನಾಯಕ ಕಂ ನಿರ್ದೇಶಕ ಸುದೀಪ್ ಈ ಬಾರಿ 'ಶಾಂತಿನಿವಾಸ'ದಿಂದಾಗಿ ಅಶಾಂತ ಸ್ಥಿತಿಯಲ್ಲಿದ್ದಾರೆ. ದರ್ಶನ್ ಅತ್ತ ದರಿ ಇತ್ತ ಪುಲಿ ಎಂಬಂತೆ ಸೋಲು ಮತ್ತು ಗೆಲುವುಗಳೆರಡರ ಮಧ್ಯೆ ಸಿಲುಕಿಕೊಂಡು ತನ್ನ ತನಕ್ಕಾಗಿ ಹಾತೊರೆಯುತ್ತಿದ್ದಾರೆ. ಈ ಮಧ್ಯ ಯಶಸ್ಸು ಗಳಿಸಿದ್ದೆಂದರೆ ಪುನೀತ್ ರಾಜ್‌ಕುಮಾರ್ ಮಾತ್ರ. ಇವರ 'ಮಿಲನ' ಮತ್ತು 'ಅರಸು' ಬಾಕ್ಸಾಫೀಸಿನಲ್ಲಿ ಗೆದ್ದಿವೆ. ಒಟ್ಟಾರೆಯಾಗಿ, ಯುವಕರ ಪ್ರವಾಹದ ಮಧ್ಯೆ ಇನ್ನೊಂದು ನಾಯಕನಟರ ವೃತ್ತಿ ಜೀವನ ಅಲುಗಾಡಿದ್ದು ಇದೇ ಮೊದಲ ಬಾರಿ.

ಈ ವರ್ಷದ ವಿಸ್ಮಯಗಳಲ್ಲಿ ಗಣೇಶನ ಯಶಸ್ಸು ಒಂದು. ಕಳೆದ ಹದಿಮೂರು ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲೇ ನಾಯಕ ನಟನ ತಮ್ಮನಾಗಿಯೋ ಅಥವಾ ಐದಾರು ಜನ ಬಫೂನುಗಳಲ್ಲಿ ಒಬ್ಬನಾಗಿಯೋ ನಟಿಸುತ್ತಿದ್ದ ಗಣೇಶ್ ಎಂಬ ಸೈಡ್ ಆಕ್ಟರ್ ಈ ವರ್ಷ ಸೂಪರ್‌ಸ್ಟಾರ್ ಆಗಿ ಉದಯಿಸಿದ್ದು ಒಂದು ಅದ್ಭುತವೇ ಸರಿ. ಅತ್ತ ಚೆಂದವಾದ ಮೈಕಟ್ಟೂ ಹೊಂದಿರದ, ಇತ್ತ ಅಷ್ಟು ಸುಂದರನೂ ಅಲ್ಲದ ಈತ ಅದು ಹೇಗೆ ಅಷ್ಟು ಜನಪ್ರಿಯನಾಗಿದ್ದಾನೆ ಎಂಬುದೇ ಒಂದು ಒಗಟಾಗಿದೆ.

ಈತ ನಟಿಸಿರುವ 'ಮುಂಗಾರು ಮಳೆ', 'ಹುಡುಗಾಟ', 'ಚೆಲುವಿನ ಚಿತ್ತಾರ' ಮತ್ತು 'ಕೃಷ್ಣ' ನೂರು ದಿನಗಳ ಪ್ರದರ್ಶನ ಕಂಡಿರುವುದರಿಂದ ಗಣೇಶ್ ಈಗ ಬಾಕ್ಸ್ ಆಫೀಸಿನ ಅನಭಿಷಕ್ತ ದೊರೆಯಾಗಿ ವಿಜೃಂಭಿಸುತ್ತಿದ್ದಾನೆ. ಸದ್ಯದ ಮಟ್ಟಿಗೆ ಈತ ಮುಟ್ಟಿದ್ದೆಲ್ಲಾ ಚಿನ್ನವಾಗುತ್ತಿದೆ. ಒಂದೆರಡು ವಾರದಲ್ಲಿ ಬಿಡುಗಡೆಯಾಗಲಿರುವ 'ಗಾಳಿಪಟ' ಕೂಡ ಈತನ ಕರಿಷ್ಮಾದಿಂದಲೇ ಹಿಟ್ ಆಗುವ ಸಾಧ್ಯತೆ ಇದೆ.

ಗಣೇಶ್‌ನ ನಂತರ ನಿಸ್ಸಂಕೋಚವಾಗಿ ದ್ವಿತೀಯ ಸ್ಥಾನದಲ್ಲಿ 'ದುನಿಯಾ' ವಿಜಯ್ ಮತ್ತು ಪುನೀತ್ ರಾಜ್‌ಕುಮಾರ್ ಕಂಗೊಳಿಸುತ್ತಿದ್ದಾರೆ. ನಾಯಕಿಯರಲ್ಲಿ ರಮ್ಯಾ ರಕ್ಷಿತಾ, ರಾಧಿಕಾ ಎಂಬ ಕನ್ನಡತಿಯರನ್ನು ನಿವಾಳಿಸಿ ತೆಗೆದಂತೆ ಪೂಜಾ ಗಾಂಧಿ ಮೆರೆಯುತ್ತಿದ್ದಾಳೆ.

ಇಡೀ ವರ್ಷ ಎಲ್ಲಿ ನೋಡಿದರಲ್ಲಿ 'ಮುಂಗಾರು ಮಳೆ'ಯ ಕಲಾವಿದರು, ತಂತ್ರಜ್ಞರೇ ಮೆರೆದರು. ದೂರದ ಅಮೆರಿಕದಲ್ಲಿದ್ದು ಟೈಮ್ ಪಾಸಿಗಾಗಿ ಸಂಗೀತ ನಿರ್ದೇಶನ ಮಾಡುತ್ತಿದ್ದ ಮನೋಮೂರ್ತಿ ಈಗ ಗಾಂಧಿನಗರದಲ್ಲೇ ಖಾಯಂ ಆಗಿ ಉಳಿಯುವಷ್ಟು ಬಿಜಿಯಾಗಿದ್ದಾರೆ. ಅಷ್ಟೇ ಅಲ್ಲ, ಮನೋಮೂರ್ತಿ-ಜಯಂತ್ ಕಾಯ್ಕಿಣಿ ಜೋಡಿಯ ಹಾಡು ಮತ್ತು ಸಾಹಿತ್ಯ ಹೊಸ ಮೆಲೋಡಿಯನ್ನು ಸೃಷ್ಟಿಸಿದೆ. 'ಮುಂಗಾರು ಮಳೆ'ಯ ನಂತರ 'ಗೆಳೆಯ', ವಿಷ್ಣು ನಟಿಸಿದ 'ಈ ಬಂಧನ', ಪುನೀತ್ ನಟನೆಯ 'ಮಿಲನ', ಗಣೇಶ್ ನಟನೆಯ 'ಚೆಲುವಿನ ಚಿತ್ತಾರ'... ಇವೆಲ್ಲವೂ ಮನೋಮೂರ್ತಿಗೆ ಹೀರೋಗಳಿಗಿಂತ ಸ್ಟಾರ್ ವ್ಯಾಲ್ಯೂ ತಂದು ಕೊಟ್ಟಿವೆ. ಹಾಗೆಯೇ ಜಯಂತ್ ಕಾಯ್ಕಿಣಿಗೆ...

ಇದಕ್ಕೆಲ್ಲಾ ಪೂರಕವೋ ಎಂಬಂತೆ ಕಳೆದ ವರ್ಷ ಮ್ಯಾಜಿಕ್ ಮಾಡಿದ್ದ ಯೋಗರಾಜ್ ಭಟ್ ಮತ್ತು ಸೂರಿ ಎಂಬ ಇಬ್ಬರು ನಿರ್ದೇಶಕರು ಈಗ ಎರಡು ಹೊಸ 'ಹೂಗುಚ್ಛ'ಗಳೊಂದಿಗೆ ಹೊಸ ವರ್ಷವನ್ನು ಸ್ವಾಗತಿಸಲು ತಯಾರಾಗಿ ನಿಂತಿದ್ದಾರೆ.

2007ರಲ್ಲಿ ನಡೆದ ವಿಸ್ಮಯಗಳು, ಅಚ್ಚರಿಗಳು 2008ರಲ್ಲೂ ಮರುಕಳಿಸಲಿ ಎಂಬ ಆಶಾವಾದ ಎಲ್ಲೆಡೆ ಕಾಣಿಸುತ್ತಿದೆ. ಚಿತ್ರರಂಗ ಎಂಬ ಮಾಯಾಲೋಕದಲ್ಲಿ ವಿಸ್ಮಯ ಮತ್ತು ಅಚ್ಚರಿಗಳೇ ಮುಖ್ಯವಾದ ಬಂಡವಾಳ ತಾನೆ?

■ ಶ್ರೇಷ್ಠ

ಕಟ್ಟಕೊನೆಯಲ್ಲಿ ನಾವು ಶತ್ರುಗಳ ಶಬ್ದಗಳನ್ನಲ್ಲ, ಮಿತ್ರರ ಮೌನವನ್ನು ನೆನಪಿಟ್ಟುಕೊಂಡಿರುತ್ತೇವೆ - ಮಾರ್ಟಿನ್ ಲೂಥರ್ ಕಿಂಗ್

R B P LANKESH, Kannada Weekly Price Rs. 10/- 2-1-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B...




'ಪೋಲಿ' ಚಿತ್ರದಲ್ಲಿ ಪುನೀತ್

"ಇಷ್ಟು ದಿನ 'ವೀರಕನ್ನಡಿಗ', 'ಅರಸು', 'ಅಭಿ' 'ಆಕಾಶ್', 'ಅಜಯ್', 'ಮೌರ್ಯ'ನಂತೆ ಸಭ್ಯಸ್ಥನಾಗಿದ್ದ 'ಅಪ್ಪು' ಈಗ 'ಪೋಲಿ'ಯಾಗಲು ರೆಡಿಯಾಗುತ್ತಿದ್ದಾರೆ. ಈ 'ಪೋಲಿ' ಚಿತ್ರದ ಸೂತ್ರಧಾರ ಪ್ರೇಮ್.

ಹೌದು, ಪುನೀತ್ ರಾಜ್‌ಕುಮಾರ್ ನಟಿಸಲಿರುವ, ಪ್ರೇಮ್ ನಿರ್ದೇಶಿಸಲಿರುವ 'ಪೋಲಿ' ಚಿತ್ರ ಮುಂದಿನ ತಿಂಗಳು ಸೆಟ್ಟೇರುವ ಸಿದ್ಧತೆಯಲ್ಲಿದೆ. 'ಮರ್ಮ' ಚಿತ್ರದ ಸೋಲಿನಿಂದ ಕಂಗಾಲಾಗಿ ನಿರ್ಮಾಣಕ್ಕೆ ಅಲ್ಪವಿರಾಮ ಹಾಕಿದ್ದ ಸುರೇಶ್ ಗೌಡ್ರು ಈಗ ತಾನೇ 'ಗಜ' ನಿರ್ಮಿಸಿ ಬಿಡುಗಡೆಗಾಗಿ ಕಾದಿದ್ದಾರೆ. 'ಗಜ' ಹೊರಬರುತ್ತಿದ್ದಂತೆ 'ಪೋಲಿ'ಯನ್ನು ಶುರು ಮಾಡುವ ಪ್ಲಾನು ಗೌಡ್ರದ್ದು.

ಅಂದಹಾಗೆ, ಈ ಪ್ರೇಮ್ ಸೂಪರ್ ಸ್ಟಾರ್ ರಜನಿಕಾಂತ್‌ರವರನ್ನು ಹಾಕಿಕೊಂಡು ನಿರ್ದೇಶಿಸಬೇಕಿದ್ದ ಸಿನಿಮಾದ ಸುದ್ದಿ ಅದ್ಯಾಕೋ ಮಂಗಮಾಯವಾಗಿದೆಯಲ್ಲಾ?!



ಭಾವನಾಳ ಬಯಲಾಟ ಸೂರಿಯ ಸೊರಗಾಟ

ತಾನು ನಟಿಸಿದ ಎಲ್ಲಾ ಸಿನಿಮಾ ಸಮಾರಂಭಗಳಿಗೆ, ಪತ್ರಿಕಾಗೋಷ್ಠಿಗಳಿಗೆ ತಪ್ಪದೇ ಹಾಜರಾಗಿ ತನ್ನ 'ಬಿಚ್ಚು' ಮನಸ್ಸಿನ ಮಾತಿನಿಂದ ಸದಾ ಸುದ್ದಿಗೆ ಗ್ರಾಸವಾಗುವ ಭಾವನಾ ಮೊನ್ನೆ ನಡೆದ 'ಇಂತಿ ನಿನ್ನ ಪ್ರೀತಿಯ' ಚಿತ್ರದ ಪತ್ರಿಕಾಗೋಷ್ಠಿಗೂ ಬಂದಿದ್ದಳು.

ಅಂದು ಭಾವನಾಳನ್ನು ಫೋಟೋ ಜರ್ನಲಿಸ್ಟುಗಳೆಲ್ಲಾ ಸುತ್ತುವರೆದಿದ್ದರು. ಪೊಲೀಸರು ಎನ್‌ಕೌಂಟರ್‌ಗಳಲ್ಲಿ ತಮ್ಮ ಆಯುಧಗಳನ್ನು ಪ್ರಯೋಗಿಸುವಂತೆ ಅವತ್ತು ಈ ಫೋಟೋಗ್ರಾಫರ್‌ಗಳು ತಮ್ಮ ಕ್ಯಾಮೆರಾಗಳನ್ನು ಆಕೆಯ ಮೇಲೆ ಪ್ರಯೋಗಿಸಿದರು. ಆದರೆ ಆಕೆ ಹೆದರದೆ ಅರ್ಧ ಗಂಟೆಯ ಕಾಲ ವಿವಿಧ ಭಂಗಿಗಳಲ್ಲಿ ಪೋಸು ನೀಡುತ್ತಿದ್ದರೆ, ಇವರೆಲ್ಲ ಲಕಲಕಾ ಎಂದು ಕ್ಲಿಕ್ಕಿಸುತ್ತಿದ್ದರು! ಅವತ್ತು ಆಕೆ ಬಾಲಿವುಡ್ಡಿನ ಬಿಚ್ಚಮ್ಮ ಮಲ್ಲಿಕಾ ಶೆರಾವತ್‌ಳನ್ನೂ ನಾಚಿಸುವಂತೆ ಬಟ್ಟೆ ತೊಟ್ಟದ್ದೂ ಈ ಎನ್‌ಕೌಂಟರ್‌ಗೆ ಕಾರಣವಾಗಿತ್ತು ಎಂದು ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ ಅನಿಸುತ್ತೆ!

ಇಂತಹ ಭಾವನಾ ಮಾತ್ರ ಆಗಾಗ "ಚಿತ್ರರಂಗದಲ್ಲಿ ಎಲ್ಲದಕ್ಕೂ ರೆಡಿಯಿರಬೇಕು. ಇಲ್ಲಿ ಎಕ್ಸ್‌ಪೋಸ್ ಮಾಡಲಿಲ್ಲವೆಂದರೆ ಅವಕಾಶಗಳು ಸಿಗುವುದಿಲ್ಲ, ಚಿತ್ರರಂಗದಲ್ಲಿ ನಾಯಕಿಯರ ಗೋಳು ಕೇಳುವವರು ಮಾತ್ರ ಯಾರೂ ಇಲ್ಲ" ಎಂಬಂತಹ ವೈರಾಗ್ಯದ ಮಾತುಗಳನ್ನೇಕೆ ಆಡುತ್ತಾಳೆ ಎಂಬ ಪ್ರಶ್ನೆ ಅಲ್ಲಿ ನೆರೆದಿದ್ದವರಿಗೆ ಕಾಡಿದ್ದರೆ ಅಚ್ಚರಿಯಿಲ್ಲ.

ಭಾವನಾಳಂತ ನಟಿಯರು ಈ ಪರಿ ಎಕ್ಸ್‌ಪೋಸ್ ಮಾಡುವ ತನಕ ಎಕ್ಸ್‌ಪೋಸ್ ಮಾಡಿಸುವವರಿಗೆ ಗಾಂಧಿನಗರದಲ್ಲಿ ಬರವೇ?

ಅದೆಲ್ಲ ಇರಲಿ, ಅಂದಿನ ಭಾವನಾಳ ಈ ಬಯಲಾಟದಿಂದಾಗಿ ತನ್ನತ್ತ ಯಾರೂ ಗಮನ ಹರಿಸುತ್ತಿಲ್ಲವಲ್ಲಾ ಎಂದು ಚಿತ್ರದ ನಿರ್ದೇಶಕ ಸೂರಿ 'ಸೊರಗು'ತ್ತಿರುವಂತಿತ್ತು!



'ಇಂತಿ ನಿನ್ನ ಪ್ರೀತಿಯ' ಚಿತ್ರತಂಡ ತನ್ನ ಒಗ್ಗಟ್ಟನ್ನು ಜಗತ್ತಿಗೆ ತೋರಿಸಲು ಮೊನ್ನಿನ ಪತ್ರಿಕಾಗೋಷ್ಠಿಗೆ ಚಿತ್ರದ ನಟ ನಟಿಯರು, ತಂತ್ರಜ್ಞರು, ಎಲ್ಲರೂ ಶಾಲಾ ಮಕ್ಕಳಂತೆ ಕಪ್ಪು ಶರ್ಟು ಮತ್ತು ನೀಲಿ ಜೀನ್ಸ್ ತೊಟ್ಟು ಹಾಜರಾಗಿದ್ದು ತಮಾಷೆಯಾಗಿತ್ತು, ಅವರ ಒಗ್ಗಟ್ಟು ಇನ್ನೊಂದು ರೀತಿಯಲ್ಲೂ ವ್ಯಕ್ತವಾಯಿತು: ಚಿತ್ರದ ತಂಡದವರೆಲ್ಲ ನಿರ್ದೇಶಕ ಸೂರಿಯನ್ನು ಹಾಡಿ ಹೊಗಳಿದರು.

ಅದೇ ಗೋಷ್ಠಿಯಲ್ಲಿ ಆ ಚಿತ್ರಕ್ಕೆ ಸಂಬಂಧ ಪಟ್ಟ ಕೆಲವು ದೃಶ್ಯಗಳನ್ನೂ ಪ್ರದರ್ಶಿಸಲಾಯಿತು. ಅವುಗಳನ್ನು ನೋಡಿದಾಗ 'ದುನಿಯಾ' ಖ್ಯಾತಿಯ ಸೂರಿ ತುಂಬಾ ಚೆನ್ನಾಗಿ ಇದನ್ನು ನಿರ್ದೇಶಿಸಿದ್ದಾರೆ ಅನಿಸಿತು.

ಈ ಚಿತ್ರವನ್ನು ಯೋಗರಾಜ್ ಭಟ್, ಸೂರಿ ಮತ್ತು ಸುಬ್ರಮಣ್ಯ ಈ ಮೂವರು ಸೇರಿ ನಿರ್ಮಿಸಿದ್ದಾರೆ. ಈ ಚಿತ್ರದಲ್ಲಿ ಸೋನು ಎಂಬ ಹೊಸ ಹುಡುಗಿಯನ್ನು ಪರಿಚಯಿಸುತ್ತಿದ... ಈಗಾಗಲೇ 'ಗಿರಿ' ಎಂಬ ಫ್ಲಾಪ್ ಚಿತ್ರದಲ್ಲಿ ನಟಿಸಿದ್ದ ಶ್ರೀನಗರ ಕಿಟ್ಟಿ ಎಂಬಾತನನ್ನು ರೀಲಾಂಚ್ ಮಾಡುತ್ತಿ... ಗ್ಲಾಮರ್ ಗಾಗಿ ಭಾವನ ಇದ್ದರೆ, ನಟನೆಗೆ ರಂಗಾಯಣ ರಘು ಇದ್ದಾರೆ. ಸಾಧು ಕೋಕಿಲಾ ಸಂಗೀತ ನಿ... ಸೂರಿಯ ಫೇವರಿಟ್ ಛಾಯಾಗ್ರಾಹಕ ಸತ್ಯ ಹೆಗಡೆ ಈ ಚಿತ್ರದಲ್ಲೂ ತನ್ನ ಕೈಚಳಕ ತೋರಿಸಿದ್ದಾರೆ.

ಸದ್ಯದಲ್ಲೇ ಸೂರಿಯ ಗುರು 'ಮುಂಗಾರು ಮಳೆ'ಯ ಯೋಗರಾಜ್ ಭಟ್ಟರ 'ಗಾಳಿಪಟ' ಬಿಡುಗಡೆಯ... ಆದಾದ ನಂತರ ಶಿಷ್ಯನ 'ಇತಿ...' ತೆರೆಕಾಣಲಿದೆ. ಸದ್ಯಕ್ಕೆ ಗಾಂಧಿನಗರದಲ್ಲಿ ಕೇಳಿ ಬರುತ್ತಿರುವ ಮಾತು ... ಈ ಬಾರಿ ಶಿಷ್ಯನೇ ಗುರುವನ್ನು ಓವರ್ ಟೇಕ್ ಮಾಡಲಿದ್ದಾನೆ ಎಂಬುದು.



ಗುರುವನ್ನೇ ಶಿಷ್ಯ ಓವರ್‌ಟೇಕ್ ಮಾಡುತ್ತಾನೆಯೇ?





ಸಾಧಾರಣ ಸಾಧನೆಯ ಸಾಧು!

ಎರಡು ಚಿತ್ರಗಳ ಸೋಲಿನಿಂದ ನಿರ್ದೇಶಕ ಸಾಧು ಕೋಕಿಲಾ ಧೈರ್ಯ ಕಳೆದುಕೊಂಡಿಲ್ಲ, ಯುವ ನಾಯಕ ಪ್ರಜ್ವಲ್ ನಟಿಸುತ್ತಿರುವ 'ಗಂಗೆ ಬಾರೇ ತುಂಗೆ ಬಾರೇ' ಚಿತ್ರಕ್ಕೆ ನಿರ್ಮಾಪಕ ಭೋಜರಾಜ ರೈ ಅವರಿಂದ ಎರಡು ಕೋಟಿ ರೂಪಾಯಿ ಬಂಡವಾಳವನ್ನು ಹೂಡಿಸಿದ್ದಾರೆ. "ಈ ಚಿತ್ರ ಖಂಡಿತ ಸಕ್ಸಸ್ ಆಗುತ್ತದೆ" ಎಂದು ಈ ಹಿಂದಿನಂತೆ ಹೇಳಲೂ ಸಾಧು ಕೋಕಿಲಾ ಮರೆಯಲಿಲ್ಲ.

ವಿಷಯ ಅದಲ್ಲ, ಸಾಧು ನಿರ್ದೇಶಿಸಿದ ಚಿತ್ರಗಳು ಬಾಕ್ಸಾಫೀಸಿನಲ್ಲಿ ಜಯಭೇರಿ ಗಳಿಸದಿದ್ದರೂ ಅವರ ಬೇಡಿಕೆಗೆ ಏನೂ ಕುತ್ತಾಗಿಲ್ಲ, ಬರುವ ಹೊಸ ವರ್ಷದಲ್ಲಿ ಒಂದೆಡೆ ರಾಕ್‌ಲೈನ್ ವೆಂಕಟೇಶ್‌ಗಾಗಿ ಅವರು ವಿಷ್ಣುವರ್ಧನ್ ಚಿತ್ರವೊಂದನ್ನು ನಿರ್ದೇಶಿಸಲಿದ್ದಾರಲ್ಲದೆ ಮತ್ತೊಂದೆಡೆ 'ಏಕದಂತ' ಚಿತ್ರದ ನಿರ್ಮಾಪಕರಿಗಾಗಿ ಸುದೀಪ್ ನಟನೆಯ ಮತ್ತೊಂದು ಚಿತ್ರವನ್ನು ನಿರ್ದೇಶಿಸಲಿದ್ದಾರೆ. ಅಕಸ್ಮಾತ್ 'ಗಂಗೆ ತುಂಗೆ' ಯಶಸ್ಸು ಕಂಡರೆ 2008ರಲ್ಲಿ ಇನ್ನಷ್ಟು ಚಿತ್ರಗಳು ಇವರ ಪಾಲಿಗೆ ಬರಬಹುದು. ಹೀಗಾಗಿ ಈ ಸಾಧು 2008ರಲ್ಲಿ ತನ್ನ ಉಗ್ರ ಪ್ರತಾಪವನ್ನು ತೋರಿಸುವ ಸಾಧ್ಯತೆಯಿದೆ.



ರೀರೀಮೇಕ್ ಎಂಬ 'ಈ ಬಂಧನ'

ಪಂತುಲುರವರು ಕನ್ನಡದಲ್ಲಿ ಮಾಡಿದ್ದ 'ಸ್ಕೂಲ್ ಮಾಸ್ಟರ್' ಇತ್ತೀಚೆಗೆ ಹಿಂದಿಯಲ್ಲಿ 'ಬಾಗ್ಬನ್' ಎಂದು ರೀಮೇಕ್ ಆಗಿತ್ತು, ಈಗ ಆ ರೀಮೇಕ್ ಚಿತ್ರವನ್ನು ನಿರ್ದೇಶಕಿ ವಿಜಯಲಕ್ಷ್ಮಿ ಸಿಂಗ್ ಮತ್ತೆ ಕನ್ನಡದಲ್ಲಿ 'ಈ ಬಂಧನ' ಎಂದು ರೀರೀಮೇಕ್ ಮಾಡಿದ್ದಾರೆ. ವಿರಾಮದ ಮೊದಲು ಅಪ್ಪ-ಅಮ್ಮ ಮಕ್ಕಳಿಗೆ ಪ್ರೀತಿಯನ್ನು ಉಣಿಸುತ್ತಾರೆ. ವಿರಾಮದ ನಂತರ ಅದೇ ಮಕ್ಕಳು ಅಪ್ಪ-ಅಮ್ಮಂದಿರನ್ನು ನಿರ್ಲಕ್ಷಿಸಿ ಅವರ ಕಣ್ಣಲ್ಲಿ ಕಣ್ಣೀರು ತರಿಸುತ್ತಾರೆ. ಮಕ್ಕಳನ್ನು ತಿದ್ದಲು, ಅವರಿಗೆ ಜೀವನದ ಮೌಲ್ಯಗಳ ಬಗ್ಗೆ ತಿಳಿಹೇಳಲು ಕೊನೆಗೊಂದು ಪುಟ್ಟ ಭಾಷಣ ಮತ್ತು ಸಂದೇಶ. ಅಲ್ಲಿಗೆ ಚಿತ್ರ ಖತಂ. ಚಿತ್ರ ಮುಗಿಯುವಷ್ಟರಲ್ಲಿ ಪ್ರೇಕ್ಷಕರ ಕಣ್ಣಂಚಿನಲ್ಲೂ ನೀರಿನ ಹನಿ...

ಚಿತ್ರದಲ್ಲಿ ತಮಾಷೆ, ಸೆಂಟಿಮೆಂಟ್, ಜೀವನದ ಪಾಠ, ಕಣ್ಣೀರು-ಪನ್ನೀರು ಎಲ್ಲವೂ ಹಿತಮಿತವಾಗಿ ಬೆರೆತಿದೆ. ಹೀಗಾಗಿ ಕುಟುಂಬದ ಸದಸ್ಯರೆಲ್ಲರೂ ಒಟ್ಟಾಗಿ ಕುಳಿತು ನೋಡಲು ಈ ಚಿತ್ರ ಯೋಗ್ಯವಾಗಿದೆ. ವಿಷ್ಣು-ಜಯಪ್ರದಾ ಜೋಡಿ ನಿಜಕ್ಕೂ ತಮ್ಮ ಅಭಿನಯದಿಂದ ಪ್ರೇಕ್ಷಕರನ್ನು ಮೋಡಿ ಮಾಡುತ್ತದೆ. ದರ್ಶನ್-ಜೆನ್ನಿಫರ್ ಜೋಡಿ ಚಪ್ಪಾಳೆ ಗಿಟ್ಟಿಸುತ್ತದೆ. ಅನಂತ್-ತಾರಾ ಜೋಡಿ ಎಲ್ಲರನ್ನೂ ನಗಿಸುತ್ತದೆ. ತರುಣ್-ಶರ್ಮಿಳಾ ಜೋಡಿ ಹೊಸ ಪೀಳಿಗೆಯವರನ್ನು ಆಕರ್ಷಿಸುತ್ತದೆ. ಮನೋಮೂರ್ತಿಯ ಎರಡು ಹಾಡುಗಳೂ ಮತ್ತೆ ಮತ್ತೆ ಗುನುಗುವಂತಿದೆ.

'ಸ್ಕೂಲ್ ಮಾಸ್ಟರ್' ಅನ್ನು ನೋಡಿರದಿದ್ದ ಹಳೆ ತಲೆಮಾರಿನವರು, 'ಬಾಗ್ಬನ್' ನೋಡಿರದಿದ್ದ ಹೊಸ ತಲೆಮಾರಿನವರು ಇದನ್ನು ನೋಡಿ ಎಂಜಾಯ್ ಮಾಡಬಹುದು.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 266764...
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Indu...